ಬುಧವಾರ, ಫೆಬ್ರುವರಿ 1, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 32 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ಹೆಚ್ಚು ಕಾಲ ಬಾಳುವಂಥ ಬ್ಯಾಟರಿಗಳ ಸಂಶೋಧನೆ ನಡೆದಿದೆ

ತ್ಯಾಜ್ಯ ನೀರು ಸಂಸ್ಕರಿಸಿ ಬಳಕೆ: ತಮಿಳುನಾಡು ಆಕ್ಷೇಪ 3

ಆಳ-ಅಗಲ
ಸಾಕ್ಷ್ಯಚಿತ್ರ ನಿಷೇಧ 'ಪರಂಪರೆ'

'ಪಿ.ಎಂ ಕೇರ್ಸ್ ನಿಧಿ ಸರ್ಕಾರದ್ದಲ್ಲ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,549 ▲	17,662 ▲	₹58,920 (ಬೆಂಗಳೂರು) ▼	₹70,300 (ಬೆಂಗಳೂರು) ▼	81.88 ▼

'ಪಕ್ಷಪಾತ ಮಾಡದ ನಿರ್ಭೀತ ಸರ್ಕಾರ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ನಿರ್ಭೀತವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಖಚಿತ ನಿರ್ಧಾರ ತೆಗೆದುಕೊಳ್ಳುತ್ತಿದೆ. ಪಕ್ಷಪಾತ ಮಾಡದೇ ಎಲ್ಲ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು. 11

ಒಳ ಪುಟಗಳು



ಕಲ್ಯಾಣ ರಥಯಾತ್ರೆಗೆ ಚಾಲನೆ 5

'3ರಂದು ಹಾಸನ ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಅಂತಿಮ' 5

ಉತ್ಸವಕ್ಕಿದೆ ದುಡ್ಡು – ಸರ್ಕಾರಕ್ಕೆ ನಾಚಿಕೆಯಾಗಬೇಕು: ಹೈಕೋರ್ಟ್ ತರಾಟೆ

ಸಮವಸ್ತ್ರಕ್ಕೆ ಕಾಸಿಲ್ಲವೇ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲೆಗಳ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ಮತ್ತು ಶೂ ಒದಗಿಸಲು ಆಗದ ರಾಜ್ಯ ಸರ್ಕಾರಕ್ಕೆ ಉತ್ಸವಗಳನ್ನು ನಡೆಸಲು ಕೋಟ್ಯಂತರ ರೂಪಾಯಿ ಖರ್ಚು ಮಾಡಲು ಮನಸ್ಸಿದೆ. ಆದರೆ, ಮಕ್ಕಳ ಹಕ್ಕು, ಶಿಕ್ಷಣಗಳ ವಿಚಾರದಲ್ಲಿ ತನ್ನ ಸಾಂವಿಧಾನಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಮಾತ್ರ ಆಗುತ್ತಿಲ್ಲ. ಅಧಿಕಾರಿಗಳಿಗಂತೂ ಮಾನ ಮರ್ಯಾದೆ, ಆತ್ಮಸಾಕ್ಷಿ ಯಾವುದೂ ಇಲ್ಲವಾಗಿದೆ. ಸರ್ಕಾರಿ ಶಾಲೆಗಳ ಮಕ್ಕಳ ಬಗ್ಗೆ ಅವರಲ್ಲಿ ಕಿಂಚಿತ್ ಮಾನವೀಯತೆಯೂ ಉಳಿದಿಲ್ಲ. ಈಗಲಾದರೂ ಕಣ್ಣು ತೆರೆದು ಸಮವಸ್ತ್ರ ಒದಗಿಸಲಿ...'

'ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರ, ಒಂದು ಜೊತೆ ಶೂ ಮತ್ತು ಎರಡು ಜೊತೆ ಕಾಲುಚೀಲಗಳನ್ನು ನೀಡಬೇಕು ಎಂದು 2018ರ ಆಗಸ್ಟ್‌ನಲ್ಲಿ ಹೈಕೋರ್ಟ್ ಹೊರಡಿಸಿರುವ ಆದೇಶ ಪಾಲನೆಯಾಗಿಲ್ಲ' ಎಂದು ಆರೋಪಿಸಿ ಕೊಪ್ಪಳ ಜಿಲ್ಲೆಯ ಮಾಸ್ತರ್ ಮಂಜುನಾಥ್ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಕಿಡಿಕಾರಿದ ಪರಿಯಿದು.

ವಿಚಾರಣೆ ವೇಳೆ ಸರ್ಕಾರ ಸಲ್ಲಿಸಿದ ಪ್ರಮಾಣ ಪತ್ರದಲ್ಲಿನ ಲೋಪವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿ ಬಿ.ವೀರಪ್ಪ ಅವರು, 'ಸರಿಯಾದ ರೀತಿಯಲ್ಲಿ ಸಮವಸ್ತ್ರವನ್ನು ಯಾಕೆ ನೀಡಿಲ್ಲ? ಸಮವಸ್ತ್ರ, ಶೂ, ಕಾಲುಚೀಲ ವಿತರಣೆ ಹೊಣೆ ಹೊತ್ತಿರುವ ಅಧಿಕಾರಿ ಯಾರು ಎಂಬುದನ್ನು ತಿಳಿಸಿ. ಅವರ ವಿರುದ್ಧ ನ್ಯಾಯಾಂಗ ನಿಂದನೆ ಆರೋಪ ನಿಗದಿ ಮಾಡಲಾಗುತ್ತದೆ' ಎಂದು ಸರ್ಕಾರಿ ವಕೀಲರಿಗೆ ತಾಕೀತು ಮಾಡಿದರು.

11ನೇ ಪುಟ ನೋಡಿ

ಖಾತೆಗೆ ಅಗತ್ಯ ಹಣ ವರ್ಗಾವಣೆ



ವಿಚಾರಣೆ ವೇಳೆ ಕರ್ನಾಟಕ ಸಮಗ್ರ ಶಿಕ್ಷಣ ಯೋಜನೆಯ ನಿರ್ದೇಶಕಿ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿದರು.

'ರಾಜ್ಯ ಸರ್ಕಾರ 2021ರ ಆಗಸ್ಟ್ 28ರಂದು ಹೊರಡಿಸಿರುವ ಆದೇಶದ ಅನುಸಾರ 2021–2022ರ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಒಂದು ಜೊತೆ ಸಮವಸ್ತ್ರ ನೀಡಲಾಗಿದೆ. ಇದರಲ್ಲಿ ಎರಡನೇ ಜೊತೆ ಸಮವಸ್ತ್ರ ಖರೀದಿಸಲು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ಮತ್ತು ಸಂಬಂಧಿಸಿದ ಎಸ್‌ಡಿಎಂಸಿಯ ಖಾತೆಗೆ ಹಣ ವರ್ಗಾಯಿಸಲಾಗಿದೆ. 2019–20ನೇ ಸಾಲಿನಲ್ಲಿ ಒಂದು ಜೊತೆ ಶೂ ಮತ್ತು ಎರಡು ಜೊತೆ ಕಾಲುಚೀಲಗಳನ್ನು ಖರೀದಿಸಲು ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಎಸ್‌ಡಿಎಂಸಿಯ ಜಂಟಿ ಖಾತೆಗೆ ಅಗತ್ಯ ಹಣ ವರ್ಗಾಯಿಸಲಾಗಿದೆ' ಎಂದು ವಿವರಿಸಿದರು.



ಅಧಿಕಾರಿಗಳ ಮಕ್ಕಳು ಕಾರಿನಲ್ಲಿ ಖಾಸಗಿ ಶಾಲೆಗಳಿಗೆ ಹೋಗಿ ಬರುತ್ತಾರೆ. ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ಇಲ್ಲದಿದ್ದರೆ ಆಗುವ ನೋವಿನ ಅರಿವು ಅಧಿಕಾರಿಗಳಿಗೆ ಇದೆಯೇ?

ಬಿ.ವೀರಪ್ಪ, ನ್ಯಾಯಮೂರ್ತಿ

ಜಿಡಿಪಿ: ಇಳಿಕೆ ಅಂದಾಜು

ವಿವೇಕಯುತ ಹಣಕಾಸು ನೀತಿಗೆ ಆರ್ಥಿಕ ಸಮೀಕ್ಷೆ ಸಲಹೆ

ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಶುರುವಾಗುವ ಹೊಸ ಆರ್ಥಿಕ ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಶೇಕಡ 6 ರಿಂದ ಶೇ 6.8ರಷ್ಟು ಇರಲಿದೆ ಎಂದು ಆರ್ಥಿಕ ಸಮೀಕ್ಷೆ ವರದಿಯು ಅಂದಾಜಿಸಿದೆ.



ನಿರ್ಮಲಾ ಸೀತಾರಾಮನ್

ಹಿಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಶೇಕಡ 8.7ರಷ್ಟು ಬೆಳವಣಿಗೆ ಕಂಡಿತ್ತು. ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಇರುವ ನಿರೀಕ್ಷೆ ಇದೆ. ಈ ಎರಡು ವರ್ಷಗಳ ಬೆಳವಣಿಗೆಗೆ ಹೋಲಿಸಿದರೆ ಮುಂದಿನ ವರ್ಷದ ಅಂದಾಜು ಕಡಿಮೆ ಇದೆ. ಹೀಗಿದ್ದರೂ, ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಯು ಭಾರತದ್ದೇ ಆಗಿರಲಿದೆ.

'ಜಗತ್ತನ್ನು ಕಾಡುತ್ತಿರುವ ಅಸಾಮಾನ್ಯ ಸವಾಲುಗಳು ಭಾರತದಿಂದ ಆಗುವ ರಫ್ತುಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ' ಎಂದು ಸಮೀಕ್ಷೆಯು ಅಂದಾಜಿಸಿದೆ. ಸಮೀಕ್ಷೆಯ ವರದಿಯನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಮಂಗಳವಾರ ಮಂಡಿಸಿದರು.

ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ನೇತೃತ್ವದ ತಂಡವು ಸಮೀಕ್ಷೆಯ ವರದಿಯನ್ನು ಸಿದ್ಧಪಡಿಸಿದೆ. '2020ರ ನಂತರದಲ್ಲಿ ಜಾಗತಿಕ ಅರ್ಥ ವ್ಯವಸ್ಥೆಯು ಕನಿಷ್ಠ ಮೂರು ಆಘಾತಗಳನ್ನು ಎದುರಿಸಿದೆ' ಎಂದು ವರದಿ ಹೇಳಿದೆ.

ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಜಾಗತಿಕ ಉತ್ಪಾದನೆ ಕುಸಿಯಿತು, ರಷ್ಯಾ–ಉಕ್ರೇನ್ ಯುದ್ಧವು ಜಗತ್ತಿನಾದ್ಯಂತ ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಯಿತು, ಹಣದುಬ್ಬರ ಪ್ರಮಾಣವನ್ನು ತಗ್ಗಿಸಲು ಅಮೆರಿಕದ ಫೆಡರಲ್ ರಿಸರ್ವ್ ಮುಂದಾಳತ್ವದಲ್ಲಿ ಜಗತ್ತಿನಾದ್ಯಂತ ಕೇಂದ್ರೀಯ ಬ್ಯಾಂಕ್‌ಗಳು ರೆಪೊ ದರ ಹೆಚ್ಚಿಸಿದವು ಎಂದು ಸಮೀಕ್ಷೆಯು ವಿವರಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6.8ರಷ್ಟು ಇರಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಈ ಪ್ರಮಾಣದ ಚಿಲ್ಲರೆ ಹಣದುಬ್ಬರ ದರವು ಖಾಸಗಿ ಹೂಡಿಕೆಗಳು ಹಾಗೂ ಮಾರುಕಟ್ಟೆಯಲ್ಲಿನ ಬೇಡಿಕೆಯನ್ನು ಹಾಳು ಮಾಡುವಂಥದ್ದಲ್ಲ ಎಂದು ಸಮೀಕ್ಷೆಯು ಭರವಸೆ ವ್ಯಕ್ತಪಡಿಸಿದೆ.

ಬೇಡಿಕೆ ಹೆಚ್ಚಾಗಿರುವ ಕಾರಣದಿಂದಾಗಿ ಉದ್ಯೋಗದ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿದೆ. ಹೀಗಿದ್ದರೂ ಇನ್ನಷ್ಟು ಉದ್ಯೋಗ ಸೃಷ್ಟಿಯಾಗಬೇಕು ಎಂದಾದರೆ ಖಾಸಗಿ ಹೂಡಿಕೆಗಳು ಹೆಚ್ಚಾಗುವುದು ಅಗತ್ಯ ಎಂದು ಹೇಳಿದೆ.

ಸಿಗುವುದೇ ಹೆಚ್ಚಿನ ತೆರಿಗೆ ವಿನಾಯಿತಿ?

ನವದೆಹಲಿ (ಪಿಟಿಐ): ಮಧ್ಯಮ ವರ್ಗಕ್ಕೆ ಬಜೆಟ್‌ನಲ್ಲಿ ತೆರಿಗೆ ವಿನಾಯಿತಿಗಳು ಇನ್ನಷ್ಟು ಸಿಗಬಹುದು ಎಂಬ ನಿರೀಕ್ಷೆ ತೀವ್ರವಾಗಿರುವ ಹೊತ್ತಿನಲ್ಲಿ ಆರ್ಥಿಕ ಸಮೀಕ್ಷೆ ವರದಿಯು, 'ಹಣಕಾಸಿನ ವಿವೇಕದ ಹಾದಿಯಲ್ಲಿ ಸಾಗಬೇಕು. ಇದರಿಂದ ಬಡ್ಡಿ ದರಗಳು ಕಡಿಮೆ ಮಟ್ಟದಲ್ಲಿ ಉಳಿದು, ಎಲ್ಲ ವರ್ಗಗಳಿಗೂ ಅನುಕೂಲ ಆಗಲಿದೆ' ಎಂದು ಕೇಂದ್ರ ಸರ್ಕಾರಕ್ಕೆ ಕಿವಿಮಾತು ಹೇಳಿದೆ.

ಆರ್ಥಿಕ ವಿಚಾರಗಳಲ್ಲಿ ವಿವೇಕಯುತವಾಗಿ ನಡೆದುಕೊಳ್ಳುವುದರಿಂದ ಅನಿಶ್ಚಿತ ಸಂದರ್ಭಗಳಲ್ಲಿ ಸೂಕ್ತ ಹಣಕಾಸಿನ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇರುತ್ತದೆ ಎಂದು ಅದು ಹೇಳಿದೆ.

'ಹಣಕಾಸಿನ ವಿಚಾರಗಳಲ್ಲಿ ಶಿಸ್ತು ಪಾಲಿಸಿದರೆ, ಕಡಿಮೆ ಬಡ್ಡಿ ದರದ ಕಾರಣದಿಂದಾಗಿ ಅರ್ಥ ವ್ಯವಸ್ಥೆಯ ಎಲ್ಲ ವರ್ಗಗಳಿಗೂ ಉತ್ತೇಜನ ಸಿಕ್ಕಂತೆ ಆಗುತ್ತದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ. ಹಣಕಾಸಿನ ಶಿಸ್ತು ಪಾಲನೆಯಿಂದ ಶಿಕ್ಷಣ ಸಾಲ, ಗೃಹ ಸಾಲ, ವಾಹನ ಸಾಲ ಮತ್ತು ವಾಣಿಜ್ಯ ಉದ್ದೇಶದ ಸಾಲಗಳ ಬಡ್ಡಿಯನ್ನು ಕಡಿಮೆ ಮಟ್ಟದಲ್ಲಿ ಇರಿಸಲು ಸಾಧ್ಯವಾಗುತ್ತದೆ. ಆಗ ಜನರ ಕೈಯಲ್ಲಿ ಹೆಚ್ಚು ಹಣ ಉಳಿಯುತ್ತದೆ' ಎಂದು ವರದಿಯು ಅಭಿಪ್ರಾಯ ವ್ಯಕ್ತಪಡಿಸಿದೆ.

ಹೀಗಿದ್ದರೂ, ಹೆಚ್ಚಿನ ಬಡ್ಡಿ ದರದ ಪರಿಸ್ಥಿತಿಯು ಹೆಚ್ಚು ಅವಧಿಗೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಕೂಡ ಸಮೀಕ್ಷೆಯ ವರದಿಯು ಸೂಚ್ಯವಾಗಿ ಹೇಳಿದೆ.

ಸಮೀಕ್ಷೆ ಶಿಫಾರಸು

ಆರ್ಥಿಕ ಬೆಳವಣಿಗೆಗೆ ಇನ್ನಷ್ಟು ವೇಗ ನೀಡಲು, ಹೆಚ್ಚಿನ ವೇಗವನ್ನು ಕಾಯ್ದುಕೊಳ್ಳಲು ಪರವಾನಗಿ, ತಪಾಸಣೆ ಹಾಗೂ ನಿಯಮಪಾಲನೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಇಲ್ಲವಾಗಿಸಬೇಕು ಎಂದು ಆರ್ಥಿಕ ಸಮೀಕ್ಷೆಯು ಶಿಫಾರಸು ಮಾಡಿದೆ.

ಬೆಳಿಗ್ಗೆ 11ಕ್ಕೆ ಕೇಂದ್ರ ಬಜೆಟ್ ಮಂಡನೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2023–24ನೆಯ ಸಾಲಿನ ಬಜೆಟ್‌ಅನ್ನು ಲೋಕಸಭೆಯಲ್ಲಿ ಬುಧವಾರ ಬೆಳಿಗ್ಗೆ 11 ಗಂಟೆಗೆ ಮಂಡಿಸಲಿದ್ದಾರೆ.

ಬಜೆಟ್ ನೇರಪ್ರಸಾರ, ತಾಜಾ ಮಾಹಿತಿಗಾಗಿ www.prajavani.net ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಹಾರ ಸುರಕ್ಷತೆಯ ಅಧಿಕಾರಿಗಳ ಪರಿಶೀಲನೆ: 81 ಮಾದರಿಯಲ್ಲಿ 54 ನಕಲಿ

ಜಿಮ್: ನಕಲಿ ಬ್ರ್ಯಾಂಡ್‌ನ ಪೌಡರ್ ಮಾರಾಟ

• ನವ್ಯಾ ಪಾಲ ಕುನ್ನುಮ್ಮಲ್

ಬೆಂಗಳೂರು: ರಾಜ್ಯದ ಜಿಮ್‌ಗಳಲ್ಲಿ ಮಾರಾಟ ಮಾಡುತ್ತಿರುವ ಪೌಷ್ಟಿಕಾಂಶ ಪುಡಿಯ ಮಾದರಿ (ಪ್ರೊಟೀನ್‌ಯುಕ್ತ ಪೌಡರ್) ಅನ್ನು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಅಧಿಕಾರಿಗಳು ಸಂಗ್ರಹಿಸಿ ಪರಿಶೀಲಿಸಿದ್ದು, ಹಲವು ಕಡೆ ನಕಲಿ ಬ್ರ್ಯಾಂಡ್‌ನ ಪೌಡರ್ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದೆ.

ರಾಜ್ಯದಲ್ಲಿ ಒಟ್ಟು 81 ಮಾದರಿಗಳನ್ನು ಸಂಗ್ರಹಿಸಲಾಗಿತ್ತು. ಆ ಪೈಕಿ 54 ನೈಜ ಬ್ರ್ಯಾಂಡ್‌ನ ಪುಡಿಗಳೇ ಅಲ್ಲ ಎಂಬುದು ದೃಢಪಟ್ಟಿದೆ.

ಚಿಕ್ಕಮಗಳೂರಿನ ಜಿಮ್‌ನಲ್ಲಿ ಮಾರುತ್ತಿದ್ದ ಪುಡಿ ಬಳಕೆಗೇ ಯೋಗ್ಯ ಆಗಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೀಗ ಎಚ್ಚೆತ್ತಿರುವ ಸರ್ಕಾರ ಮಾರಾಟ ಹಾಗೂ ತಯಾರಕ ಕೇಂದ್ರಗಳ ಮೇಲೆ ದಾಳಿ ನಡೆಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಫಿಟ್‌ನೆಸ್ ಕಾಪಾಡಿಕೊಳ್ಳುವ ಉತ್ಸಾಹಿಗಳು ಈ ರೀತಿಯ ನಕಲಿ ಪುಡಿ ಸೇವಿಸಿದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಜತೆಗೆ ಸಾವು ಸಂಭವಿಸುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

'ಎಫ್‌ಎಸ್‌ಎಸ್‌ಎಐ ಮಾನದಂಡದ ಪ್ರಕಾರ ಯಾವುದೇ ಲೇಬಲ್ ಹಾಕಿರಲಿಲ್ಲ. ಸಾವಯವ ಉತ್ಪನ್ನ, ಕೊಬ್ಬು ಮುಕ್ತವಾದ ಪುಡಿ ಎಂದು ನಮೂದಿಸಿದ್ದರೂ ಯಾವುದೇ ಅಧಿಕೃತ ಪ್ರಮಾಣಪತ್ರ ಇರಲಿಲ್ಲ. ತಯಾರಿಕೆ ದಿನಾಂಕ, ಅವಧಿ ಮುಗಿಯುವ ದಿನದ ವಿವರವೂ ಇರಲಿಲ್ಲ' ಎಂದು ಪ್ರಾಧಿಕಾರದ ಜಂಟಿ ಆಯುಕ್ತ ಡಾ.ಹರೀಶ್ವರ ಹೇಳಿದರು.

54 ನಕಲಿ ಮಾದರಿಗಳ ಪೈಕಿ ಬೆಂಗಳೂರು ವ್ಯಾಪ್ತಿಯಲ್ಲೇ 17 ನಕಲಿ ಬ್ರ್ಯಾಂಡ್ ಪದಾರ್ಥಗಳು ಸಿಕ್ಕಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 27 ಮಾದರಿ ಸಂಗ್ರಹಿಸಲಾಗಿತ್ತು. 'ಈ ರೀತಿ ನಕಲಿ ಪದಾರ್ಥಗಳ ಮಾರಾಟ ಹಾಗೂ ತಯಾರಕರ ವಿರುದ್ಧ ಕ್ರಮಕ್ಕೆ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ₹ 2 ಲಕ್ಷದ ವರೆಗೆ ದಂಡ ಹಾಕಲು ಅವಕಾಶವಿದೆ. ಗಂಭೀರ ಸ್ವರೂಪದ ಅಪರಾಧ ಪ್ರಕರಣ ಪತ್ತೆಯಾದರೆ ಅವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅವಕಾಶವಿದೆ' ಎಂದೂ ತಿಳಿಸಿದ್ದಾರೆ.

11ನೇ ಪುಟ ನೋಡಿ

ತ್ಯಾಜ್ಯ ನೀರು ಸಂಸ್ಕರಿಸಿ ಬಳಕೆ ತಮಿಳುನಾಡು ಆಕ್ಷೇಪ

ನವದೆಹಲಿ: ಬೆಂಗಳೂರಿನಲ್ಲಿ ಕಾವೇರಿ ನೀರು ಬಳಕೆ ಪ್ರಮಾಣ ಹಾಗೂ ತ್ಯಾಜ್ಯ ನೀರು ಸಂಸ್ಕರಿಸಿ ಜಲಕಾಯಗಳ ಪುನರುಜ್ಜೀವನಕ್ಕೆ ಬಳಸುತ್ತಿರುವ ಬಗ್ಗೆ ಆಕ್ಷೇಪ ಎತ್ತಿರುವ ತಮಿಳುನಾಡು ಸರ್ಕಾರವು, ಸುಪ್ರೀಂ ಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದೆ.

'ಬೆಂಗಳೂರು ಜನರ ದಾಹ ತಣಿಸಲು ಕಾವೇರಿ ನದಿಯ 24 ಟಿಎಂಸಿ ಅಡಿ ನೀರನ್ನು ಕಾವೇರಿ ನದಿ ನೀರು ನ್ಯಾಯಮಂಡಳಿ ಹಂಚಿಕೆ ಮಾಡಿ 2008ರಲ್ಲಿ ಆದೇಶ ಹೊರಡಿಸಿದೆ. ನದಿ, ಕೆರೆ ಇತ್ಯಾದಿಗಳಿಂದ ಮೇಲೆತ್ತಿದ ನೀರಿನಲ್ಲಿ ಶೇ 20ರಷ್ಟನ್ನು ಮಾತ್ರ ಗೃಹ ಬಳಕೆಗೆ ಬಳಸಲಾಗುತ್ತದೆ ಹಾಗೂ ಉಳಿದ ಶೇ 80ರಷ್ಟು ನೀರು ಜಲಾನಯನ ಪ್ರದೇಶಕ್ಕೆ ವಾಪಸು ಬರುತ್ತದೆ ಎಂದು ನ್ಯಾಯಮಂಡಳಿ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಆ ಪ್ರಕಾರ, 18 ಟಿಎಂಸಿ ಅಡಿಯಷ್ಟು ನೀರು ಕಾವೇರಿ ಜಲಾನಯನ ಪ್ರದೇಶಕ್ಕೆ ವಾಪಸ್ ಬರಬೇಕು. ಆದರೆ, ಜಲಮಂಡಳಿ ಹಲವು ಯೋಜನೆಗಳ ಮೂಲಕ ಬೇರೆಡೆಗೆ ಈ ನೀರು ಹರಿಸುತ್ತಿದೆ' ಎಂದು ಆಕ್ಷೇಪಿಸಲಾಗಿದೆ.

'ಜಲಮಂಡಳಿಯು ಪೆನ್ನಾರ್ ನದಿ ಕಣಿವೆಯಲ್ಲಿರುವ ಎಲೆ ಮಲ್ಲಪ್ಪ ಚೆಟ್ಟಿ ಕೆರೆಗೆ 22 ಎಂಎಲ್‌ಡಿ (ದಶಲಕ್ಷ ಲೀಟರ್) ಸಂಸ್ಕರಿಸಿದ ತ್ಯಾಜ್ಯ ನೀರನ್ನು ಹರಿಸುತ್ತಿದೆ. ಬಳಿಕ ಅದನ್ನು ಹೊಸಕೋಟೆ ಕೆರೆಗೆ ಹರಿಸಲಾಗುತ್ತಿದೆ. ಜಲಮಂಡಳಿಯ ಅಂಕಿ ಅಂಶಗಳ ಪ್ರಕಾರ, 660 ದಶಲಕ್ಷ ಲೀಟರ್ (ವಾರ್ಷಿಕ 8.75 ಟಿಎಂಸಿ ಅಡಿ) ಸಂಸ್ಕರಿಸಿದ ತ್ಯಾಜ್ಯ ನೀರು ದಕ್ಷಿಣ ಪೆನ್ನಾರ್ ನದಿ ಜಲಾನಯನ ಪ್ರದೇಶಕ್ಕೆ ಹರಿದು ಹೋಗುತ್ತಿದೆ. ಬಳಿಕ ಇದು 350 ಎಕರೆ ಭೂಮಿಗೆ ನೀರು ಉಣಿಸುತ್ತಿದೆ. ಬೆಂಗಳೂರಿನ ತ್ಯಾಜ್ಯ ನೀರು ಪೆನ್ನಾರ್ ಜಲಾನಯನ ಪ್ರದೇಶದಲ್ಲಿರುವ ವರ್ತೂರು ಕೆರೆಗೆ ಬರುತ್ತಿದೆ. ಅದನ್ನು ಸಂಸ್ಕರಿಸಿ 350 ಎಕರೆಗೆ ಹರಿಸಲಾಗುತ್ತಿದೆ. ಬೆಳ್ಳಂದೂರು ಕೆರೆ ನೀರನ್ನು ಸಂಸ್ಕರಿಸಿ 126 ಜಲಕಾಯ ಭರ್ತಿ ಮಾಡಲಾಗುತ್ತಿದೆ' ಎಂದಿದೆ.

ಕುಡಿಯುವ ಉದ್ದೇಶಕ್ಕಾಗಿ ಬೆಂಗಳೂರಿಗೆ ಪ್ರಸ್ತುತ 18 ಟಿಎಂಸಿ ಅಡಿ ನೀರು ಪೂರೈಕೆ ಆಗುತ್ತಿದೆ. ಅದರಲ್ಲಿ 12 ಟಿಎಂಸಿ ಅಡಿ ನೀರನ್ನು ಕಾವೇರಿ ಜಲಾನಯನ ಪ್ರದೇಶದಿಂದ ಹೊರಗಿರುವ ಜನರು ಬಳಸುತ್ತಿದ್ದಾರೆ. ಜತೆಗೆ, ಮಾರ್ಕಾಂಡೇಯ ನದಿ ಯೋಜನೆ, ಅಂತರ್ಜಲ ಮರುಪೂರಣ, ಕೆರೆಗಳ ತುಂಬಿಸುವ ಯೋಜನೆಗಳಿಗೆ ಸಹ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಬಳಸಲಾಗುತ್ತಿದೆ. ಈ ಮೂಲಕ ಕಾವೇರಿ ನ್ಯಾಯಾಧೀಕರಣದ ಆದೇಶಗಳನ್ನು ಕರ್ನಾಟಕ ಸರ್ಕಾರ ಉಲ್ಲಂಘಿಸಿದೆ ಎಂದು ದೂರಲಾಗಿದೆ.

'ಬೆಂಗಳೂರಿನ ತ್ಯಾಜ್ಯ ನೀರು (ನಗರಕ್ಕೆ ಪೂರೈಕೆಯಾದ ಕಾವೇರಿ ನೀರಿನಲ್ಲಿ ಶೇ 80ರಷ್ಟು) ಸಹ ಕಾವೇರಿ ಜಲಾನಯನ ಪ್ರದೇಶಕ್ಕೆ ಬರಬೇಕು. ಈ ನೀರು ಯಾವುದೇ ಕಾರಣಕ್ಕೂ ಪೆನ್ನಾರ್ ಜಲಾನಯನ ಪ್ರದೇಶಕ್ಕೆ ಹೋಗದಂತೆ ತಡೆಯಬೇಕು. ಈ ಬಗ್ಗೆ ಆದೇಶ ನೀಡಬೇಕು' ಎಂದು ಮನವಿ ಮಾಡಿದೆ.

'ಬೆಂಗಳೂರಿಗೆ ಪೂರೈಕೆಯಾಗುತ್ತಿರುವ ಕಾವೇರಿ ನೀರು, ಸಂಸ್ಕರಿಸಿದ ತ್ಯಾಜ್ಯ ನೀರಿನ ಕುರಿತು ಪ್ರಾಧಿಕಾರ ನಿಗಾ ಇಡುತ್ತಿಲ್ಲ. ಈ ಬಗ್ಗೆ ಮೇಲ್ವಿಚಾರಣೆಗೆ ನಿರ್ದೇಶನ ನೀಡಬೇಕು' ಎಂದು ತಮಿಳುನಾಡು ಸರ್ಕಾರ ಕೋರಿದೆ.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಸಭೆ

ಕೃಷಿ ಕಾಯ್ದೆ ವಾಪಸ್‌ಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರವು ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದು ವರ್ಷವಾಗಿದ್ದರೂ ರಾಜ್ಯ ಸರ್ಕಾರವು ಆ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲ. ಈ ವಿಚಾರದಲ್ಲಿ ಸರ್ಕಾರ ಅಂತಿಮ ತೀರ್ಮಾನ ತಿಳಿಸಬೇಕು' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆಗ್ರಹಿಸಿದರು.

ನಗರದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯದ ನಾನಾ ಭಾಗಗಳ ರೈತರು ರೊಟ್ಟಿ ಬುತ್ತಿ ಕಟ್ಟಿಕೊಂಡು ಬೆಂಗಳೂರು ಹಾಗೂ ಬೆಳಗಾವಿ ಅಧಿವೇಶನದ ವೇಳೆ ಹೋರಾಟ ನಡೆಸಿದ್ದರು. ಆಗ ಹಿಂದಕ್ಕೆ ಪಡೆಯುವ ಭರವಸೆ ನೀಡಿ ರೈತರನ್ನು ರಾಜ್ಯ ಸರ್ಕಾರವು ವಾಪಸ್ ಕಳುಹಿಸಿತ್ತು. ಆದರೆ, ಇದುವರೆಗೂ ತೀರ್ಮಾನ ಕೈಗೊಂಡಿಲ್ಲ. ಮುಂದಿನ ಬಜೆಟ್ ಅಧಿವೇಶನದಲ್ಲಿ ತೀರ್ಮಾನ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.



ನಗರದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಆಯೋಜಿಸಿದ್ದ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಸರ್ಕಾರಕ್ಕೆ ಅಂತಿಮ ಒತ್ತಾಯ ಸಭೆಯಲ್ಲಿ ರಾಜ್ಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿದರು. (ಎಡದಿಂದ) ಕಾರ್ಯದರ್ಶಿ ವೀರಭದ್ರ ಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಭಕ್ತರಹಳ್ಳಿ ಬೈರೇಗೌಡ, ಕಾರ್ಯದರ್ಶಿ ಹನುಮಂತಪ್ಪ, ಕಾರ್ಯಾಧ್ಯಕ್ಷ ಮಂಜುನಾಥ ಗೌಡ, ಉಪಾಧ್ಯಕ್ಷ ಕೆಂಚೇಗೌಡ ಇದ್ದರು —ಪ್ರಜಾವಾಣಿ ಚಿತ್ರ

'ಮೂರು ಕೃಷಿ ಕಾಯ್ದೆಗಳನ್ನು ಮುಂದುವರಿಸುವುದಿದ್ದರೆ ಆ ವಿಷಯವನ್ನಾದರೂ ರೈತರಿಗೆ ತಿಳಿಸಬೇಕು. ರೈತರು ಚುನಾವಣೆ ಸಂದರ್ಭದಲ್ಲಿ ತಮ್ಮದೇ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದರು.

'ಎ.ಪಿ.ಎಂ.ಸಿ ಕಾಯ್ದೆಯಿಂದ ಕೃಷಿ ಮಾರುಕಟ್ಟೆ ಶೇ 90ರಷ್ಟು ನಿರ್ಜೀವಗೊಂಡಿದೆ. ಕಂದಾಯ ಕಾಯ್ದೆ ತಿದ್ದುಪಡಿಯಿಂದ ಪ್ರತಿದಿನ ಲಕ್ಷಾಂತರ ರೈತರು ಜಮೀನು ಕಳೆದುಕೊಂಡು ಕೃಷಿಯಿಂದ ವಿಮುಖರಾಗುತ್ತಿದ್ದಾರೆ' ಎಂದರು.

'ಕೇಂದ್ರ ಸಚಿವ ಅಮಿತ್ ಶಾ ಅವರು ಹೈನುಗಾರಿಕೆಯನ್ನು ಕಾರ್ಪೊರೇಟ್ ಕಂಪನಿಗೆ ವಹಿಸುವ ಕುರಿತು ಮಂಡ್ಯದ ಸಮಾವೇಶದಲ್ಲಿ ಪ್ರಸ್ತಾಪಿಸಿದ್ದಾರೆ. ಸರ್ಕಾರವು ಧರ್ಮ ನಂಬಿಕೆಯನ್ನು ತೋರಿಸಿ ಜಾನುವಾರು ಹತ್ಯೆ ಕಾಯ್ದೆ ಜಾರಿಗೆ ತಂದಿದೆ. ಇದು ರಾಜ್ಯದ ರೈತರಿಗೆ ಅರ್ಥವಾಗಿದೆ. ನಗರದಲ್ಲಿ ಫೆಬ್ರುವರಿ ಕೊನೆಯಲ್ಲಿ ಬೃಹತ್ ರೈತ ಸಮಾವೇಶ ಆಯೋಜಿಸಲಾಗುವುದು. ಅಲ್ಲಿ ರೈತರ ನಡೆ ಯಾವ ಕಡೆ ಎಂಬುದನ್ನು ತೀರ್ಮಾನಿಸುತ್ತೇವೆ' ಎಂದು ಎಚ್ಚರಿಸಿದರು.

ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ರೈತರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಫೆ.5ರಿಂದ ಮಧುಮೇಹ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಶಾಂತನಗರದ ಕ್ಯೂರ್ ಡಯಾಬಿಟಿಸ್ ಸೆಂಟರ್ ಫೆ.5ರಿಂದ ಮಾ.26ರವರೆಗೆ ನಗರದ ವಿವಿಧೆಡೆ ಮಧುಮೇಹ ಜಾಗೃತಿ ಮತ್ತು ತಪಾಸಣೆ ಅಭಿಯಾನವನ್ನು ಹಮ್ಮಿಕೊಂಡಿದೆ.

ಮಧುಮೇಹ ನಿರ್ವಹಣೆಯು ಔಷಧಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಜೀವನಶೈಲಿ ಮಾರ್ಪಾಡುಗಳೂ ಪ್ರಮುಖ ಪಾತ್ರ ವಹಿಸುತ್ತವೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡವನ್ನು ಕಟ್ಟುನಿಟ್ಟಾದ ಜೀವನ ಶಿಸ್ತಿನಿಂದ ನಿಯಂತ್ರಣದಲ್ಲಿ ಇರಿಸಬಹುದು. ಆದ್ದರಿಂದ ಪ್ರತಿ ಭಾನುವಾರ ಮಧುಮೇಹ ಜಾಗೃತಿ ಮತ್ತು ತಪಾಸಣಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಉಚಿತವಾಗಿ ತಪಾಸಣೆ ನಡೆಸಲಾಗುತ್ತದೆ ಎಂದು ಕೇಂದ್ರ ತಿಳಿಸಿದೆ.

ಮಧುಮೇಹ ತಜ್ಞೆ ಡಾ. ವಂದನಾ ಆರ್.ಕೆ. ಅವರು ಅಭಿಯಾನದಲ್ಲಿ ಭಾಗವಹಿಸಿ, ತಪಾಸಣೆ ನಡೆಸುತ್ತಾರೆ. ಫೆ.5ರಂದು ಬಸವೇಶ್ವರ ನಗರದ ಪವಿತ್ರಾ ಪ್ಯಾರಡೈಸ್, ಫೆ.12ರಂದು ಪ್ರಶಾಂತ ನಗರದ ಶೋಭಾ ಆಸ್ಪತ್ರೆ ಸಿಗ್ನಲ್, ಫೆ.19ರಂದು ಕುರುಬರಹಳ್ಳಿಯ ಶಂಕರಮಠ ಸಿಗ್ನಲ್, ಫೆ.26ರಂದು ಪದ್ಮಶ್ರೀ ಡಯಾಗ್ನೋಸ್ಟಿಕ್ ಹತ್ತಿರದ ಕಾಂಗರು ಕೇರ್ ಸಿಗ್ನಲ್, ಮಾ.5ರಂದು ಚಂದ್ರಾಲೇಔಟ್‌ನ ಗುರುಶ್ರೀ ಆಸ್ಪತ್ರೆ ಬಳಿ, ಮಾ.12ರಂದು ನಾಗರಭಾವಿಯ ಬೈಟು ಕಾಫಿ ಬಳಿ, ಮಾ.19ರಂದು ವಿಜಯನಗರ ಸಿಗ್ನಲ್ ಬಳಿ ಹಾಗೂ ಮಾ.26ರಂದು ಮಲಗಳದ ರಿಲಯನ್ಸ್ ಮಾರ್ಟ್ ಬಳಿ ತಪಾಸಣೆ ನಡೆಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9535190341

ಪೋಷಕರ ಪತ್ತೆಗಾಗಿ ಪ್ರಕಟಣೆ



ಅಂದಾಜು 3 ವರ್ಷದ ಭವಾನಿ ಎಂಬ ಹೆಸರಿನ ತೆಲುಗು ಮಾತನಾಡುವ ಕಂದುಬಣ್ಣದ 85 ಸೆಂ.ಮೀ. ಎತ್ತರ 11.5 ಕೆಜಿ ತೂಕದ ಒಂದು ಹೆಣ್ಣು ಮಗು, ರಾಮಮೂರ್ತಿನಗರ ಹೊರ ವರ್ತುಲ ರಸ್ತೆಯ ಸರ್ವೀಸ್ ರೋಡ್‌ನಲ್ಲಿ ಸಿಕ್ಕಿರುತ್ತದೆ.

ಸಂಬಂಧಿತ ಪೋಷಕರು ದಯವಿಟ್ಟು ಸಂಪರ್ಕಿಸಿ: ಶಿಶು ಮಂದಿರ 9379271391, 7899917099.

ಸ್ವಕ್ಷೇತ್ರಕ್ಕೇ ಆರ್‌ಒಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಆಯೋಗದ ಮಾರ್ಗಸೂಚಿ ಅನ್ವಯ ಎಂದು ನಮೂದಿಸಿ, ಸ್ವಕ್ಷೇತ್ರಕ್ಕೇ ಬಿಬಿಎಂಪಿಯ ಕಂದಾಯ ಅಧಿಕಾರಿಗಳನ್ನು ನಗರಾಭಿವೃದ್ಧಿ ಇಲಾಖೆ ವರ್ಗಾವಣೆ ಮಾಡಿದೆ.

ಬಿಬಿಎಂಪಿಯ ಆರು ಕಂದಾಯ ಅಧಿಕಾರಿ ಹಾಗೂ 14 ಸಹಾಯಕ ಕಂದಾಯ ಅಧಿಕಾರಿಗಳನ್ನು ಮಂಗಳವಾರ ವರ್ಗಾವಣೆ ಮಾಡಲಾಗಿದೆ. ಚುನಾವಣೆ ಹಿನ್ನೆಲೆಯಲ್ಲಿ ಸ್ವಕ್ಷೇತ್ರದಲ್ಲಿ ಅಧಿಕಾರಿಗಳು ಇರಬಾರದು ಎಂಬ ನಿಯಮದಂತೆ ಮಾಡಲಾಗಿರುವ ಈ ವರ್ಗಾವಣೆಯಲ್ಲಿ, ಮೂವರು ಕಂದಾಯ, ಉಪ ಕಂದಾಯ ಅಧಿಕಾರಿಗಳನ್ನು ಅವರ ಸ್ವಕ್ಷೇತ್ರಕ್ಕೇ ವರ್ಗಾವಣೆ ಮಾಡಿರುವುದು ಗೊತ್ತಾಗಿದೆ.

ದಾಸರಹಳ್ಳಿಯಲ್ಲಿದ್ದ ಕಂದಾಯ ಅಧಿಕಾರಿ ಎಸ್.ಆರ್. ಪ್ರಕಾಶ್ ಅವರನ್ನು ಕೆಂಗೇರಿ, ಸರ್ವಜ್ಞನಗರದಲ್ಲಿದ್ದ ಉಪಕಂದಾಯ ಅಧಿಕಾರಿ ನಾರಾಯಣಸ್ವಾಮಿ ಅವರನ್ನು ಕೆ.ಆರ್. ಪುರ, ಪುಲಿಕೇಶಿನಗರದಲ್ಲಿದ್ದ ಉಪ ಕಂದಾಯ ಅಧಿಕಾರಿ ಡಿ. ಸರಸ್ವತಿ ಅವರನ್ನು ಮಲ್ಲೇಶ್ವರಕ್ಕೆ ವರ್ಗಾವಣೆ ಮಾಡಲಾಗಿದೆ. ಇವರು ನಿಯೋಜಿಸಲಾಗಿರುವ ಸ್ಥಳದಲ್ಲಿ ಮತದಾರ ನೋಂದಣಾಧಿಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ. ಆದರೆ ಈ ಮೂವರನ್ನು ಅವರು ವಾಸವಿರುವ ವಿಧಾನಸಭೆ ಕ್ಷೇತ್ರಕ್ಕೇ ವರ್ಗಾಯಿಸಿರುವುದು ಕೇಂದ್ರ ಚುನಾವಣೆ ಆಯೋಗದ ಮಾರ್ಗಸೂಚಿಗೆ ವಿರುದ್ಧವಾಗಿದೆ.

ಚುನಾವಣೆ ಸಿದ್ಧತೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಕಂದಾಯ ವಿಭಾಗದ ಎಲ್ಲ ಅಧಿಕಾರಿಗಳ ವಿಳಾಸ ಮಾಹಿತಿಯನ್ನು ಎಪಿಕ್ ಸಂಖ್ಯೆಯೊಂದಿಗೇ ಬಿಬಿಎಂಪಿ ಪಡೆದುಕೊಂಡಿದೆ. ಅದೆಲ್ಲ ಮಾಹಿತಿಯನ್ನು ಪಡೆದ ಮೇಲೂ ಸ್ವಕ್ಷೇತ್ರಕ್ಕೆ ಅವರನ್ನು ವರ್ಗಾಯಿಸಿರುವುದು ಹಲವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಸಂಕ್ಷಿಪ್ತ ಸುದ್ದಿ

ಲಂಚ: ಬಿಬಿಎಂಪಿ ಕಂದಾಯ ನಿರೀಕ್ಷಕ ಬಂಧನ

ಬೆಂಗಳೂರು: ಸ್ಥಿರಾಸ್ತಿಯೊಂದರ ಇ-ಖಾತೆ ನೀಡುವುದಕ್ಕೆ ದಾಖಲೆಗಳನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಆಸ್ತಿಯ ಮಾಲೀಕರಿಂದ ₹ 5,000 ಲಂಚ ಪಡೆಯುತ್ತಿದ್ದ ಬಿಬಿಎಂಪಿ ಸಂಜಯನಗರ ವಾರ್ಡ್‌ನ ಕಂದಾಯ ನಿರೀಕ್ಷಕ ವಸಂತಕುಮಾರ್ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಸಂಜಯನಗರ ವಾರ್ಡ್ ವ್ಯಾಪ್ತಿಯ ಭೂಪಸಂದ್ರ ನಿವಾಸಿ ಎಚ್.ವಿ. ಸುಬ್ರಮಣಿ ಎಂಬುವವರು ತಮ್ಮ ನಿವೇಶನಕ್ಕೆ ಇ- ಖಾತಾ ನೀಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಆಸ್ತಿಯ ದಾಖಲೆಗಳನ್ನು ಇ-ಖಾತಾ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ₹ 5,000 ಲಂಚ ನೀಡುವಂತೆ ಅಧಿಕಾರಿ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು.

ಮಂಗಳವಾರ ಸಂಜೆ ನಾಗಶೆಟ್ಟಿಹಳ್ಳಿಯಲ್ಲಿ ಸುಬ್ರಮಣಿ ಅವರನ್ನು ಭೇಟಿಮಾಡಿದ ವಸಂತಕುಮಾರ್, ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.


ಉದ್ಯೋಗ ಖಾತ್ರಿಗೆ ಆಗ್ರಹಿಸಿ ಪ್ರತಿಭಟನೆ ಇಂದು

ಬೆಂಗಳೂರು: ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಖಂಡಿಸಿ ಹಾಗೂ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಹಾಗೂ ಭದ್ರತೆ ಖಾತ್ರಿಪಡಿಸಬೇಕು ಎಂದು ಆಗ್ರಹಿಸಿ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ನೇತೃತ್ವದಲ್ಲಿ ಫೆ.1ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11.30ಕ್ಕೆ ಪ್ರತಿಭಟನೆ ಆರಂಭಗೊಳ್ಳಲಿದೆ. ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ, ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ.ಉಮಾ, ಡಾ.ಸುಧಾ ಕಾಮತ್, ಬಿ.ಆರ್.ಅಪರ್ಣಾ, ಎಂ.ಎನ್.ಮಂಜುಳಾ, ಎಸ್.ಶೋಭಾ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸುಳ್ಳು ಪ್ರಕರಣ; ಅಮಾನತಾಗಿದ್ದ ಇನ್‌ಸ್ಪೆಕ್ಟರ್ ಪ್ರವೀಣ್

'ಸ್ಯಾಂಟ್ರೊ': ತನಿಖಾಧಿಕಾರಿ ವರ್ಗ



ಧರ್ಮೇಂದ್ರ

ಬೆಂಗಳೂರು: 'ಕಾಟನ್‌ಪೇಟೆ ಠಾಣೆಯಲ್ಲಿ ಸುಳ್ಳು ಪ್ರಕರಣ ದಾಖಲಿಸಿ ಸಹೋದರಿಯರನ್ನು ಬಂಧಿಸಿದ್ದ' ಪ್ರಕರಣದ ತನಿಖೆ ನಡೆಸುತ್ತಿರುವ ಎಸಿಪಿ ಧರ್ಮೇಂದ್ರ ಅವರನ್ನು ದಿಢೀರ್ ವರ್ಗಾವಣೆ ಮಾಡಲಾಗಿದೆ.

ಬೆಂಗಳೂರು ಪೊಲೀಸ್ ವಿಶೇಷ ಘಟಕದ ಎಸಿಪಿ ಆಗಿರುವ ಧರ್ಮೇಂದ್ರ ಅವರನ್ನು ಮಂಗಳೂರು ಪಶ್ಚಿಮ ವಲಯ ಐಜಿಪಿ ಕಚೇರಿಗೆ ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಆದೇಶ ಹೊರಡಿಸಿದೆ.

ಇದರ ಜೊತೆಯಲ್ಲಿ ರಾಜ್ಯದ ಹಲವು ಡಿವೈಎಸ್ಪಿ ಹಾಗೂ ಇನ್‌ಸ್ಪೆಕ್ಟರ್‌ಗಳನ್ನೂ ವರ್ಗಾವಣೆ ಮಾಡಲಾಗಿದೆ.

ವಿಚಾರಣೆ ಬಾಕಿ ಇರುವಾಗಲೇ ವರ್ಗ: 'ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದ ಆರೋಪಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ, ತನ್ನ ಪತ್ನಿ ಹಾಗೂ ಅವರ ಸಹೋದರಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲು ಸಂಚು ರೂಪಿಸಿದ್ದರು. ಕಾಟನ್‌ಪೇಟೆ ಇನ್‌ಸ್ಪೆಕ್ಟರ್ ಪ್ರವೀಣ್, ವರ್ಗಾವಣೆ ಆಸೆಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸಹೋದರಿಯರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಳ್ಳು ಪ್ರಕರಣದ ವಿರುದ್ಧ ಮೈಸೂರು ಪೊಲೀಸರಿಗೆ ಸಂತ್ರಸ್ತೆ ಮಾಹಿತಿ ನೀಡಿದ್ದರು. ತನಿಖೆಗೆ ಆದೇಶಿಸಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಡಿಸಿಪಿ ವರದಿ ಆಧರಿಸಿ ಇನ್‌ಸ್ಪೆಕ್ಟರ್ ಪ್ರವೀಣ್ ಅವರನ್ನು ಅಮಾನತು ಮಾಡಿದ್ದರು. ನಂತರ, ಸುಳ್ಳು ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು. ತನಿಖಾಧಿಕಾರಿಯಾಗಿ ಧರ್ಮೇಂದ್ರ ಅವರನ್ನು ನೇಮಿಸಲಾಗಿತ್ತು' ಎಂದು ತಿಳಿಸಿವೆ.

'ಸಂತ್ರಸ್ತೆ ಹೇಳಿಕೆ ಪಡೆದಿದ್ದ ಧರ್ಮೇಂದ್ರ, ಸ್ಯಾಂಟ್ರೊ ರವಿ ಹಾಗೂ ಇನ್‌ಸ್ಪೆಕ್ಟರ್ ಪ್ರವೀಣ್ ವಿಚಾರಣೆಗೆ ಸಿದ್ಧತೆ ನಡೆಸುತ್ತಿದ್ದರು. ಇದರ ನಡುವೆಯೇ ಅವರನ್ನು ದಿಢೀರ್ ವರ್ಗಾವಣೆ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಅತ್ಯಾಚಾರ: ಬಾಲಕಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಮೂರು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ 22 ವರ್ಷದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಸೋಮವಾರ ಮಧ್ಯಾಹ್ನ ನಡೆದಿರುವ ಘಟನೆ ಸಂಬಂಧ ಪೋಷಕರ ಹೇಳಿಕೆ ಪಡೆಯಲಾಗಿದೆ. ಅತ್ಯಾಚಾರ (ಐಪಿಸಿ 376), ಕೊಲೆ (ಐಪಿಸಿ 302) ಆರೋಪ ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೃತ್ಯದ ನಂತರ ಪರಾರಿಯಾಗಿದ್ದ ಆರೋಪಿಯನ್ನು ಮಂಗಳವಾರ ಸಂಜೆ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಲಯವನ್ನು ಕೋರಲಾಗುವುದು' ಎಂದು ಹೇಳಿವೆ.

ತಲೆಗೆ ಹೊಡೆದು ಹತ್ಯೆ: 'ಬಾಲಕಿಯ ಪೋಷಕರು, ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿಗಳು. ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ವಾಸವಿದ್ದರು. ಬಾಲಕಿ ಹಾಗೂ ಅವರ ಪೋಷಕರಿಗೆ ಪರಿಚಯವಿರುವ ಆರೋಪಿಯೇ ಕೃತ್ಯ ಎಸಗಿದ್ದಾನೆ' ಎಂದು ಪೊಲೀಸ್ ಮೂಲಗಳು ವಿವರಿಸಿವೆ.

'ಬಾಲಕಿಯನ್ನು ಪುಸಲಾಯಿಸಿ ಅತ್ಯಾಚಾರ ಎಸಗಿದ್ದ ಆರೋಪಿ, ಮೃಗೀಯವಾಗಿ ವರ್ತಿಸಿದ್ದ. ಅಳುತ್ತಿದ್ದ ಬಾಲಕಿಯ ತಲೆಗೆ ಆಯುಧದಿಂದ ಹೊಡೆದಿದ್ದ. ಬಾಲಕಿ ಸ್ಥಳದಲ್ಲೇ ಮೃತಪಟ್ಟಿದ್ದಳು. ಬಳಿಕ, ಆರೋಪಿ ಪರಾರಿಯಾಗಿದ್ದ. ಮೃತದೇಹ ನೋಡಿದ್ದ ಪೋಷಕರು, ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಯುವತಿಗೆ ಸಂದೇಶ: ಯುವಕನ ಅಪಹರಿಸಿ ಕೊಲೆ ಶಂಕೆ

ಬೆಂಗಳೂರು: ಯುವತಿಯೊಬ್ಬರ ಮೊಬೈಲ್‌ಗೆ ಸಂದೇಶ ಕಳುಹಿಸುತ್ತಿದ್ದರೆಂಬ ಕಾರಣಕ್ಕೆ ಗೋವಿಂದರಾಜ್ (20) ಎಂಬುವವರನ್ನು ಅಪಹರಿಸಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಈ ಸಂಬಂಧ ಕುಟುಂಬಸ್ಥರು ಯಶವಂತಪುರ ಠಾಣೆಗೆ ದೂರು ನೀಡಿದ್ದಾರೆ.

'ಗೋವಿಂದರಾಜ್ ಕೆಲದಿನಗಳಿಂದ ನಾಪತ್ತೆಯಾಗಿದ್ದಾರೆ. ಅವರನ್ನು ಅಪಹರಣ ಮಾಡಿ ಕೊಲೆ ಮಾಡಿರುವ ಅನುಮಾನ ವ್ಯಕ್ತಪಡಿಸಿ ಕುಟುಂಬಸ್ಥರು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮತ್ತಿಕೆರೆ ನಿವಾಸಿಯಾಗಿರುವ 20 ವರ್ಷದ ಯುವತಿ ಜೊತೆ ಗೋವಿಂದರಾಜ್ ಸ್ನೇಹವಿಟ್ಟುಕೊಂಡಿದ್ದರು. ಇಬ್ಬರೂ ಪರಸ್ಪರ ಸಂದೇಶ ಕಳುಹಿಸುತ್ತಿದ್ದರು. ಇತ್ತೀಚೆಗೆ ಮೊಬೈಲ್ ಮನೆಯಲ್ಲಿ ಬಿಟ್ಟು ಯುವತಿ ಕಾಲೇಜಿಗೆ ಹೋಗಿದ್ದರು. ಅದೇ ಕುಟುಂಬಸ್ಥರು, ಮೊಬೈಲ್ ನೋಡಿದ್ದರು. ಗೋವಿಂದರಾಜ್ ಕಳುಹಿಸಿದ್ದ ಸಂದೇಶ ಗಮನಿಸಿದ್ದರು.'

'ಗೋವಿಂದರಾಜ್ ಅವರಿಗೆ ಸೋಮವಾರ ಕರೆ ಮಾಡಿದ್ದ ಸಂಬಂಧಿಕರು, ಮಾತನಾಡಬೇಕೆಂದು ಹೇಳಿ ತಮ್ಮ ಬಳಿ ಕರೆಸಿಕೊಂಡಿದ್ದರು. ನಂತರ, ಅಪಹರಿಸಿ ಕೊಲೆ ಮಾಡಿದ್ದಾರೆ. ಹೊರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಮೃತದೇಹ ಎಸೆದಿರಬಹುದೆಂಬ ಶಂಕೆ ಇರುವುದಾಗಿ ದೂರುದಾರರು ಹೇಳಿದ್ದಾರೆ. ಯುವತಿ ಸಂಬಂಧಿಕರನ್ನು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿಗಳು

ಠಾಣೆಯಲ್ಲೇ ಆತ್ಮಹತ್ಯೆಗೆ ರೌಡಿ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಗೋಪಾಲನಗರ ಠಾಣೆಯ ಶೌಚಾಲಯದಲ್ಲಿ ಫಿನಾಯಿಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ರೌಡಿ ಸುಲ್ತಾನ್ ಅಲಿಯಾಸ್ ಅಬ್ರಾರ್ ಬಾಷಾ ಎಂಬುವವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವ ಪೊಲೀಸರು, ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ.

'ಸುಲಿಗೆ, ಕಳ್ಳತನ, ಜೀವ ಬೆದರಿಕೆ ಸೇರಿ ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಸುಲ್ತಾನ್ ಹೆಸರು, ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ಠಾಣೆ ರೌಡಿ ಪಟ್ಟಿಯಲ್ಲಿತ್ತು. 2023ರ ಡಿಸೆಂಬರ್‌ನಲ್ಲಿ ನಡೆದಿದ್ದ ಸರ ಕಳ್ಳತನ ಪ್ರಕರಣ ಸಂಬಂಧ ಈತನನ್ನು ಬಂಧಿಸಿ, ₹ 1 ಲಕ್ಷ ನಗದು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಬಂಧನ: 'ಪ್ರಕರಣದ ವಿಚಾರಣೆಗೆಂದು ಕೆಲ ದಿನಗಳ ಹಿಂದೆಯಷ್ಟೇ ಸುಲ್ತಾನ್‌ನನ್ನು ಠಾಣೆಗೆ ಕರೆತರಲಾಗಿತ್ತು. ಶೌಚಾಲಯಕ್ಕೆ ಹೋಗಿದ್ದ ಈತ, ಅಲ್ಲಿಯೇ ಫಿನಾಯಿಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದ. ಅಸ್ವಸ್ಥಗೊಂಡಿದ್ದ ಈತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸುಲ್ತಾನ್ ಚೇತರಿಸಿಕೊಂಡಿದ್ದ. ಬಳಿಕವೇ ಈತನನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು' ಎಂದು ಹೇಳಿವೆ.

ಸುದ್ದಿ 2 ನಿಮಿಷ

ಡ್ರಗ್ಸ್ ಮಾರಾಟ; ಮಾಜಿ ಕಾರ್ಪೊರೇಟರ್‌ಗೆ ನೋಟಿಸ್

ಬೆಂಗಳೂರು: ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಆರೋಪಿ ನೈಜೀರಿಯಾದ ಡೇವಿಡ್ ಒಕ್ವೊಕೊವಾ (31) ಜೊತೆ ಒಡನಾಟ ಹೊಂದಿರುವ ಆರೋಪದಡಿ ಮಾಜಿ ಕಾರ್ಪೊರೇಟರ್ ಅಬ್ದುಲ್ ರಖೀಬ್ ಜಾಕೀರ್ ಅವರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

ಪುಲಿಕೇಶಿನಗರ ವಾರ್ಡ್‌ನ ಮಾಜಿ ಕಾರ್ಪೊರೇಟರ್ ಅಬ್ದುಲ್ ರಖೀಬ್ ಜಾಕೀರ್ ಅವರನ್ನು ಡಿ.ಜೆ.ಹಳ್ಳಿ ಗಲಭೆ ಪ್ರಕರಣದಲ್ಲೂ ಬಂಧಿಸಲಾಗಿತ್ತು.

'ಆರೋಪಿ ಡೇವಿಡ್‌ನನ್ನು 2022ರ ನವೆಂಬರ್ 8ರಂದು ಶಾಂಪುರದ ರೈಲ್ವೆ ಗೇಟ್ ಬಳಿ ಬಂಧಿಸಲಾಗಿತ್ತು. ಈತನಿಂದ 97 ಎಕ್ಸ್‌ಟಸಿ ಮಾತ್ರೆಗಳು, ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿತ್ತು' ಎಂದು ಪೊಲೀಸರು ಹೇಳಿದರು.



'ಡೇವಿಡ್ ಮೊಬೈಲ್ ಪರಿಶೀಲನೆ ನಡೆಸಲಾಗಿತ್ತು. ಅಬ್ದುಲ್ ರಖೀಬ್ ಅವರು ಡೇವಿಡ್ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದು ಪತ್ತೆಯಾಗಿತ್ತು. ಹೀಗಾಗಿ, ವಿಚಾರಣೆಗೆ ಬರುವಂತೆ ಅಬ್ದುಲ್ ರಖೀಬ್ ಅವರಿಗೆ ನೋಟಿಸ್ ನೀಡಲಾಗಿದೆ. ಬುಧವಾರ ಅವರು ವಿಚಾರಣೆಗೆ ಬರುವ ಸಾಧ್ಯತೆ ಇದೆ. ವಿಚಾರಣೆಗೆ ಹಾಜರಾಗದಿದ್ದರೆ, ಎರಡನೇ ನೋಟಿಸ್ ನೀಡಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದರು.

ಚಿನ್ನಾಭರಣ ಮಳಿಗೆಗಳಲ್ಲಿ ಐ.ಟಿ ಅಧಿಕಾರಿಗಳಿಂದ ಶೋಧ

ಬೆಂಗಳೂರು: ತೆರಿಗೆ ವಂಚನೆ ಮತ್ತು ವಹಿವಾಟಿನ ನಿಖರ ಮಾಹಿತಿಯನ್ನು ಮುಚ್ಚಿಟ್ಟಿರುವ ಆರೋಪದ ಮೇಲೆ ನಗರದ ವಿವಿಧೆಡೆ ಚಿನ್ನಾಭರಣ ಮಾರಾಟ ಮಳಿಗೆಗಳ ಮೇಲೆ ಮಂಗಳವಾರ ದಾಳಿ ಮಾಡಿದ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಶೋಧ ನಡೆಸಿದರು.

ಚಿಕ್ಕಪೇಟೆ, ಜಯನಗರ, ಬಸವನಗುಡಿ, ಯಶವಂತಪುರ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಏಕಕಾಲಕ್ಕೆ ಕಾರ್ಯಾಚರಣೆ ನಡೆಸಿದರು. ಬೆಳಿಗ್ಗೆಯೇ ನೂರಾರು ಅಧಿಕಾರಿಗಳು ಹಲವು ತಂಡಗಳಲ್ಲಿ ಚಿನ್ನಾಭರಣ ಮಳಿಗೆಗಳ ಮೇಲೆ ದಾಳಿಮಾಡಿ, ಲೆಕ್ಕಪತ್ರ ಪರಿಶೀಲಿಸಿದರು ಎಂದು ಮೂಲಗಳು ತಿಳಿಸಿವೆ.

ಚಿನ್ನಾಭರಣ ಮಾರುಕಟ್ಟೆಯಲ್ಲಿ ಪ್ರಖ್ಯಾತವಾಗಿರುವ ಪ್ರಮುಖ ಬ್ರ್ಯಾಂಡ್‌ಗಳ ಮಳಿಗೆಗಳಲ್ಲೇ ಶೋಧ ನಡೆಸಲಾಗಿದೆ. ಮಾರಾಟದ ನಿಖರ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ಬಹಿರಂಗಪಡಿಸದೇ ತೆರಿಗೆ ವಂಚಿಸುತ್ತಿರುವ ದೂರುಗಳನ್ನು ಆಧರಿಸಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂಬ ಮಾಹಿತಿ ಲಭಿಸಿದೆ.

ಶೋಧದ ವೇಳೆ ಮಳಿಗೆಗಳಿಗೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ದೀರ್ಘ ಕಾಲ ಮಳಿಗೆಗಳಲ್ಲಿ ತಪಾಸಣೆ ನಡೆಸಿದ ಐ.ಟಿ ಅಧಿಕಾರಿಗಳು, ವಹಿವಾಟಿನ ವಿವರ, ಬ್ಯಾಂಕಿಂಗ್ ವಹಿವಾಟಿನ ಮಾಹಿತಿ ಸಂಗ್ರಹಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಬ್ಯಾಂಕ್ ಆಫ್ ಬರೋಡಾ'ದಿಂದ ಚೆಕ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ ಬೆಂಗಳೂರು ವಲಯವು ಗಣರಾಜ್ಯೋತ್ಸವದ ಅಂಗವಾಗಿ ಬೆಂಗಳೂರಿನ ಎರಡು ಸರ್ಕಾರೇತರ ಸಂಸ್ಥೆಗಳಿಗೆ ತಲಾ ₹ 51 ಸಾವಿರ ಮೌಲ್ಯದ ಪ್ರಾಯೋಜಕತ್ವದ ಚೆಕ್ ಹಸ್ತಾಂತರಿಸಿದೆ.

ಬೆಂಗಳೂರು ವಲಯದ ಮುಖ್ಯಸ್ಥ ಸುಧಾಕರ ಡಿ. ನಾಯಕ್ ಅವರು ಹಾಗೂ ಬ್ಯಾಂಕಿನ ಇತರ ಅಧಿಕಾರಿಗಳು 'ಕೊಡುವ ಖುಷಿ' ಉಪಕ್ರಮದ ಭಾಗವಾಗಿ ಈ ಚೆಕ್ ವಿತರಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಶಾ ನಿಲಯ ಹೆಣ್ಣುಮಕ್ಕಳ ಅನಾಥಾಶ್ರಮ ಹಾಗೂ ಶ್ರೀ ಸಾಯಿ ಸಮೃದ್ಧಿ ವೃದ್ಧಾಶ್ರಮಕ್ಕೆ ಈ ಚೆಕ್ ವಿತರಿಸಲಾಗಿದೆ. ಈ ಎನ್‌ಜಿಒಗಳಿಗೆ ಸ್ವಚ್ಛತಾ ಪರಿಕರಗಳನ್ನು ಕೂಡ ವಿತರಿಸಲಾಗಿದೆ.

ಬ್ಯಾಂಕ್ ವತಿಯಿಂದ ಆಸ್ಪತ್ರೆಗಳಿಗೆ ಕಸದ ಬುಟ್ಟಿಗಳು ಮತ್ತು ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗೆ ಒಟ್ಟು 200 ಬ್ಯಾಗ್‌ಗಳಷ್ಟು ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲಾಗಿದೆ.

ಪುಸ್ತಕಮನೆ ಹರಿಹರಪ್ರಿಯ ನೇತೃತ್ವದಲ್ಲಿ ಪ್ರತಿಭಟನೆ

ವಾಹನ ನಿಲುಗಡೆ ನಿಷೇಧ: ಪರದಾಟ

ಪ್ರಜಾವಾಣಿ ವಾರ್ತೆ



ಪರ್ಯಾಯ ವ್ಯವಸ್ಥೆ ಕಲ್ಪಿಸದೆ ಏಕಾಏಕಿ ವಾಹನ ನಿಲುಗಡೆ ನಿಷೇಧಿಸಿರುವ ಕ್ರಮ ಖಂಡಿಸಿ ಸಾಹಿತಿ ಹರಿಹರಪ್ರಿಯ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು

ಬೆಂಗಳೂರು: ನೈಸ್ ರಸ್ತೆಯಿಂದ ಬನಶಂಕರಿವರೆಗೆ ರಸ್ತೆಯ ಎರಡೂ ಬದಿಯಲ್ಲೂ ವಾಹನ ನಿಲುಗಡೆ ನಿರ್ಬಂಧಿಸಲಾಗಿದ್ದು, ಇದರಿಂದ ಸ್ಥಳೀಯ ವ್ಯಾಪಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಎದುರಾಗಿದೆ. ಪೊಲೀಸರು ಹಾಗೂ ಬಿಬಿಎಂಪಿ ಅಧಿಕಾರಿಗಳು ದಿಢೀರ್ ಕೈಗೊಂಡಿರುವ ಈ ಕ್ರಮವು ಸರಿಯಲ್ಲ ಎಂದು ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ನೇತೃತ್ವದಲ್ಲಿ ಸ್ಥಳೀಯರು ಮಂಗಳವಾರ ಪ್ರತಿಭಟನೆ ನಡೆಸಿದರು.

ವಾಜರಹಳ್ಳಿ ವೃತ್ತದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಪ್ರತಿಭಟನೆ ನಡೆಸಿದರು.

'ಈ ಮಾರ್ಗದಲ್ಲಿ ಬಡವರೇ ವ್ಯಾಪಾರ ನಡೆಸಿಕೊಂಡು ಬದುಕು ನಡೆಸುತ್ತಿದ್ದಾರೆ. ರಸ್ತೆ ಬದಿಯಲ್ಲಿ ವಾಹನ ತಂದು ನಿಲ್ಲಿಸಿದರೆ ಕಳೆದ ಎರಡು ದಿನಗಳಿಂದ ₹ 1 ಸಾವಿರ ತನಕ ದಂಡ ಹಾಕಲಾಗುತ್ತಿದೆ. ಇದರಿಂದ ಬಡವರಿಗೆ ಸಾಕಷ್ಟು ತೊಂದರೆ ಆಗುತ್ತಿದೆ' ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

'ಈ ಮಾರ್ಗವನ್ನು ಇದುವರೆಗೂ ಹೆದ್ದಾರಿಯೆಂದು ಪರಿಗಣಿಸಿರಲಿಲ್ಲ. ಏಕಾಏಕಿ ಹೆದ್ದಾರಿಯಾಗಿ ಪರಿವರ್ತಿಸಿ ಜನರಿಗೆ ತೊಂದರೆ ಕೊಡಲಾಗುತ್ತಿದೆ. ಈ ಸಂಬಂಧ ಸ್ಥಳೀಯರಿಗೆ ಮಾಹಿತಿಯನ್ನೂ ನೀಡಿಲ್ಲ. ಏಕಾಏಕಿ ದಂಡ ಹಾಕಲಾಗುತ್ತಿದೆ. ಈ ರಸ್ತೆಯ ಬದಿಯಲ್ಲಿ ವಾಹನ ನಿಲುಗಡೆ ಮಾಡಿದ್ದವರಿಂದ ಸೋಮವಾರ ಒಂದೇ ದಿನ ಅಂದಾಜು ₹2 ಲಕ್ಷದಷ್ಟು ದಂಡ ವಸೂಲಿ ಮಾಡಲಾಗಿದೆ. ತಲಘಟ್ಟಪುರ, ವಾಜರಹಳ್ಳಿ, ರಘುನಹಳ್ಳಿ, ದೊಡ್ಡಕಲ್ಲಸಂದ್ರದ ಜನರಿಗೆ ತೊಂದರೆಯಾಗಿದೆ' ಎಂದು ಹೇಳಿದರು.

'ಈ ಮಾರ್ಗವನ್ನು ಹೆದ್ದಾರಿಯೆಂದು ಪರಿಗಣಿಸಿದ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾಹನಗಳ ನಿಲುಗಡೆಗೆ ಪರ್ಯಾಯ ಮಾರ್ಗ ಕಲ್ಪಿಸಬೇಕಿತ್ತು. ಆದರೆ, ಬಿಬಿಎಂಪಿ ಅಧಿಕಾರಿಗಳು ಚುನಾವಣೆ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಅವರ ನಿರ್ಲಕ್ಷ್ಯ ಧೋರಣೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ' ಎಂದು ಅಳಲು ತೋಡಿಕೊಂಡರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿ ಮುಖಂಡ ಗಣೇಶ್, ಕಲಾವಿದ ಪುಟ್ಟರಾಜ್, ಮೋಹನ್‌ಕುಮಾರ್ ನಾಯಕ್ ಇದ್ದರು.

ಆತ್ಮಹತ್ಯೆಗೆ ಯತ್ನಿಸಿದ ಬಿಎಂಟಿಸಿ ಚಾಲಕ

ಬೆಂಗಳೂರು: ಬಿಎಂಟಿಸಿಯ ಕೆಂಗೇರಿ ಡಿಪೊ ಎದುರು ಚಾಲಕ ಶ್ರೀನಿವಾಸ್ ಎಂಬುವವರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ತೀವ್ರ ಅಸ್ವಸ್ಥಗೊಂಡಿರುವ ಅವರನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

'37ನೇ ಡಿಪೊದಲ್ಲಿ ಕೆಲಸ ಮಾಡುತ್ತಿದ್ದ ಶ್ರೀನಿವಾಸ್, ಮಂಗಳವಾರ ಕೆಲಸಕ್ಕೆ ಬಂದಿದ್ದರು. ಕೆಲಸದ ಹಂಚಿಕೆ ವಿಚಾರವಾಗಿ ಮನನೊಂದು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದೇವೆ. ಅವರು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಸಹೋದ್ಯೋಗಿಯೊಬ್ಬರು ಹೇಳಿದರು.

'ಶ್ರೀನಿವಾಸ್ ಅವರಿಗೆ ಡಿಪೊ ವ್ಯವಸ್ಥಾಪಕ ಹಾಗೂ ಸಹಾಯಕ ಸಂಚಾರ ಅಧೀಕ್ಷಕಿ ಕಿರುಕುಳ ನೀಡುತ್ತಿದ್ದರು. ಕೆಲಸ ಹಂಚಿಕೆ ವಿಷಯದಲ್ಲಿ ಹಾಗೂ ರಜೆ ನೀಡಲು ಪೀಡಿಸುತ್ತಿದ್ದರು. ಇದರಿಂದ ನೊಂದು ಶ್ರೀನಿವಾಸ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ' ಎಂದು ಅವರು ತಿಳಿಸಿದರು.

ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಮಂಗಳವಾರ ರಾತ್ರಿಯವರೆಗೂ ಯಾವುದೇ ಪ್ರಕರಣ ದಾಖಲಾಗಿಲ್ಲ.

ತಾಯಿ–ಮಗು ಸಾವು ಪ್ರಕರಣ ಬಿಎಂಆರ್‌ಸಿಎಲ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು–ನಾಗವಾರ ಮಧ್ಯೆ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಕುಸಿದು ಬಿದ್ದು ಮಹಿಳೆ ಮತ್ತು ಗಂಡು ಮಗು ಸಾವಿಗೀಡಾಗಿದ್ದ ಘಟನೆಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವೂ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬಿಎಂಆರ್‌ಸಿಎಲ್ ಮುಖ್ಯ ಎಂಜಿನಿಯರ್ ಹಾಗೂ ಮೆಸರ್ಸ್ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ (ಎನ್‌ಸಿಸಿ) ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

‘ಪಿಲ್ಲರ್ ಕುಸಿತ ಹಾಗೂ ಬ್ರಿಗೇಡ್ ರಸ್ತೆಯಲ್ಲಿ ಗುಂಡಿ ಬಿದ್ದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮ ವರದಿಗಳನ್ನು ಆಧರಿಸಿ ಈ ಪಿಐಎಲ್ ದಾಖಲಿಸಿಕೊಳ್ಳಲಾಗಿದೆ. ಮಹಿಳೆ ಮತ್ತು ಅಂಬೆಗಾಲಿಡುವ ಮಗುವೊಂದರ ದುರದೃಷ್ಟಕರ ಸಾವಿನ ಸುದ್ದಿಗಳು ನಮ್ಮಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಿ’ ಎಂದು ಬಿಎಂಆರ್‌ಸಿಎಲ್‌ಗೆ ನ್ಯಾಯಪೀಠ ಆದೇಶಿಸಿದೆ.

‘ಜಾತಿ ವ್ಯವಸ್ಥೆ ಒಂದು ಘೋರ ವಿಷ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ವ್ಯವಸ್ಥೆ ಘೋರ ವಿಷ ಎಂಬುದನ್ನು ಮಕ್ಕಳಿಗೆ ಬೋಧಿಸುವ ಕೆಲಸವಾಗಬೇಕು’ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ಶೇಷಾದ್ರಿಪುರ ಕಾಲೇಜಿನಲ್ಲಿ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು. ಗಾಂಧೀಜಿ, ಅಂಬೇಡ್ಕರ್, ಕುವೆಂಪು ಅವರು ಕಂಡಿದ್ದ ಕನಸುಗಳಿಗೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದು, ಗಾಂಧೀಜಿ ಅವರನ್ನು ಪ್ರತಿದಿನ ಕೊಲ್ಲುತ್ತಿದ್ದೇವೆ. ಸಂವಿಧಾನ ನಮಗೆ ಅಪ್ರಸ್ತುತವಾಗುತ್ತಿದ್ದು, ಎಲ್ಲೆಡೆ ಕ್ರೌರ್ಯ ತಾಂಡವವಾಡುತ್ತಿದೆ. ಜಾತಿಯ ಹೆಸರಿನಲ್ಲಿ ಅಸ್ಪೃಶ್ಯತೆ ಆಚರಣೆ ಈಗಲು ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ‘ಹಿಂದೆಂದಿಗಿಂತಲೂ ಇಂದು ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಪ್ರಸ್ತುತರಾಗುತ್ತಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರೊಡನೆ ನಾವು ಆತ್ಮೀಯ ಸಂಬಂಧ ಬೆಳೆಸಿಕೊಂಡಿರುತ್ತೇವೆ. ಹೀಗಾಗಿ ಅವರನ್ನು ಏಕವಚನದಲ್ಲೇ ಸಂಬೋಧಿಸುತ್ತೇವೆ. ಮೂಡ್ನಾಕೂಡು ಚಿನ್ನಸ್ವಾಮಿ ಅವರ ಒಂದೊಂದು ಕವನವೂ ಒಂದೊಂದು ಸಂದೇಶ ನೀಡುತ್ತದೆ’ ಎಂದರು.

ಕವಿ ಸುಬ್ಬು ಹೊಲೆಯಾರ್ ಮಾತನಾಡಿ, ‘ಒಬ್ಬ ದಲಿತ ಹೆಣ್ಣುಮಗಳು ಸಾರ್ವಜನಿಕ ಕೊಳದಲ್ಲಿ ನೀರು ಕುಡಿದುದಕ್ಕೆ, ಚಿಕ್ಕ ದಲಿತ ಮಗು ದೇವಸ್ಥಾನದೊಳಕ್ಕೆ ಪ್ರವೇಶ ಮಾಡಿದ್ದಕ್ಕೆ ಶಿಕ್ಷಿಸಿದ ಉದಾಹರಣೆಗಳಿವೆ. ಇಂತಹ ಘಟನೆಗಳನ್ನು ಸಾಹಿತ್ಯದ ಮೂಲಕ ಇವರಿಬ್ಬರೂ ಖಂಡಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಅಸ್ಪೃಶ್ಯಲೋಕ, ಸ್ತ್ರೀಲೋಕ ಎರಡೂ ಸಮುದಾಯಗಳನ್ನು ಅಭಿನಂದಿಸಿದ್ದೇವೆ’ ಎಂದು ಹೇಳಿದರು. ವೂಡೇ.ಪಿ. ಕೃಷ್ಣ, ಪತ್ರಕರ್ತ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, ಸಾಹಿತಿ ದ್ವಾರನಕುಂಟೆ ಪಾತಣ್ಣ, ‘ಸುಧಾ’ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಸತ್ಯಮಂಗಲ ಮಹಾದೇವ್, ಆರ್.ಜಿ.ಹಳ್ಳಿ ನಾಗರಾಜ್, ಸಿದ್ದಲಿಂಗಯ್ಯ ಬನ್ನಂಗಾಡಿ ಇದ್ದರು.



ಶೇಷಾದ್ರಿಪುರ ಕಾಲೇಜಿನಲ್ಲಿ ಸೋಮವಾರ ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮೂಡ್ನಾಕೂಡು ಚಿನ್ನಸ್ವಾಮಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಅವರನ್ನು ಸನ್ಮಾನಿಸಲಾಯಿತು.

ಪಹಣಿ ತಿದ್ದುಪಡಿ: ಡಿ.31ರವರೆಗೆ ತಹಶೀಲ್ದಾರ್‌ಗೆ ಅಧಿಕಾರ

ಬೆಂಗಳೂರು: ‘ಕಂದಾಯ ಅದಾಲತ್‌ಗಳನ್ನು ನಡೆಸಿ ಪಹಣಿಗಳಲ್ಲಿರುವ ಲೋಪದೋಷ ತಿದ್ದುಪಡಿ ಮಾಡುವ ಅಧಿಕಾರವನ್ನು ಸಹಾಯಕ ಆಯುಕ್ತರಿಂದ ತಹಶೀಲ್ದಾರ್‌ಗೆ ನೀಡಿದ್ದ ಅವಧಿಯನ್ನು 2023ರ ಡಿ.31ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಪಹಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಕಾರ್ಯವನ್ನು ತ್ವರಿತಗೊಳಿಸುವ ಉದ್ದೇಶದಿಂದ, ತಿದ್ದುಪಡಿ ಅಧಿಕಾರವನ್ನು ತಹಶೀಲ್ದಾರ್‌ಗೆ ನೀಡಿದ್ದ ಅವಧಿ 2022ರ ಡಿ. 31ಕ್ಕೆ ಕೊನೆಗೊಂಡಿತ್ತು. ಇದೀಗ ಮತ್ತೆ ಒಂದು ವರ್ಷ ಅವಧಿಗೆ ವಿಸ್ತರಿಸಲಾಗಿದೆ.

ದಕ್ಷಿಣ ಕನ್ನಡ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಈ ಮೂರು ಜಿಲ್ಲೆಗಳನ್ನು ಹೊರತುಪಡಿಸಿ, ರಾಜ್ಯದ ಉಳಿದ ಕಡೆಗಳಲ್ಲಿ ತಾಲ್ಲೂಕು ಗ್ರಾಮ ಲೆಕ್ಕಾಧಿಕಾರಿಗಳ ಮಟ್ಟದಲ್ಲಿ ಕಂದಾಯ ಅದಾಲತ್ ನಡೆಸಿ ಪಹಣಿಗಳಲ್ಲಿ ಲೋಪದೋಷಗಳನ್ನು ಸರಿಪಡಿಸಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಇಂಥ ಲೋಪಗಳನ್ನು ಸರಿಪಡಿಸಲಾಗಿದ್ದು, ಅರ್ಜಿಗಳು ಇನ್ನೂ ಬಾಕಿ ಇವೆ. ಅರ್ಜಿಗಳನ್ನು ಶೀಘ್ರ ವಿಲೇ ಮಾಡುವ ಉದ್ದೇಶದಿಂದ ಅವಧಿ ವಿಸ್ತರಿಸಲಾಗಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಜಾರ್ಖಂಡ್: ಬೆಂಕಿ ಅವಘಡ 14 ಮಂದಿ ದಹನ

ಧನ್‌ಬಾದ್, ಜಾರ್ಖಂಡ್ (ಪಿಟಿಐ): ಇಲ್ಲಿನ ಜೋರಫಾತಕ್ ವಲಯದ ಬಹುಮಹಡಿ ಕಟ್ಟಡದಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಅಗ್ನಿಅವಘಡದಲ್ಲಿ ಮೂವರು ಮಕ್ಕಳು ಸೇರಿ 14 ಮಂದಿ ಜೀವಂತದಹನವಾಗಿದ್ದಾರೆ.

‘ಹಲವರು ಕಟ್ಟಡದಲ್ಲಿ ಸಿಲುಕಿದ್ದಾರೆ. ಅಗ್ನಿಶಾಮಕ ಸೇವೆಯ 40 ವಾಹನಗಳು ಧಾವಿಸಿದ್ದು, ರಕ್ಷಣಾ ಕಾರ್ಯ ನಡೆದಿದೆ’ ಎಂದು ಡಿಸಿಪಿ ಸಂದೀಪ್ ಸಿಂಗ್ ಹೇಳಿದರು. ‘11 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ‘ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಖದೇವ್ ಸಿಂಗ್ ಅವರು ತಿಳಿಸಿದ್ದಾರೆ.

ಈ ಮಧ್ಯೆ, ಮಾಜಿ ಮುಖ್ಯಮಂತ್ರಿ ಬಾಬುಲಾಲ್ ಮರಂಡಿ ಟ್ವೀಟ್ ಮಾಡಿದ್ದು, ಕಟ್ಟಡದಲ್ಲಿ ಇನ್ನೂ 50 ಮಂದಿ ಸಿಲುಕಿದ್ದಾರೆ ಎಂದಿದ್ದಾರೆ.

ಏರೊ ಇಂಡಿಯಾ: ಕ್ರೇನ್ ಎತ್ತರ ತಗ್ಗಿಸಲು ಸೂಚನೆ

ಬೆಂಗಳೂರು: ಏರೊ ಇಂಡಿಯಾ ವೈಮಾನಿಕ ಪ್ರದರ್ಶನದ ಹಿನ್ನೆಲೆಯಲ್ಲಿ ಯಲಹಂಕ ವಾಯುನೆಲೆಯ ಸುತ್ತಮುತ್ತ ನಿರ್ಮಾಣ ಹಂತದ ಕಟ್ಟಡ ಮೇಲಿರುವ ಕ್ರೇನ್‌ಗಳ ಎತ್ತರವನ್ನು ತಗ್ಗಿಸುವಂತೆ ಬಿಬಿಎಂಪಿ ಸೂಚಿಸಿದೆ.

ಏ.13ರಿಂದ 17ರವರೆಗೆ ಏರೊ ಇಂಡಿಯಾ ವೈಮಾನಿಕ ಪ್ರದರ್ಶನ ನಡೆಯಲಿದ್ದು, ಈ ಸುತ್ತಮುತ್ತಲಿನ 5 ಕಿ.ಮೀ ವ್ಯಾಪ್ತಿಯಲ್ಲಿರುವ ಬೃಹತ್ ಕಟ್ಟಡಗಳಲ್ಲಿ ಉಪಯೋಗಿಸುವ ಕ್ರೇನ್ ಮಟ್ಟವನ್ನು ಈ ಅವಧಿಯಲ್ಲಿ ತಗ್ಗಿಸಬೇಕು. ಅಲ್ಲದೆ, ಕ್ರೇನ್ ಚಟುವಟಿಕೆ ನಡೆಸಬಾರದು ಎಂದು ನಗರ ಯೋಜನೆಯ ಉತ್ತರ ವಿಭಾಗದ ಜಂಟಿ ನಿರ್ದೇಶಕ ಮಂಜೇಶ್ ತಿಳಿಸಿದ್ದಾರೆ



ರೋಹಿತ್ ಅವರ ತಂದೆ ರಾಜಣ್ಣ ಮತ್ತು ತಾಯಿ ಲಲಿತಮ್ಮ ಅವರು ಜಗನ್ನಾಥ್ ಕಾಳೇನಹಳ್ಳಿ ಅವರಿಗೆ 'ರೋಹಿತ್ ಮಾಧ್ಯಮ ಪ್ರಶಸ್ತಿ'ಯನ್ನು ಮಂಗಳವಾರ ಪ್ರದಾನ ಮಾಡಿದರು

ಜಗನ್ನಾಥ್ ಕಾಳೇನಹಳ್ಳಿಗೆ 'ರೋಹಿತ್ ಮಾಧ್ಯಮ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವ ಉಳಿಯಲು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಜೊತೆಯಾಗಿ ಕೆಲಸ ಮಾಡಬೇಕು. ಈ ಮೂರೂ ಅಂಗಗಳು ಉತ್ತಮವಾಗಿ ಕೆಲಸ ಮಾಡುವಂತೆ ಪತ್ರಿಕಾರಂಗ ಎಚ್ಚರಿಕೆ ವಹಿಸಬೇಕು' ಎಂದು ಕ್ರಿಸ್ತು ಜಯಂತಿ ಕಾಲೇಜಿನ ಪ್ರಾಂಶುಪಾಲ ಅಗಸ್ಟೀನ್ ಜಾರ್ಜ್ ಹೇಳಿದರು.

ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ರೋಹಿತ್ ಮಾಧ್ಯಮ ಪ್ರಶಸ್ತಿ' ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈಗಿನ ಪರಿಸ್ಥಿತಿಯಲ್ಲಿ ಮಾಧ್ಯಮ ಪ್ರಮುಖ ಪಾತ್ರವಹಿಸುತ್ತದೆ. ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪತ್ರಕರ್ತರು ನಿಷ್ಠೆ ಮತ್ತು ಪ್ರಾಮಾಣಿಕತೆ ಉಳಿಸಿಕೊಳ್ಳಬೇಕು. ಯುವ ಪತ್ರಕರ್ತರಿಗೆ ಸೂಕ್ತ ಶಿಕ್ಷಣ ಮತ್ತು ತರಬೇತಿ ನೀಡಬೇಕು. ರೋಹಿತ್, ಚಿಕ್ಕ ವಯಸ್ಸಿನಲ್ಲೇ ಟೈಮ್ಸ್ ಆಫ್ ಇಂಡಿಯಾ ಸೇರಿ ಹಲವು ಪತ್ರಿಕೆಗಳಲ್ಲಿ ಕೆಲಸ ಮಾಡಿ ಹೆಸರು ಗಳಿಸಿದ್ದು, ಆಕಸ್ಮಿಕವಾಗಿ ನಿಧನರಾದರು. ಅವರ ತಂದೆ-ತಾಯಿ ಮಗನ ಹೆಸರಿನಲ್ಲಿ ಈ ಪ್ರಶಸ್ತಿ ಸ್ಥಾಪನೆ ಮಾಡಿರುವುದು ಸ್ವಾಗತಾರ್ಹ' ಎಂದರು.

ಐಎಂಎಸ್ಆರ್ ಸಂಸ್ಥೆಯ ಅಧ್ಯಕ್ಷ ಪ್ರೊ. ಕೆ.ವಿ. ನಾಗರಾಜ್ ಮಾತನಾಡಿದರು.

ರೋಹಿತ್ ಅವರ ತಂದೆ ರಾಜಣ್ಣ ಮತ್ತು ತಾಯಿ ಲಲಿತಮ್ಮ ಅವರು ಜಗನ್ನಾಥ್ ಕಾಳೇನಹಳ್ಳಿ ಅವರಿಗೆ 'ರೋಹಿತ್ ಮಾಧ್ಯಮ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು.

ಜೆಡಿಎಸ್ ಹಣಿಯಲು ಬಿಜೆಪಿ, ಕಾಂಗ್ರೆಸ್ ತಯಾರಿ

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023 | ಕ್ಷೇತ್ರ ಸ್ಥಿತಿ ಗತಿ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಆಗ್ನೇಯ ಏಷ್ಯಾದಲ್ಲಿಯೇ ಅತಿ ದೊಡ್ಡ ಕೈಗಾರಿಕಾ ಪ್ರದೇಶ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿರುವ ಪೀಣ್ಯ ಕೈಗಾರಿಕಾ ಪ್ರದೇಶವನ್ನು ಒಳಗೊಂಡಿರುವ ದಾಸರಹಳ್ಳಿ ವಿಧಾನಸಭಾ ಕ್ಷೇತ್ರವು, ಹೆಚ್ಚು ವಲಸಿಗರಿಂದಲೇ ಕೂಡಿದೆ.

ಈ ಕ್ಷೇತ್ರದಲ್ಲಿ ಐದು ಸಾವಿರಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿವೆ. ಅಸಂಖ್ಯಾತ ಜನರಿಗೆ ಉದ್ಯೋಗ ನೀಡಿರುವ ಈ ಕೈಗಾರಿಕಾ ಪ್ರದೇಶದಲ್ಲಿ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯ ಮತ್ತು ಹೊರರಾಜ್ಯದ ವಲಸಿಗರಿದ್ದಾರೆ. ಇಂತಹ ವೈವಿಧ್ಯದಿಂದ ಕೂಡಿರುವ ಈ ಕ್ಷೇತ್ರದಲ್ಲಿ ಜೆಡಿಎಸ್‌ನ ಬಲ ಕುಗ್ಗಿಸಲು ಬಿಜೆಪಿ ಮತ್ತು ಕಾಂಗ್ರೆಸ್ ಪೈಪೋಟಿಗಿಳಿದಿವೆ.

ಜೆಡಿಎಸ್‌ನ ಹಾಲಿ ಶಾಸಕ ಆರ್. ಮಂಜುನಾಥ್ ಈ ಬಾರಿಯೂ ಸ್ಪರ್ಧಿಸಲಿದ್ದು, ಅವರಿಗೆ ಟಿಕೆಟ್ ಘೋಷಿಸಲಾಗಿದೆ. ಬಿಜೆಪಿಯಿಂದ ಮಾಜಿ ಶಾಸಕ ಎಸ್. ಮುನಿರಾಜು ಮತ್ತು ದಾಸರಹಳ್ಳಿ ಮಂಡಲ ಅಧ್ಯಕ್ಷ ಮತ್ತು ಪಾಲಿಕೆಯ ಮಾಜಿ ಸದಸ್ಯ ಎನ್. ಲೋಕೇಶ್ ಅವರ ಹೆಸರುಗಳು ಕೇಳಿಬರುತ್ತಿವೆ. ಮುನಿರಾಜು ಅವರು 2008 ಮತ್ತು 2013ರಲ್ಲಿ ಸತತ ಎರಡು ಬಾರಿ ಗೆಲವು ಸಾಧಿಸಿದ್ದರು. 2018ರ ಚುನಾವಣೆಯಲ್ಲಿ ಮಂಜುನಾಥ್ ಅವರ ವಿರುದ್ಧ 10,675 ಮತಗಳ ಅಂತರದಿಂದ ಮುನಿರಾಜು ಪರಾಭವಗೊಂಡಿದ್ದರಿಂದ ಹ್ಯಾಟ್ರಿಕ್ ಕನಸು ಭಗ್ನಗೊಂಡಿತ್ತು.

ಮುನಿರಾಜು ಅವರು, 2008ರಲ್ಲಿ 22,155 ಮತಗಳ ಅಂತರದಿಂದ ಹಾಗೂ 2013ರಲ್ಲಿ 10,828 ಮತಗಳ ಅಂತರದಿಂದ ಜಯಗಳಿಸಿದ್ದರು. ಈ ಬಾರಿಯೂ ಮತ್ತೊಮ್ಮೆ ಚುನಾವಣಾ ಅಖಾಡಕ್ಕಿಳಿಯಲು ಅವರು ಸಿದ್ಧತೆ ನಡೆಸಿ, ಕ್ಷೇತ್ರದಲ್ಲಿ ಸುತ್ತಾಡುತ್ತಿದ್ದಾರೆ.

ಕಾಂಗ್ರೆಸ್‌ನಿಂದ ಪಿ.ಎನ್. ಕೃಷ್ಣಮೂರ್ತಿ, ಡಾ. ನಾಗಲಕ್ಷ್ಮಿ ಸೇರಿದಂತೆ 9 ಆಕಾಂಕ್ಷಿಗಳು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಇವರಲ್ಲಿ ಕೆಲವರು ಈಗಾಗಲೇ ಪ್ರಚಾರದಲ್ಲಿಯೂ ತೊಡಗಿದ್ದಾರೆ. ಆಮ್ ಆದ್ಮಿ ಪಕ್ಷದಿಂದ ಎಂ. ಕೀರ್ತನ್ ಕುಮಾರ್ ನಿಯೋಜಿತ ಅಭ್ಯರ್ಥಿಯಾಗಿದ್ದಾರೆ.

ಈ ಕ್ಷೇತ್ರದಲ್ಲಿ 2008ರಲ್ಲಿ ಬಿಜೆಪಿ-ಕಾಂಗ್ರೆಸ್ ನಡುವೆ ಪೈಪೋಟಿ ನಡೆದಿತ್ತು. 2013ರಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಹಾಗೂ 2018ರಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಡುವೆ ಸ್ಪರ್ಧೆ ನಡೆದಿತ್ತು.


ಕ್ಷೇತ್ರದಲ್ಲಿನ ಮೂಲಸೌಕರ್ಯ ಕೊರತೆಗೆ ಪರಿಹಾರ ದೊರೆತಿಲ್ಲ. ಒಳಚರಂಡಿ, ರಸ್ತೆ, ಕುಡಿಯುವ ನೀರು, ಸಂಚಾರದ ಸಮಸ್ಯೆಗಳು ಮುಕ್ತಿ ಕಂಡಿಲ್ಲ. ಸರ್ಕಾರ ಈ ಕ್ಷೇತ್ರಕ್ಕೆ ಅಗತ್ಯವಿರುವಷ್ಟು ಅನುದಾನ ನೀಡಿಲ್ಲ ಎಂದು ಶಾಸಕ ಮಂಜುನಾಥ್ ಹಲವು ಬಾರಿ ದೂರಿದ್ದರು. ಆದರೆ, ಅನುದಾನವನ್ನು ಸಮರ್ಪಕವಾಗಿ ಬಳಸಿಲ್ಲ ಎನ್ನುವುದು ಬಿಜೆಪಿ ಮುಖಂಡರ ಆರೋಪ.

ಪುನರ್ ವಿಂಗಡಣೆ ನಂತರ 2008ರಲ್ಲಿ ಈ ಕ್ಷೇತ್ರದಲ್ಲಿ ಮೊದಲ ಬಾರಿ ಚುನಾವಣೆ ನಡೆದಿತ್ತು. ನಾಲ್ಕನೇ ಬಾರಿ ನಡೆಯಲಿರುವ ಚುನಾವಣೆಯಲ್ಲಿ 3 ಪಕ್ಷಗಳು ಬಲ ಪ್ರದರ್ಶನಕ್ಕೆ ಸಜ್ಜಾಗಿವೆ. ಅದರಲ್ಲೂ, ಜೆಡಿಎಸ್ ಮತ್ತು ಬಿಜೆಪಿ ನಡುವೆ ನಡೆಯುತ್ತಿರುವ ಪ್ರಬಲ ಪೈಪೋಟಿಯಲ್ಲಿ ಕಾಂಗ್ರೆಸ್ ಸಹ ತನ್ನ ಮತ ಬ್ಯಾಂಕ್ ಬಲಪಡಿಸಿಕೊಳ್ಳಲು ಹೋರಾಟ ನಡೆಸುತ್ತಿದೆ.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ



ಆರ್. ಮಂಜುನಾಥ್
ಹಾಲಿ ಶಾಸಕ (ಜೆಡಿಎಸ್)



ಹಾಲಿ ಮತದಾರರ ವಿವರ

2,32,065 ಪುರುಷರು
2,00,614 ಮಹಿಳೆಯರು
72 ತೃತೀಯ ಲಿಂಗಿಗಳು
4,32,751 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	31,711	46,734	36,849
ಬಿಜೆಪಿ	83,369	57,562	59,004
ಜೆಡಿಎಸ್	94,044	43,049	28,024


ಸುದ್ದಿ 2 ನಿಮಿಷ

ಬಿಎಸ್‌ಪಿಗೆ ಪುಟ್ಟಸಿದ್ದಶೆಟ್ಟಿ ಸೇರ್ಪಡೆ

ಬೆಂಗಳೂರು: ವಿಧಾನಪರಿಷತ್‌ನ ಮಾಜಿ ಸದಸ್ಯ ಹಾಗೂ ಅತಿ ಹಿಂದುಳಿದ ಕಾಯಕ ಸಮುದಾಯಗಳ ನಾಯಕ ಪುಟ್ಟಸಿದ್ದಶೆಟ್ಟಿ ಮಂಗಳವಾರ ಬಹುಜನ ಸಮಾಜ ಪಾರ್ಟಿಗೆ(ಬಿಎಸ್‌ಪಿ) ಸೇರ್ಪಡೆಯಾದರು.

ನಂತರ ಮಾತನಾಡಿದ ಪುಟ್ಟಸಿದ್ದಶೆಟ್ಟಿ, 'ಕಾಂಗ್ರೆಸ್ ಪಕ್ಷದಲ್ಲಿ ಮೇಲ್ವರ್ಗದವರಿಗೆ ಮಾತ್ರ ಹೆಚ್ಚಿನ ಅವಕಾಶಗಳನ್ನು ನೀಡಲಾಗುತ್ತಿದೆ. ಜೊತೆಗೆ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಬಣಗಳ ಮಧ್ಯೆ ನಡೆಯುವ ಜಗಳದಿಂದ ಜನ ಬೇಸತ್ತಿದ್ದಾರೆ. ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಪಡೆಯುವುದಕ್ಕೆ ಸೀಮಿತವಾಗಿದೆ. ಜೆಡಿಎಸ್ ಎಂಬುದು ಕೇವಲ ಒಂದು ಕುಟುಂಬಕ್ಕೆ ಸೀಮಿತವಾದ ಪಕ್ಷವಾಗಿ ಮಾರ್ಪಟ್ಟಿದೆ' ಎಂದರು.

'ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದ 224 ಕ್ಷೇತ್ರಗಳಲ್ಲಿ ಬಿಎಸ್‌ಪಿ ಪಕ್ಷ ಸ್ಪರ್ಧಿಸಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಹಾಗೂ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ 100 ವಿಧಾನಸಭಾ ಕ್ಷೇತ್ರಗಳಲ್ಲಿ ಅವಕಾಶ ನೀಡಲಾಗುವುದು. ವಿಧಾನಸಭೆ ಚುನಾವಣೆಯಲ್ಲಿ ಪ್ರಾತಿನಿಧ್ಯವನ್ನೇ ಪಡೆಯದ ಹಿಂದುಳಿದ ಕಾಯಕ ಸಮುದಾಯದವರು ಕನಿಷ್ಠ 50 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ' ಎಂದು ಪಕ್ಷದ ರಾಜ್ಯ ಸಂಯೋಜಕ ಮತ್ತು ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಮಾಹಿತಿ ನೀಡಿದರು.



'ಅರ್ಕಾವತಿ ಬಡಾವಣೆ: ತ್ವರಿತವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಿ'

ಬೆಂಗಳೂರು: 'ಅರ್ಕಾವತಿ ಬಡಾವಣೆಯ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ಆಯುಕ್ತ ಕುಮಾರ್ ನಾಯಕ್ ಅಧಿಕಾರಿಗಳಿಗೆ ಸೂಚಿಸಿದರು.

ಬಿಡಿಎ ಕಚೇರಿಯಲ್ಲಿ ಮಂಗಳವಾರ ನಡೆದ 'ಅರ್ಕಾವತಿ ಬಡಾವಣೆಯ ಭೂಸ್ವಾಧೀನತೆಯ ಸಮಸ್ಯೆಗಳ ಹಾಗೂ ಕಾಮಗಾರಿಗಳ ಪ್ರಸ್ತುತ ಪ್ರಗತಿ' ಕುರಿತು ಪ್ರಾಧಿಕಾರದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಅರ್ಕಾವತಿ ಬಡಾವಣೆಯ 13 ಗ್ರಾಮಗಳ ವ್ಯಾಪ್ತಿಯಲ್ಲಿ ₹234.17 ಕೋಟಿ ಮೊತ್ತದ ರಸ್ತೆ ಅಭಿವೃದ್ಧಿ, ಆರ್‌ಸಿಸಿ ಚರಂಡಿ ನಿರ್ಮಾಣ ಕಾಮಗಾರಿಗಳು ಮುಕ್ತಾಯ ಹಂತದಲ್ಲಿವೆ. ಬಡಾವಣೆಗೆ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗಾಗಿ ₹490,00 ಕೋಟಿ ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಬೆಂಗಳೂರು ಜಲಮಂಡಳಿಗೆ ಪ್ರಥಮ ಹಂತದಲ್ಲಿ ₹150 ಕೋಟಿಗಳನ್ನು ಠೇವಣಿ ಮಾಡಿದ್ದು, ಈಗಾಗಲೇ ಟೆಂಡರ್ ಕರೆಯಲಾಗಿದೆ. ವಿದ್ಯುದೀಕರಣಕ್ಕೆ ₹245.45 ಕೋಟಿ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕೂಡಲೇ ಪೂರ್ಣಗೊಳಿಸಿ' ಎಂದು ಬಿಡಿಎ ಆಯುಕ್ತ ಕುಮಾರ ನಾಯಕ್ ಅಧಿಕಾರಿಗಳಿಗೆ ಸೂಚಿಸಿದರು.

ಬಡಾವಣೆಯ ಭೂಸ್ವಾಧೀನ ಕುರಿತಂತೆ 2003ರಿಂದ ಭೂಮಾಲೀಕರು ಪ್ರತಿರೋಧ ವ್ಯಕ್ತಪಡಿಸುತ್ತಿರುವ ಹಾಗೂ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣಗಳ ಬಗ್ಗೆ ನ್ಯಾಯಮೂರ್ತಿ ಕೆ.ಎನ್. ಕೇಶವ ನಾರಾಯಣ ಸಮಿತಿಯ ಪ್ರಸ್ತುತ ವಿಚಾರಣೆ ಹಾಗೂ ವರದಿ ನೀಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸ್ಯಾಂಕಿ ರಸ್ತೆ ಮೇಲ್ಸೇತುವೆಗೆ ಸ್ಥಳೀಯ ನಾಗರಿಕರ ವಿರೋಧ

ಯೋಜನೆ ಮರು ಚಿಂತನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ರಸ್ತೆ ಮೇಲ್ಸೇತುವೆಗೆ ಸ್ಥಳೀಯ ನಾಗರಿಕರ ವಿರೋಧವಿದೆ. ಈ ಯೋಜನೆ ಬಗ್ಗೆ ಮರುಚಿಂತನೆ ನಡೆಸಬೇಕು ಎಂದು ನಿರ್ಣಯ ಕೈಗೊಂಡು ಸರ್ಕಾರ ಹಾಗೂ ಬಿಬಿಎಂಪಿಗೆ ಕಳುಹಿಸಲು 'ಸ್ಯಾಂಕಿ ಕೆರೆ ತಂಡ'ದ ಸದಸ್ಯರು ನಿರ್ಧರಿಸಿದರು.

ಸ್ಯಾಂಕಿ ರಸ್ತೆ ಮೇಲ್ಸೇತುವೆ ನಿರ್ಮಾಣದ ಬಗ್ಗೆ ವೈಯಾಲಿಕಾವಲ್, ಮಲ್ಲೇಶ್ವರ, ಸದಾಶಿವನಗರದ ಜನತೆ, ವ್ಯಾಪಾರಿಗಳು ಹಾಗೂ ತಜ್ಞರು ಮಂಗಳವಾರ ಸಂವಾದ ನಡೆಸಿದರು. ಮೇಲ್ಸೇತುವೆ ನಿರ್ಮಾಣದಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂದು ತಜ್ಞರುಅಭಿಪ್ರಾಯಪಟ್ಟರೆ, ಮೇಲ್ಸೇತುವೆಯಿಂದ ಸ್ಥಳೀಯರಿಗೆ ಹೆಚ್ಚಿನ ಸಮಸ್ಯೆ ಉಂಟಾಗುತ್ತದೆ ಎಂದು ನಾಗರಿಕರು ಹೇಳಿದರು. ಮೇಲ್ಸೇತುವೆ ನಿರ್ಮಾಣದಿಂದ ಸಮಸ್ಯೆ ಬಗೆಹರಿಯಲಿದೆ, ಎಲ್ಲ ರೀತಿಯ ಮಾಹಿತಿ, ಅಭಿಪ್ರಾಯ ತೆಗೆದು ಕೊಂಡೇ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಹೇಳಿದರು.

ಸುಮಾರು ಎರಡೂವರೆ ಗಂಟೆ ನಡೆದ ಸಂವಾದದಲ್ಲಿ ಹೆಚ್ಚು ಹೊತ್ತು ತಜ್ಞರು ಮಾಹಿತಿ ನೀಡಿದರು. ನಂತರ ನಡೆದ 15 ನಿಮಿಷದ ಪ್ರಶ್ನೋತ್ತರ ಗೊಂದಲಮಯವಾಗಿ ಕೊನೆಗೆ ನಿರ್ಣಯವನ್ನು ಪತ್ರದ ಮೂಲಕ ಎಲ್ಲರಿಗೂ ತಲುಪಿಸಲು ನಿರ್ಧರಿಸಿದರು.

ಐಐಎಸ್‌ಸಿಯ ಸುಸ್ಥಿರ ಸಾರಿಗೆ ವಿಭಾಗದ ಪ್ರೊ. ಆಶಿಷ್ ವರ್ಮಾ ಅವರು 'ಮೇಲ್ಸೇತುವೆಗಳಿಂದ ವಾಹನ ದಟ್ಟಣೆ ಕಡಿಮೆಯಾಗುವ ಬದಲು ಹೆಚ್ಚಾಗುತ್ತದೆ. ಮುಂದಿನ ಜಂಕ್ಷನ್‌ಗಳಲ್ಲಿ ದಟ್ಟಣೆ ಹೆಚ್ಚಾಗಿ ಸಮಯವೂ ಹೆಚ್ಚಾಗಿ ಉಳಿತಾಯವಾಗದು' ಎಂದು ಅಂಕಿ-ಅಂಶಗಳ ಸಹಿತ ಮಾತನಾಡಿದರು.

'ಸ್ಯಾಂಕಿ ರಸ್ತೆ ಮೇಲ್ಸೇತುವೆ ನಿರ್ಮಾಣದಲ್ಲಿ 50ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗುತ್ತದೆ. ಇದರಿಂದ ಪಾರಂಪರಿಕ ಮರಗಳು ಬುಡಮೇಲಾಗುತ್ತವೆ. ಇವುಗಳನ್ನು ರಕ್ಷಿಸಬೇಕು' ಎಂಬ ಆಗ್ರಹಕ್ಕೆ ಸಹಿ ಆಂದೋಲನವನ್ನು ಝುಟ್ಕಾ.ಒಆರ್‌ಜಿ ಸಂಸ್ಥೆ ವತಿಯಿಂದ ಆಯೋಜಿಸಲಾಗಿತ್ತು. ವಕೀಲರಾದ ಹರೀಶ್ ನರಸಪ್ಪ, ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ ಸಹ-ಸಂಸ್ಥಾಪಕಿ ಶಾಹೀನ್, ಪ್ರೊ. ರವೀಂದ್ರ ರೇಷ್ಮೆ ಮಾತನಾಡಿದರು.

ಪ್ರಹ್ಲಾದ್‌ಗೆ ಸಾರ್ವಜನಿಕರಿಂದ ತರಾಟೆ

ಸ್ಯಾಂಕಿ ರಸ್ತೆ ಮೇಲ್ಸೇತುವೆಯಿಂದ ಉಂಟಾಗುವ ಪರಿಸರ ನಷ್ಟಕ್ಕೆ ಪರಿಹಾರ ಏನು, ಮೇಲ್ಸೇತುವೆ ನಿರ್ಮಾಣದ ಸಮಯದಲ್ಲಿ ಉಂಟಾಗುವ ಮಾರ್ಗ ಬದಲಾವಣೆಯಿಂದ ಸ್ಥಳೀಯರಿಗಾಗುವ ಸಂಕಷ್ಟಕ್ಕೆ ಪರಿಹಾರ ಯಾವುದು, ಕಾವೇರಿ ಮ್ಯಾಜಿಕ್ ಬಾಕ್ಸ್‌ನಲ್ಲಿ ಉಂಟಾಗುವ ದಟ್ಟಣೆಗೆ ಯಾವ ಕ್ರಮ ಕೈಗೊಳ್ಳುತ್ತೀರಿ ಎಂಬ ನಾಗರಿಕರ ಪ್ರಶ್ನೆಗಳಿಗೆ ಉತ್ತರ ನೀಡಲು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ವಿಫಲರಾದರು.

'ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದಾಗ, 'ಈ ಮೂಲ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದೆ ನೀವು ಮೇಲ್ಸೇತುವೆ ನಿರ್ಮಾಣವನ್ನು ಹೇಗೆ ಕೈಗೊಳ್ಳುತ್ತೀರಿ' ಎಂದು ಸಾರ್ವಜನಿಕರು ತರಾಟೆಗೆ ತೆಗೆದುಕೊಂಡರು.

'ನಾಗರಿಕರು ತಮ್ಮ ಆತಂಕ ವ್ಯಕ್ತಪಡಿಸಿದ್ದಾರೆ. ಅವರ ಆತಂಕವನ್ನು ಹೋಗಲಾಡಿಸಿ, ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ' ಎಂದು ಪ್ರಹ್ಲಾದ್ ಸುದ್ದಿಗಾರರಿಗೆ ತಿಳಿಸಿದರು.

ಸಚಿವ ಅಶ್ವತ್ಥನಾರಾಯಣ ಎಲ್ಲಿ ಹೋದರು...?

'ಸ್ಯಾಂಕಿ ರಸ್ತೆ ಮೇಲ್ಸೇತುವೆ ಸಂಬಂಧ ಇಷ್ಟೊಂದು ಚರ್ಚೆ, ವಾದ-ಪ್ರತಿವಾದಗಳು ನಡೆಯುತ್ತಿದ್ದರೂ ಸ್ಥಳೀಯ ಶಾಸಕರೂ ಆಗಿರುವ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಎಲ್ಲಿ ಹೋದರು? ನಮ್ಮ ಈ ಸಮಸ್ಯೆಗೆ ಅವರು ಎಲ್ಲೂ ಪ್ರತಿಕ್ರಿಯಿಸುತ್ತಿಲ್ಲ. ಅವರನ್ನು ಇಲ್ಲಿಗೆ ಕರೆಯಿಸಿ' ಎಂದು ನಾಗರಿಕರು ಆಗ್ರಹಿಸಿದರು. ಸಂವಾದ ಆಯೋಜಕರು ಕೂಡ 'ಅಶ್ವತ್ಥನಾರಾಯಣ ಎಲ್ಲಿ' ಎಂಬ ಪ್ರಶ್ನೆ ನಮಗೂ ಇದೆ ಎಂದರು.

'ಬಡವರಿಗೆ ಮನೆ: ಕಾನೂನು ಸರಳಗೊಳಿಸಲು ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕವಾಗಿ ಹಿಂದುಳಿದವರು ವಸತಿಗಾಗಿ ನಿವೇಶನ ಪಡೆಯುವುದು ಸುಲಭವಾಗುವಂತೆ ಈಗಿರುವ ಭೂ ಕಂದಾಯ ಕಾನೂನನ್ನು ಸರಳಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಯಲಹಂಕ ತಾಲ್ಲೂಕಿನ ಅಗ್ರಹಾರ ಪಾಳ್ಯದಲ್ಲಿ ವಸತಿ ಇಲಾಖೆಯ ವತಿಯಿಂದ 'ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ' ಅಡಿ ಮಂಗಳವಾರ ಆಯೋಜಿಸಲಾಗಿದ್ದ ವಸತಿ ಸಮುಚ್ಚಯಗಳ ಲೋಕಾರ್ಪಣೆ, ಮನೆಗಳ ಹಸ್ತಾಂತರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಕಂದಾಯ ಕಾಯ್ದೆಯಲ್ಲಿ ಮನೆ ನಿರ್ಮಿಸಲು ನಿರ್ದಿಷ್ಟ ರಿಯಾಯಿತಿಗಳಿಲ್ಲ. ಈಗಿರುವ ಕಾನೂನುಗಳಿಂದ ಜನಸಾಮಾನ್ಯರು ನಿವೇಶನ ಖರೀದಿಸುವ ಪರಿಸ್ಥಿತಿ ಇಲ್ಲದಂತಾಗಿದೆ. ಹೀಗಾಗಿ, ಮನೆ ನಿರ್ಮಿಸಲು ಕಾನೂನಿಗೆ ತಿದ್ದುಪಡಿ ತಂದು, ನಿರ್ಬಂಧಗಳನ್ನು ತೆಗೆದು ಹಾಕಲಾಗುವುದು ಎಂದರು.

15ನೇ ಹಣಕಾಸು ಆಯೋಗದ ಅನುದಾನ: ಕ್ರಿಯಾ ಯೋಜನೆಗೆ ಅಸ್ತು

ವಾಯುಗುಣಮಟ್ಟ ಸುಧಾರಣೆಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ವಾಯು ಗುಣಮಟ್ಟ ಸುಧಾರಿಸಲು 11 ಚಟುವಟಿಕೆಗಳ ಕ್ರಿಯಾಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

2021-22ನೇ ಸಾಲಿಗೆ ನಿಗದಿಯಾಗಿದ್ದ ₹140 ಕೋಟಿ ಅನುದಾನದಲ್ಲಿ ಯೋಜನೆಗಳನ್ನು ಸಿದ್ಧಪಡಿಸಿ ಬಿಬಿಎಂಪಿ ಸರ್ಕಾರಕ್ಕೆ ಸಲ್ಲಿಸಿತ್ತು. ಈ ಅನುದಾನವನ್ನು 2021-2026ರ ಅವಧಿಯಲ್ಲಿ ಉಪಯೋಗಿಸಿಕೊಳ್ಳಬೇಕು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸಾರಿಗೆ ಇಲಾಖೆ, ಸಂಚಾರ ಪೊಲೀಸ್ ಸೇರಿ ವಿವಿಧ ಇಲಾಖೆಗಳಿಗೆ ಅನುದಾನ ಬಿಡುಗಡೆ ಆಗಲಿದೆ. ಅದರಂತೆ ಬಿಬಿಎಂಪಿ ಸೂಕ್ಷ್ಮ ಮಟ್ಟದ ಕ್ರಿಯಾಯೋಜನೆ (ಮೈಕ್ರೊ-ಪ್ಲಾನ್) ಸಿದ್ಧಪಡಿಸಿದೆ.

ಈ ಕ್ರಿಯಾಯೋಜನೆಗೆ ಅನುಮೋದನೆ ನೀಡಿರುವ ರಾಜ್ಯ ಸರ್ಕಾರ, 12 ಷರತ್ತುಗಳನ್ನು ವಿಧಿಸಿದೆ. ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ಪಡೆಯಬೇಕು, ಕೆಟಿಪಿಪಿ ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕವೇ ಟೆಂಡರ್ ಆಹ್ವಾನಿಸಬೇಕು. ಟೆಂಡರ್‌ಗೆ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕು.



ಕ್ರಿಯಾ ಯೋಜನೆಯಲ್ಲಿ ಇರುವ ಕಾಮಗಾರಿಗಳನ್ನು ಇತರೆ ಯೋಜನೆಗಳಲ್ಲಿ ಪರಿಗಣಿಸಿರಬಾರದು. ಅನುಮೋದಿತ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸರ್ಕಾರಿಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು. ಎಲ್ಲ ಕಾಮಗಾರಿಗಳು ಉತ್ತಮ ಗುಣಮಟ್ಟದ್ದಾಗಿರುವಂತೆ ಬಿಬಿಎಂಪಿ ಖಾತರಿಪಡಿಸಿಕೊಳ್ಳಬೇಕು. ನಿಗದಿತ ಸಮಯದಲ್ಲಿ ಚಟುವಟಿಕೆ ಪೂರ್ಣಗೊಳ್ಳಬೇಕು.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಕೇಂದ್ರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ನು ಪಾಲಿಸಬೇಕು. ವಾರ್ಷಿಕ ಗುರಿ ಸಾಧಿಸಲು ಕ್ರಮ ಕೈಗೊಳ್ಳಬೇಕು. ಮೂರನೇ ವ್ಯಕ್ತಿಯಿಂದ ತಪಾಸಣೆ ನಡೆಸಬೇಕು. ಕಾಮಗಾರಿ ಅನುಷ್ಠಾನದ ಸಂದರ್ಭದಲ್ಲಿ ಬದಲಾವಣೆ ಅನಿವಾರ್ಯವಾಗಿದ್ದರೆ ಸರ್ಕಾರದಿಂದ ಅನುಮೋದನೆ ಪಡೆಯಬೇಕು. ಅನುಷ್ಠಾನಗೊಳಿಸುವ ಇಲಾಖೆಗಳಿಗೆ ಹಣ ವರ್ಗಾಯಿಸಬೇಕು. ಕಾಮಗಾರಿಗಳ ಅನುಷ್ಠಾನದ ಬಗ್ಗೆ ಪ್ರತಿ ತ್ರೈಮಾಸಿಕದ ವರದಿಯನ್ನು ಸರ್ಕಾರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಬೇಕು ಎಂದು ಆದೇಶಿಸಲಾಗಿದೆ.

ವಾಯುಗುಣಮಟ್ಟ ಸುಧಾರಣೆ ಕ್ರಿಯಾಯೋಜನೆಯ ವಿವರ

ಸಂಖ್ಯೆ	ಕಾಮಗಾರಿ	ಒಟ್ಟು ವೆಚ್ಚ (₹ಕೋಟಿಗಳಲ್ಲಿ)	ನಿರ್ವಹಿಸುವ ಇಲಾಖೆ
1	15 ಇ-ಬಸ್ ಡಿಪೊಗಳ ಸ್ಥಾಪನೆ	20	ಬಿಎಂಟಿಸಿ
2	5 ಡಬಲ್ ಡೆಕರ್ ಇವಿ ಬಸ್	10	ಬಿಎಂಟಿಸಿ
3	ಸಾರ್ವಜನಿಕ ಸಾರಿಗೆ ಉತ್ತೇಜಿಸಲು ಪ್ರಚಾರ	1	ಬಿಎಂಟಿಸಿ
4	ನಮ್ಮ ಮೆಟ್ರೋಗೆ 100 ಫೀಡರ್ ಇವಿ ಬಸ್	15	ಬಿಎಂಟಿಸಿ
5	ಯಾಂತ್ರಿಕ ರಸ್ತೆ ಗುಡಿಸುವ ಯಂತ್ರ ಖರೀದಿ	30	ಘನತ್ಯಾಜ್ಯ ನಿರ್ವಹಣೆ ವಿಭಾಗ, ಬಿಬಿಎಂಪಿ
6	ಮುಖ್ಯ, ಉಪಮುಖ್ಯ ರಸ್ತೆಗಳಲ್ಲಿ ಕನಿಷ್ಠ 50 ಕಿಮೀ ಹೊಸ ಪಾದಚಾರಿ ಮಾರ್ಗ	30	ರಸ್ತೆ ಮೂಲಸೌಕರ್ಯ, ಬಿಬಿಎಂಪಿ
7	ಮೆಟ್ರೊ ಪಿಲ್ಲರ್, ಟಿಟಿಎಂಸಿ ಮತ್ತು ಬಿಎಂಟಿಸಿ ಬಸ್ ಡಿಪೊಗಳ ಮೇಲೆ ಉದ್ಯಾನ	5	ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಎಂಟಿಸಿ
8	ಕಟ್ಟಡ ನಿರ್ಮಾಣ ತ್ಯಾಜ್ಯ (ಸಿಆ್ಯಂಡ್‌ಡಿ) ಸಂಗ್ರಹಿಸಿ ಸಂಸ್ಕರಣೆ ಘಟಕಕ್ಕೆ ರವಾನೆ	20	ಘನತ್ಯಾಜ್ಯ ನಿರ್ವಹಣೆ ವಿಭಾಗ, ಬಿಬಿಎಂಪಿ
9	ಮೇಲ್ಸೇತುವೆಗಳ ಕೆಳಭಾಗದಲ್ಲಿ ಉದ್ಯಾನ ಹಾಗೂ ವಾಯುಮಾಲಿನ್ಯ ನಿಯಂತ್ರಿಸುವ ಸೌಲಭ್ಯ	5	ರಸ್ತೆ ಮೂಲಸೌಕರ್ಯ, ತೋಟಗಾರಿಕೆ ವಿಭಾಗ ಬಿಬಿಎಂಪಿ
10	ಬಿಬಿಎಂಪಿ ವ್ಯಾಪ್ತಿಯಲ್ಲಿ ಲಭ್ಯವಿರುವ ತೆರೆದ ಪ್ರದೇಶದಲ್ಲಿ ಮಿಯಾವಾಕಿ ಕಲ್ಪನೆಯಲ್ಲಿ ಸಣ್ಣ ಅರಣ್ಯ ಅಭಿವೃದ್ಧಿ	4	ಬಿಬಿಎಂಪಿಯ ತೋಟಗಾರಿಕೆ ವಿಭಾಗ ಹಾಗೂ ಸರ್ಕಾರದ ತೋಟಗಾರಿಕೆ ಇಲಾಖೆ

ಆರ್‌ವಿ ಕಾಲೇಜು ವಿದ್ಯಾರ್ಥಿಗೆ ವಾರ್ಷಿಕ ₹ 90 ಲಕ್ಷ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ದೊಡ್ಡ ಮೊತ್ತದ ವೇತನ ಒಳಗೊಂಡ ಉದ್ಯೋಗದ ಅವಕಾಶ ಪಡೆದಿದ್ದು, ಆರ್‌ವಿ ಕಾಲೇಜಿನ ರಕ್ಷಿತ್ ದತ್ತಾತ್ರೇಯ ಹೆಗಡೆ ಅವರಿಗೆ ವಾರ್ಷಿಕ ₹ 90 ಲಕ್ಷ ವೇತನದ ಅವಕಾಶ ದೊರೆತಿದೆ.

ರಕ್ಷಿತ್ ಮಾಹಿತಿ ವಿಜ್ಞಾನದಲ್ಲಿ ಐದನೇ ಸೆಮಿಸ್ಟರ್ ಓದುತ್ತಿದ್ದಾರೆ. ನ್ಯೂಯಾರ್ಕ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಯುಐಪಾತ್ ಸಾಫ್ಟ್‌ವೇರ್ ಕಂಪನಿ ವಾರ್ಷಿಕ ₹ 90 ಲಕ್ಷ ಉದ್ಯೋಗದ ಪ್ರಸ್ತಾಪ ನೀಡಿದೆ. ಇತರ ಮೂರು ವಿದ್ಯಾರ್ಥಿಗಳಿಗೆ ವಾರ್ಷಿಕ ₹ 65 ಲಕ್ಷ ರೂಪಾಯಿಗಳ ಉದ್ಯೋಗದ ಅವಕಾಶ ದೊರೆತಿದೆ.

'160ಕ್ಕೂ ಹೆಚ್ಚು ಕಂಪನಿಗಳು ಬಂದಿದ್ದವು. 846 ವಿದ್ಯಾರ್ಥಿಗಳು ಅವಕಾಶ ಪಡೆದಿದ್ದಾರೆ' ಎಂದು ಆರ್‌ವಿ ಎಂಜಿನಿಯರಿಂಗ್ ಕಾಲೇಜು ಉದ್ಯೋಗ, ತರಬೇತಿ ವಿಭಾಗದ ಡೀನ್ ರಂಗನಾಥ್ ಹೇಳಿದರು.

ನಮ್ಮ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಒಳ್ಳೆಯ ಕಂಪನಿಗಳಲ್ಲಿ ಅವಕಾಶಗಳು ಸಿಗುತ್ತಿವೆ. ಒಳ್ಳೆಯ ವೇತನ ಸಿಗುತ್ತಿದೆ. ವಿದೇಶಗಳಲ್ಲೂ ಇನ್ನಷ್ಟು ವಿಪುಲ ಅವಕಾಶಗಳು ದೊರೆಯುವ ನಿರೀಕ್ಷೆ ಇದೆ

ಎಂ.ಆರ್.ಸೀತಾರಾಂ, ಉಪಾಧ್ಯಕ್ಷರು, ರಾಮಯ್ಯ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್ಸ್

ಪಿಇಎಸ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೊಬ್ಬರು ವಾರ್ಷಿಕ ₹ 65 ಲಕ್ಷದ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ' ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್.ದೊರೆಸ್ವಾಮಿ ಪ್ರತಿಕ್ರಿಯಿಸಿದರು.

ದಯಾನಂದ ಸಾಗರ್ ಕಾಲೇಜಿನಲ್ಲಿ ವಿದ್ಯಾರ್ಥಿಯೊಬ್ಬರು ₹ 40 ಲಕ್ಷದ ಅವಕಾಶ ಪಡೆದಿದ್ದಾರೆ. ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ವಿದ್ಯಾರ್ಥಿಯೊಬ್ಬರು ಕ್ಯಾಲಿಫೋರ್ನಿಯಾದ ಸೈಬರ್ ಭದ್ರತಾ ಕಂಪನಿಯಲ್ಲಿ ವಾರ್ಷಿಕ ₹ 58 ಲಕ್ಷ ರೂಪಾಯಿ ವೇತನದ ಪ್ಯಾಕೇಜ್ ದೊರೆತಿದೆ.

ಉದ್ಯೋಗಾವಕಾಶ

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಮೂವರು ವಿದ್ಯಾರ್ಥಿಗಳಾದ ನಿಮಿತ್ ಅಗರವಾಲ್, ಜಿ.ಎಂ.ಸ್ವಪ್ನಾ, ಎ.ಎ. ಮೊಹಮದ್ ಜಾವಡ್ ಅಂತರಾಷ್ಟ್ರೀಯ ಕಂಪನಿಗಳಿಂದ ಉದ್ಯೋಗದ ಆಹ್ವಾನ ಪಡೆದಿದ್ದಾರೆ.

'ಅನ್‌ಮೋಲ್ ಪಂಡಿತ, ಸಾಹಿಲ್, ಸಾಯಿ ಆಕಾಶ್ ಪೊತೇಪಲ್ಲಿ, ಅನ್ಷ್ ಪಸರಿ ಅವರು ಇಂಟರ್ನ್‌ಶಿಪ್‌ನಲ್ಲಿ ಪ್ರತಿ ತಿಂಗಳು ₹1.30 ಲಕ್ಷ ಪಡೆಯಲಿದ್ದಾರೆ. ಶುಭಂ ಪ್ರಸಾದ್, ಆದ್ರಿಕಾ ಗುಪ್ತಾ, ಇಣಾಗುರಿ ಮುನಿಸಾಯಿ ಅನೀಶ್ ವಾರ್ಷಿಕ ₹ 50 ಲಕ್ಷ ಪಡೆಯಲಿದ್ದಾರೆ' ಎಂದು ಸಂಸ್ಥೆಯ ಉದ್ಯೋಗ, ತರಬೇತಿ ವಿಭಾಗದ ಮುಖ್ಯಸ್ಥೆ ಡಾ.ಸವಿತಾ ರಾಣಿ ಎಂ. ಹೇಳಿದ್ದಾರೆ.

ನಗರದಲ್ಲಿ ಇಂದು

ಗಾಂಧಿ ಸ್ಮರಣ ಗಾಂಧಿ ನಮನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಪ್ರಮಾಣ ವಚನ ಬೋಧನೆ: ನ್ಯಾ. ಶಿವರಾಜ್ ವಿ. ಪಾಟೀಲ್, ಮುರುಗೇಶ ನಿರಾಣಿ, ಅತಿಥಿಗಳು: ರವೀಂದ್ರ ಭಟ್ಟ, ರವಿ ಡಿ. ಚನ್ನಣ್ಣನವರ್, ವೂಡೇ.ಪಿ. ಕೃಷ್ಣ, ಆಯೋಜನೆ: ವಿವೇಕಯುಗ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸ್ಥಳ: ಪೂರ್ವದಿಕ್ಕಿನ ಮೆಟ್ಟಿಲುಗಳು, ವಿಧಾನಸೌಧ, ಬೆಳಿಗ್ಗೆ 9.30

ಭಾಷಾಂತರಕಾರರ 2ನೇ ಸಮಾವೇಶ, ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಸ.ಚಿ. ರಮೇಶ, ಭಾಷಣ: ಬಸವರಾಜ ಕಲ್ಗುಡಿ, ಉಪಸ್ಥಿತಿ: ಡಿ.ಎನ್.ಎಸ್. ಕುಮಾರ್, ಪ್ರಾಸ್ತಾವಿಕ ನುಡಿ: ಎ. ಮೋಹನ ಕುಂಟಾರ್, ಆಯೋಜನೆ: ಭಾಷಾಂತರ ಅಧ್ಯಯನ ವಿಭಾಗ ಮತ್ತು ಭಾಷಾಂತರ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಸುರಾನ ಕಾಲೇಜು, ಕರ್ನಾಟಕ ಭಾಷಾಂತರಕಾರರ ಒಕ್ಕೂಟ, ಸ್ಥಳ: ಸುರಾನ ಕಾಲೇಜು ಸಭಾಂಗಣ, ಸೌತ್ ಎಂಡ್ ರಸ್ತೆ, ಬೆಳಿಗ್ಗೆ 9.30 ರಿಂದ

ರಾಜೀವ್ ಎಂ.ವೈ. ಅವರ 'ವ್ಯಾಸವರ್ಣ' ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ಅಜಿತ್ ಹನುಮಕ್ಕನವರ್, ಅತಿಥಿಗಳು: ತಿರುಣಾವುಕರಸು ಎಸ್., ಬಸವರಾಜ್ ಬಿ.ಜಿ. ಕೆರೆ, ನಿರ್ಮಲಾಕುಮಾರಿ ಸಿ.ಎಸ್., ಉಪಸ್ಥಿತಿ: ಎಂ.ಜಿ. ಯೋಗೇಂದ್ರಪ್ಪ, ಬಿ.ಕೆ. ಝಾನ್ಸಿರಾಣಿ, ಆಯೋಜನೆ: ರಾಜೀವ್ ಆರ್ಟ್ ಇನ್ನೋವೇಟಿವ್, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ' ಕುರಿತು ಸಂವಾದ ಸಭೆ: ಅಧ್ಯಕ್ಷತೆ: ವಿಶ್ವೇಶ್ವರ ಹೆಗಡೆ ಕಾಗೇರಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 11

'ಪ್ರಸಕ್ತ ರಾಜಕೀಯದಲ್ಲಿ ಕನ್ನಡದ ಸಮಸ್ಯೆಗಳು ಮತ್ತು ಸವಾಲುಗಳು' ಒಂದು ಚಿಂತನೆ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಭಾಗವಹಿಸುವವರು: ರವಿ ಸುಬ್ರಮಣ್ಯ, ರಮೇಶ್ ಬಾಬು, ಉಪಸ್ಥಿತಿ: ಆರ್. ಚಂದ್ರಪ್ಪ, ಜೆ. ಶ್ರೀನಿವಾಸ್, ಉದಯ್ ಶೆಟ್ಟಿ, ಆಯೋಜನೆ: ಜಯ ಕರ್ನಾಟಕ ಜನಪರ ವೇದಿಕೆ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ಬೈಸಿಕಲ್ ವಿತರಣಾ ಸಮಾರಂಭ: ಅತಿಥಿಗಳು: ಅಮಿತಾಭ್ ಚಟರ್ಜಿ, ಶಮಿಲಾ ಎಂ., ಎ.ಕೆ. ಸುಗುಣನ್, ವಿಪಿನ್ ಲಬ್ರೊ, ಆಯೋಜನೆ: ಕ್ಯಾನ್ ಫಿನ್ ಹೋಮ್ಸ್ ಲಿ, ರೋಟರಿ ಬೆಂಗಳೂರು ಇಂದಿರಾನಗರ, ಸ್ಥಳ: ಬಿ. ನಾರಾಯಣಪುರ ಪ್ರೌಢಶಾಲೆ, ಮಹಾದೇವಪುರ, ಮಧ್ಯಾಹ್ನ 3.30

ಪ್ರವಚನ ವಾಹಿನಿ ಕಾರ್ಯಕ್ರಮ: 'ಆಳ್ವಾರ್‌ಗಳ ಕೃಷ್ಣಾನುಭವ' ಉಪನ್ಯಾಸ: ಯಮುನಾ ರಾಮಪ್ರಿಯ, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30



'ದ್ರೋಪತಿ ಹೇಳ್ತವ್ಳೆ' ನಾಟಕ ಪ್ರದರ್ಶನ: ನಿರ್ದೇಶನ: ಗಣೇಶ್ ಮಂದಾರ್ತಿ, ರಂಗ ಪರಿಕರ: ಮಧುಸೂದನ್, ಆಯೋಜನೆ: ರಂಗಾಸ್ಥೆ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಎಂ. ನರಸಿಂಹಗೆ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ'

'ಬೇಂದ್ರೆ ಕಾವ್ಯದಲ್ಲಿ ನೆಲ ಮುಟ್ಟುವ ಪ್ರೀತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಂದ್ರೆ ಅವರ ಕಾವ್ಯದಲ್ಲಿ ನೆಲ ಮುಟ್ಟುವ ಪ್ರೀತಿ ಎದ್ದು ಕಾಣುತ್ತದೆ. ಚೌಕಟ್ಟು ಅಳವಡಿಸಿಕೊಂಡಿರುವ ಸಾಹಿತ್ಯ ವಿಮರ್ಶಕರು, ಅವರ ಕಾವ್ಯವನ್ನು ಸೀಮಿತಗೊಳಿಸಿ ವಿಮರ್ಶಿಸಿದರು' ಎಂದು ವಿಮರ್ಶಕ ಚಂದ್ರಶೇಖರ ನಂಗಲಿ ಹೇಳಿದರು.

ದ.ರಾ. ಬೇಂದ್ರೆ ಕಾವ್ಯಕೂಟ ನಗರದಲ್ಲಿ ಮಂಗಳವಾರ ಆಯೋಜಿಸಿದ ಸಮಾರಂಭದಲ್ಲಿ ಉದಯಭಾನು ಕಲಾಸಂಘದ ಕಾರ್ಯದರ್ಶಿ ಎಂ. ನರಸಿಂಹ ಅವರಿಗೆ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ವಿಮರ್ಶಕ ಜಿ. ಕೃಷ್ಣಪ್ಪ ಅವರ 'ಬರೆಹದಲ್ಲಿ ಬೇಂದ್ರೆಯವರ ಬದುಕು', 'ಕರ್ಣಚೈತ್ರನ ಪರ್ಣಶಾಲೆ' ಕೃತಿಗಳನ್ನು ಲೋಕಾರ್ಪಣೆ ಮಾಡಿದರು.

'1919ರಲ್ಲಿ ಪ್ರಕಟಗೊಂಡ ಅವರ 'ಚಂದ್ರ' ಕವಿತೆಯು ವಿಮರ್ಶಕರ ಕಣ್ಣಿಗೆ ಅಜ್ಞಾತವಾಗಿ ಉಳಿಯಿತು. ಅವರ ಕಾವ್ಯದಲ್ಲಿ ಬೌದ್ಧ ತಾತ್ವಿಕತೆಯನ್ನು ಗುರುತಿಸಬಹುದಾಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯಕ್ಕೂ ಅವರ ಕಾವ್ಯದ ಮೂಲಕ ಉದಾಹರಣೆ ನೀಡಬಹುದು.



ಸಮಾರಂಭದಲ್ಲಿ ಎಂ. ನರಸಿಂಹ ಅವರಿಗೆ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ದ.ರಾ.ಬೇಂದ್ರೆ ಕಾವ್ಯಕೂಟದ ಉಪಾಧ್ಯಕ್ಷ ಶ್ರ.ದೇ.ಪಾರ್ಶ್ವನಾಥ್, ಅಧ್ಯಕ್ಷ ಜಿ.ಕೃಷ್ಣಪ್ಪ, ಬಿ. ಚಂದ್ರಶೇಖರ ನಂಗಲಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಇದ್ದಾರೆ. – ಪ್ರಜಾವಾಣಿ ಚಿತ್ರ

ನಮ್ಮ ಸಾಹಿತ್ಯ ವಿಮರ್ಶೆ ಹಾಗೂ ಸಂಶೋಧನೆಗಳು ಚೌಕಟ್ಟನ್ನು ಅಳವಡಿಸಿಕೊಂಡಿವೆ. ನಿಸರ್ಗ ಮತ್ತು ಪ್ರಕೃತಿಯ ನಡುವೆ ಸೃಷ್ಟಿ ವಿರೋಧವನ್ನು ಬೇಂದ್ರೆ ಅವರ ಕಾವ್ಯದಲ್ಲಿ ಕಾಣುತ್ತೇವೆ' ಎಂದು ಹೇಳಿದರು.

'ಭಾಷೆಯಿಂದಲೇ ಗುಲಾಮಿತನ ಉಂಟಾಗುತ್ತದೆ. ಭಾಷೆಯನ್ನು ಕಲಿಯುವಾಗ ಜಾತಿ, ಧರ್ಮವೆಂದು ಅಂಕುಶಮತಿ ಆಗುತ್ತೇವೆ. ಎಷ್ಟೋ ನಾಗರಿಕರು ಮನಸ್ಸಿಗೆ ಮೂಗುದಾರ ಹಾಕಿಕೊಂಡು ಇಕ್ಕಟ್ಟಿಗೆ ಒಳಗಾಗುತ್ತಾರೆ. ಜೀವನವು ಒಂದು ಪ್ಯಾಕೇಜ್ ರೀತಿಯಾಗಿದೆ. ಪ್ಯಾಕೇಜ್ ಎಂದರೆ ವಾಸ್ತವದಲ್ಲಿ ಸುಳ್ಳನ್ನು ಸೃಷ್ಟಿಸುವುದು. ಧರ್ಮದಲ್ಲಿ ಹಲವು ಪ್ಯಾಕೇಜ್‌ಗಳಿವೆ. ಬೇಂದ್ರೆ ಪ್ಯಾಕೇಜ್‌ಗಳ ಕವಿಯಲ್ಲ. ಬದಲಾಗಿ, ಪ್ರಕ್ರಿಯೆಗಳ ಕವಿಯಾಗಿದ್ದಾರೆ.

ಮುಖ್ಯಾಂಶಗಳು

- ವಿಮರ್ಶಕ ಜಿ. ಕೃಷ್ಣಪ್ಪ ಅವರ ಕೃತಿಗಳ ಬಿಡುಗಡೆ
- ವಿಮರ್ಶಾ ಲೇಖನ ಸ್ಪರ್ಧೆ: ಬಹುಮಾನ ವಿತರಣೆ

ಮೊದಲ ಮೂರು ತಲೆಮಾರು ಅವರಿಗೆ ನ್ಯಾಯ ಒದಗಿಸಿಲ್ಲ' ಎಂದು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಂ. ನರಸಿಂಹ, 'ಬೇಂದ್ರೆ ವಿಶ್ವದ ಕವಿ. ಅವರ ಕಾವ್ಯ ಕಬ್ಬಿಣದ ಕಡಲೆಯಾಗಿದ್ದು, ಕಾವ್ಯದಲ್ಲಿ ಬೆಂದವರು ಮಾತ್ರ ಅವರನ್ನು ಅರ್ಥ ಮಾಡಿಕೊಳ್ಳುತ್ತಾರೆ' ಎಂದರು.

ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡ ಅವರು, 'ಕುಪ್ಪರೆಡ್ಡಿಯೂರು ಗ್ರಾಮದ ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದೆ. ತಂದೆ-ತಾಯಿ ಬೆಳಗಿನ ಜಾವ ಮೂರು ಗಂಟೆಗೆ ನೇಗಿಲು ಮತ್ತು ಬಾನೆಯೊಂದಿಗೆ ಹೊಲಕ್ಕೆ ಹೋಗುತ್ತಿದ್ದರು. ತಾಯಿಯು ಬರಡು ಬಾವಿಗಿಳಿದು, ಸಂಗ್ರಹವಾಗಿರುವ ನೀರನ್ನು ಬಾನೆಗೆ ತುಂಬುತ್ತಿದ್ದರು' ಎಂದು ಕಣ್ಣೀರು ಹಾಕಿದರು.

ದ.ರಾ.ಬೇಂದ್ರೆ ಸ್ಮೃತಿ ವಿಮರ್ಶಾ ಲೇಖನ ಸ್ಪರ್ಧೆಯ ವಿಜೇತರಾದ ಅನಿತಾ ಕೆ.ಎ., ಶೈಲಜಾ ಹೆಗ್ಡೆ ಹಾಗೂ ಕೃಪಾ ಎಚ್.ವಿ. ಅವರಿಗೆ ಬಹುಮಾನ ವಿತರಿಸಲಾಯಿತು.

ಸಂಕ್ಷಿಪ್ತ ಸುದ್ದಿ

ಮುಂದುವರಿದ ತೆರವು ಕಾರ್ಯಾಚರಣೆ

ಬೆಂಗಳೂರು: ಮಹದೇವಪುರ ವಲಯದ ಪಟ್ಟಂದೂರು ಅಗ್ರಹಾರ ವ್ಯಾಪ್ತಿಯಲ್ಲಿ ಮಂಗಳವಾರ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು.

ಗರುಡಾಚಾರ್ ಪಾಳ್ಯ ವಾರ್ಡ್ ಪಟ್ಟಂದೂರು ಅಗ್ರಹಾರದ ವ್ಯಾಪ್ತಿಯ ಫಾಯರ್ ಇನ್ಫಿನಿಟಿ ಅಪಾರ್ಟ್‌ಮೆಂಟ್ ಒತ್ತುವರಿ ಮಾಡಿಕೊಂಡಿದ್ದ 300 ಮೀಟರ್ ಉದ್ದದ ರಾಜಕಾಲುವೆ ಭಾಗದಲ್ಲಿ ಗೋಡೆಯನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ ಫೆ.2ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9.30ರಿಂದ 11 ರವರೆಗೆ ಅದಾಲತ್ ನಡೆಯಲಿದೆ. **ಸಹಾಯವಾಣಿ:** 1916

ದೂರು ಪರಿಹಾರ ಸಭೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಫೆ.1ರಂದು ಮಧ್ಯಾಹ್ನ 3ರಿಂದ 5ರವರೆಗೆ ಕೇಂದ್ರ ಕಚೇರಿಯ ಆವರಣದಲ್ಲಿ ಸಾರ್ವಜನಿಕರ ದೂರು ಪರಿಹಾರ ಸಭೆ ಏರ್ಪಡಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಟಿಕೆಟ್: ಸುರ್ಜೇವಾಲಾ, ಡಿಕೆಶಿ, ಸಿದ್ದರಾಮಯ್ಯ ಚರ್ಚೆ ಇಂದು

130 ಸ್ಥಾನಗಳಿಗೆ ಅಭ್ಯರ್ಥಿಗಳ ಪಟ್ಟಿ ಸಿದ್ಧ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಚುನಾವಣಾ ಸಮಿತಿ ಸಭೆ ಗುರುವಾರ (ಫೆ. 2) ನಡೆಯಲಿದ್ದು, ಅದಕ್ಕೂ ಮೊದಲೇ 120ರಿಂದ 130 ಕ್ಷೇತ್ರಗಳಿಗೆ ಪಕ್ಷದ ಸಂಭಾವನೀಯ ಅಭ್ಯರ್ಥಿಗಳನ್ನು ಗುರುತಿಸಿ, ಪಟ್ಟಿ ಸಿದ್ಧಪಡಿಸಲು ರಾಜ್ಯ ಕಾಂಗ್ರೆಸ್ ನಿರ್ಧರಿಸಿದೆ.

ಸಂಭಾವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬುಧವಾರ ಚರ್ಚೆ ನಡೆಸಲಿದ್ದಾರೆ.

'ಸುರ್ಜೇವಾಲಾ ಅವರು ಬೆಳಿಗ್ಗೆ 11 ಗಂಟೆಗೆ ನಗರಕ್ಕೆ ಬರಲಿದ್ದು, ಮಧ್ಯಾಹ್ನದ ಬಳಿಕ ಮೂವರೂ ಒಂದೆಡೆ ಸೇರಿ ವಿಧಾನಸಭಾ ಕ್ಷೇತ್ರಗಳ ಸ್ಥಿತಿಗತಿ, ಯಾರಿಗೆ ಟಿಕೆಟ್ ನೀಡಿದರೆ ಗೆಲ್ಲುವ ಸಾಧ್ಯತೆ ಇದೆ, ಅಭ್ಯರ್ಥಿ ಆಕಾಂಕ್ಷಿಗಳ ಸಾಮರ್ಥ್ಯ ಹಾಗೂ ಕೊರತೆ ಏನೇನು ಎಂಬ ಬಗ್ಗೆ ಚರ್ಚೆ ನಡೆಸಲಿದ್ದಾರೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಹಾಲಿ ಶಾಸಕರ ಪೈಕಿ ಸ್ಪರ್ಧೆಯಿಂದ ಹಿಂದೆ ಸರಿಯಲು ಬಯಸಿರುವವರನ್ನು ಹೊರತುಪಡಿಸಿ, ಉಳಿದವರಿಗೆ ಟಿಕೆಟ್ ನೀಡಲು ಈಗಾಗಲೇ ತೀರ್ಮಾನಿಸಲಾಗಿದೆ. ಉಳಿದಂತೆ, ಕಡಿಮೆ ಪೈಪೋಟಿ ಇರುವ 30ರಿಂದ 40 ಕ್ಷೇತ್ರಗಳಿಗೆ ಅಭ್ಯರ್ಥಿಯ ಹೆಸರನ್ನು ಈ ಮೂವರು ನಾಯಕರು ಅಳೆದು ತೂಗಿ ಅಂತಿಮಗೊಳಿಸಲಿದ್ದಾರೆ. ನಂತರ ಕೇಂದ್ರ ಚುನಾವಣಾ ಸಮಿತಿ ಪಟ್ಟಿಯನ್ನು ಮರುಪರಿಶೀಲಿಸಲಿದೆ. ಇದೇ ತಿಂಗಳ ಎರಡನೇ ವಾರದಲ್ಲಿ ಪಟ್ಟಿ ಬಿಡುಗಡೆ ಆಗಲಿದೆ. ಚುನಾವಣಾ ಪ್ರಚಾರದ ದೃಷ್ಟಿಯಿಂದ ಆದಷ್ಟು ಶೀಘ್ರದಲ್ಲೇ ಅಭ್ಯರ್ಥಿ ಅಂತಿಮಗೊಳಿಸುವುದು ಅನಿವಾರ್ಯವಾಗಿದೆ' ಎಂದು ಮೂಲಗಳು ತಿಳಿಸಿವೆ.

'224 ಕ್ಷೇತ್ರಗಳ ಪೈಕಿ ಹಾಲಿ ಶಾಸಕರಿಗೆ ಟಿಕೆಟ್ ಖಚಿತವಾದರೂ, ಇತರ ಕ್ಷೇತ್ರಗಳಲ್ಲಿ ಟಿಕೆಟ್ ಹಂಚಿಕೆ ಮಾಡುವುದು ನಾಯಕರಿಗೆ ಸವಾಲಾಗಲಿದೆ. ಆದರೆ, ಕೆಲವು ಕಡೆ ಟಿಕೆಟ್‌ಗಾಗಿ ಆಕಾಂಕ್ಷಿಗಳು ಪಟ್ಟು ಹಿಡಿಯುವ ಸಾಧ್ಯತೆ ಇದೆ. ಕೆಲವರು ತಮಗೆ ಟಿಕೆಟ್ ಸಿಗಬಹುದೆಂಬ ವಿಶ್ವಾಸದಿಂದ ಪ್ರಚಾರ ಆರಂಭಿಸಿದ್ದಾರೆ. ಪೈಪೋಟಿ ಹೆಚ್ಚಿರುವ ಕ್ಷೇತ್ರಗಳಲ್ಲಿ ಟಿಕೆಟ್ ಹಂಚಿಕೆಯನ್ನು ಕೊನೆಕ್ಷಣದಲ್ಲಿ ಅಂತಿಮಗೊಳಿಸುವ ಸಾಧ್ಯತೆಯಿದೆ' ಎಂದೂ ಮೂಲಗಳು ಹೇಳಿವೆ.

ಸಿದ್ದರಾಮಯ್ಯ 'ಜೀವನ ಗಾನ'

ಸಿದ್ದರಾಮಯ್ಯ ಅವರ ಜೀವನ ಚರಿತ್ರೆ ಹಾಡಿನ ರೂಪದಲ್ಲಿ (ಆಲ್ಬಂ ಸಾಂಗ್) ಸಿದ್ಧವಾಗುತ್ತಿದ್ದು, ಶೀಘ್ರದಲ್ಲಿಯೇ ಹೊರಬರಲಿದೆ.

'ಸಿದ್ದರಾಮಯ್ಯ ಅವರ ಅಭಿಮಾನಿಯಾಗಿರುವ ಹೈದರಾಬಾದ್‌ನ ಉದ್ಯಮಿ ಶ್ರೀಧರ್ ಅವರು ಆಲ್ಬಂ ನಿರ್ಮಿಸುತ್ತಿದ್ದು, ಚಿತ್ರೀಕರಣ ನಡೆಯುತ್ತಿದೆ. ಟಾಲಿವುಡ್‌ನ ಹೆಸರಾಂತ ಗಾಯಕರು ಹಾಡಿದ್ದಾರೆ. ಸಿದ್ದರಾಮಯ್ಯ ಅವರ ರಾಜಕೀಯ, ವೈಯಕ್ತಿಕ ಬದುಕಿನ ಬಗ್ಗೆ ಹಾಡು ರಚಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಈ ಆಲ್ಬಂ ಹೊರಬರಲಿದೆ' ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

ವಿಧಾನಸಭಾ ಚುನಾವಣೆಯಲ್ಲಿ 130ರಿಂದ 140 ಕ್ಷೇತ್ರಗಳಲ್ಲಿ ನಾವು ಗೆಲುವು ಸಾಧಿಸುತ್ತೇವೆ. ಬೆಳಗಾವಿಯ 18 ಕ್ಷೇತ್ರಗಳಲ್ಲಿ 12ರಲ್ಲಿ ಗೆದ್ದೇ ಗೆಲ್ಲುತ್ತೇವೆ

ಎಂ.ಬಿ. ಪಾಟೀಲ, ಅಧ್ಯಕ್ಷ, ಕೆಪಿಸಿಸಿ ಪ್ರಚಾರ ಸಮಿತಿ

ಪ್ರಜಾ ಮತ ಜನತಂತ್ರದ ಹಬ್ಬ

ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕಲ್ಯಾಣ ರಥಯಾತ್ರೆಗೆ ಚಾಲನೆ

ಗಂಗಾವತಿಯಲ್ಲಿ ಜನಾರ್ದನ ರೆಡ್ಡಿಗೆ ಪತ್ನಿ, ಪುತ್ರಿ ಸಾಥ್

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): 'ನಾನು ಒಮ್ಮೆ ಸಂಕಲ್ಪ ಮಾಡಿದರೆ, ಯಾವುದೇ ಕಾರಣಕ್ಕೂ ನಿರ್ಧಾರ ಬದಲಿಸಲ್ಲ. ಜೀವ ಹೋದರೂ ಕೊಟ್ಟ ಮಾತು ತಪ್ಪಲ್ಲ. ಬಿಟ್ಟ ಬಾಣ, ಮುಂದಿಟ್ಟ ಹೆಜ್ಜೆ ಹಿಂಪಡೆಯುವ ಮಾತೇ ಇಲ್ಲ' ಎಂದು ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಸಂಸ್ಥಾಪಕ ಜನಾರ್ದನರೆಡ್ಡಿ ತಿಳಿಸಿದರು.

ತಾಲ್ಲೂಕಿನ ಆನೆಗೊಂದಿ ಗ್ರಾಮದ ರಂಗನಾಥ ದೇವಸ್ಥಾನದ ಬಳಿ ಮಂಗಳವಾರ 'ಕೆಆರ್‌ಪಿಪಿ ಕಲ್ಯಾಣ ರಥಯಾತ್ರೆ' ವಾಹನಕ್ಕೆ ಪತ್ನಿ ಲಕ್ಷ್ಮಿ ಅರುಣಾ ಮತ್ತು ಪುತ್ರಿ ಬ್ರಹ್ಮಿಣಿ ರಾಜೀವ್ ರೆಡ್ಡಿ ಅವರ ಜೊತೆ ಚಾಲನೆ ನೀಡಿ ಮಾತನಾಡಿದ ಅವರು, 'ಆಂಧ್ರಪ್ರದೇಶ, ತೆಲಂಗಾಣ, ಪಶ್ಚಿಮ ಬಂಗಾಳ, ತಮಿಳುನಾಡಿನ ಪ್ರಾದೇಶಿಕ ಪಕ್ಷಗಳು ರಾಷ್ಟ್ರದಲ್ಲಿ ಸದ್ದು ಮಾಡುತ್ತಿವೆ. ಕೆಆರ್‌ಪಿಪಿಗೂ ಜನ ಬೆಂಬಲ ಸಿಗುತ್ತಿದ್ದು, ಈ ಬಾರಿ ದೇಶದಲ್ಲಿ ಇತಿಹಾಸ ಸೃಷ್ಟಿಸಲಿದೆ' ಎಂದರು.

'ಕಲ್ಯಾಣ ಕರ್ನಾಟಕ ಪ್ರದೇಶದ ಶೋಷಿತರ, ದೀನ-ದಲಿತರ, ಹಿಂದುಳಿದ ವರ್ಗದವರ ಏಳ್ಗೆಗೆ ಕೆಆರ್‌ಪಿಪಿ ಅಸ್ತಿತ್ವಕ್ಕೆ ಬಂದಿದೆ ಹೊರತು ಇನ್ನೊಬ್ಬರ ವಿರುದ್ಧ ಸೇಡು ತೀರಿಸಿಕೊಳ್ಳಲು ಅಲ್ಲ' ಎಂದರು.

'ಗಂಗಾವತಿಯ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವೆ. ₹ 5 ಸಾವಿರ ಕೋಟಿ ವೆಚ್ಚದ ಯೋಜನೆ ಅನುಷ್ಠಾನ, ಅಷ್ಟಪಥ ರಸ್ತೆ ನಿರ್ಮಾಣದ ಬಗ್ಗೆ ಚಿಂತನೆಯಿದೆ. ಜನರ ಅಹವಾಲು ಆಲಿಸುವೆ. ಬೇಡಿಕೆಗಳನ್ನು ಈಡೇರಿಸುವೆ' ಎಂದರು.

ಲಕ್ಷ್ಮಿ ಅರುಣಾ ಮತ್ತು ಬ್ರಹ್ಮಿಣಿ ರಾಜೀವ್ ರೆಡ್ಡಿ ಮಾತನಾಡಿದರು. 'ಬಸವಣ್ಣನವರ ತತ್ವ ಸಿದ್ಧಾಂತ ಆಧಾರದ ಮೇಲೆ ಸ್ಥಾಪಿತ ಕೆಆರ್‌ಪಿಪಿ ಮಹಾವೃಕ್ಷವಾಗಿ ಬೆಳೆಯಲು ಜನರು ಬೇರುಗಳಾಗಿ ಶಕ್ತಿ ತುಂಬ ಬೇಕು. ರೆಡ್ಡಿ ಸಾಮ್ರಾಜ್ಯ ಈಗ ಬಳ್ಳಾರಿಗೆ ಸೀಮಿತವಾಗಿಲ್ಲ. ಇಡೀ ಕಲ್ಯಾಣ ಕರ್ನಾಟಕ ತುಂಬ ವ್ಯಾಪಿಸಿದೆ' ಎಂದು ಅವರು ಹೇಳಿದರು.

ರಥಯಾತ್ರೆಗೂ ಮುನ್ನ ಮೂವರು ಪಂಪಾಸರೋವರಕ್ಕೆ ಭೇಟಿ ನೀಡಿದರು. ವಿಜಯಲಕ್ಷ್ಮಿ, ಮಹಿಷಾಸುರ ಮರ್ದಿನಿ, ವಿದ್ಯಾರಣ್ಯ, ಪರಮಶಿವ ದೇವರಿಗೆ ಪೂಜೆ ಸಲ್ಲಿಸಿದರು.



ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿ ಮಂಗಳವಾರ ಆರಂಭಗೊಂಡ ಕೆಆರ್‌ಪಿಪಿ ಕಲ್ಯಾಣ ರಥಯಾತ್ರೆಯಲ್ಲಿ ಪಕ್ಷದ ಸಂಸ್ಥಾಪಕ ಗಾಲಿ ಜನಾರ್ದನರೆಡ್ಡಿ, ಪತ್ನಿ ಲಕ್ಷ್ಮಿ ಅರುಣಾ ಮತ್ತು ಪುತ್ರಿ ಬ್ರಹ್ಮಿಣಿ ರಾಜೀವ್ ರೆಡ್ಡಿ ಇದ್ದರು

'ಬಳ್ಳಾರಿಯಿಂದ ಲಕ್ಷ್ಮಿ ಅರುಣಾ ಸ್ಪರ್ಧೆ'

ಗಂಗಾವತಿ/ಬಳ್ಳಾರಿ: 'ಮುಂಬರುವ ಚುನಾವಣೆಯಲ್ಲಿ ಕೆಆರ್‌ಪಿಪಿ ಅಭ್ಯರ್ಥಿಯಾಗಿ ನನ್ನ ಪತ್ನಿ ಲಕ್ಷ್ಮಿ ಅರುಣಾ ಅವರು ಬಳ್ಳಾರಿ ಕ್ಷೇತ್ರದಿಂದ ಸ್ಪರ್ಧಿಸುವರು. ಸಹೋದರ ಸೋಮಶೇಖರ ರೆಡ್ಡಿ ಸೇರಿ ಯಾರೇ ಸ್ಪರ್ಧಿಸಿದರೂ ನಿರ್ಧಾರ ಬದಲಿಸಲ್ಲ' ಎಂದು ಜನಾರ್ದನ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

'ನನ್ನ ಮತ್ತು ಪಕ್ಷದ ವಿರುದ್ಧ ಯಾರೇ ಮಾತನಾಡಿದರೂ ನಾನು ಪ್ರತಿಕ್ರಿಯೆ ನೀಡಲ್ಲ. ನನ್ನ ಕೆಲಸ ಮುಂದುವರಿಸಿಕೊಂಡು ಹೋಗುವೆ' ಎಂದರು.

ಬಳ್ಳಾರಿ ಜಿಲ್ಲೆಯಲ್ಲಿ ಲಕ್ಷ್ಮಿ ಅರುಣಾ ಅವರು ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. 2018ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಆಯ್ಕೆಯಾದ ಶಾಸಕ ಸೋಮಶೇಖರ ರೆಡ್ಡಿ ಈ ಸಲವೂ ಬಿಜೆಪಿಯಿಂದ ಸ್ಪರ್ಧಿಸುವ ಸಾಧ್ಯತೆಯಿದೆ. ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ಈಗಾಗಲೇ ಸೋಮಶೇಖರ ರೆಡ್ಡಿ ಪರ ಅನಧಿಕೃತವಾಗಿ ಪ್ರಚಾರ ಆರಂಭಿಸಿದ್ದಾರೆ.

'ಯುಜಿಸಿ ನಿಯಮ ಪರಿಗಣಿಸಿ'

ಬೆಂಗಳೂರು: 'ಸರ್ಕಾರಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವಾಗ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿಪಡಿಸಿರುವ ಕನಿಷ್ಠ ಶೈಕ್ಷಣಿಕ ಅರ್ಹತೆ ಸೇರಿದಂತೆ ಎಲ್ಲ ನಿಯಮಾವಳಿಗಳನ್ನು ಪರಿಗಣಿಸಿಯೇ ನೇಮಕ ಮಾಡಿಕೊಳ್ಳಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿದೆ.

ಬಂಟ್ವಾಳದ ಕೆ.ವಿ.ರಂಜಿತ್ ನಾಯಕ್ ಸೇರಿದಂತೆ 50ಕ್ಕೂ ಹೆಚ್ಚು ಅರ್ಜಿದಾರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ವಿಲೇವಾರಿ ಮಾಡಿದ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಯುಜಿಸಿ ನಿಗದಿಪಡಿಸಿದ ಕನಿಷ್ಠ ಶೈಕ್ಷಣಿಕ ಅರ್ಹತೆ ಇಲ್ಲದಿದ್ದ ಅಭ್ಯರ್ಥಿಗಳೂ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸಬಹುದು' ಎಂದು ಸರ್ಕಾರವು ಆದೇಶ ಹೊರಡಿಸಿತ್ತು. ಅರ್ಜಿದಾರರು ಈ ಆದೇಶವನ್ನು ಪ್ರಶ್ನಿಸಿದ್ದರು.

ಬೆಳಗಾವಿ ಟು ಕನಕಪುರ ಸಿ.ಡಿ ಫ್ಯಾಕ್ಟರಿ ಇರುವುದು ಇಲ್ಲಿಯೇ: ಲಖನ್

ಪ್ರಜಾವಾಣಿ ವಾರ್ತೆ

ಗೋಕಾಕ(ಬೆಳಗಾವಿ ಜಿಲ್ಲೆ): 'ಕೆಪಿಸಿಸಿ ಅಧ್ಯಕ್ಷರೆಂದರೆ ಕರ್ನಾಟಕ ಪ್ರದೇಶ ಸಿ.ಡಿ ಕಮಿಟಿ ಅಧ್ಯಕ್ಷರಿದ್ದಂತೆ' ಎಂದು ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ವಿರುದ್ಧ ವ್ಯಂಗ್ಯವಾಡಿದರು.

ಇಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಮೇಶ ಜಾರಕಿಹೊಳಿ ಹಾಗೂ ಯುವತಿ ಸಿ.ಡಿ ಪ್ರಕರಣ ಸಿಬಿಐನಿಂದ ತನಿಖೆಯಾಗಬೇಕು. ಆಗ ಮಾತ್ರ ಎಲ್ಲಿ, ಯಾರು ಪ್ಯಾಂಟ್ ಮತ್ತು ಲುಂಗಿ ಬಿಚ್ಚಿದ್ದಾರೆ ಎಂಬುದು ತಿಳಿಯಲಿದೆ. ಲಂಚ ಮತ್ತು ಮಂಚದ ವಿಷಯ ಹೊರಬರಲಿದೆ' ಎಂದರು.

'ಬೆಳಗಾವಿ ಟು ಕನಕಪುರ ಸಿ.ಡಿ ಫ್ಯಾಕ್ಟರಿ ಇರುವುದು ಇಲ್ಲಿಯೇ. ಸಿ.ಡಿ.ಗಳು ಬೆಳಗಾವಿಯಲ್ಲಿ ತಯಾರಾಗಿ, ಕನಕಪುರದಲ್ಲಿ ಬಿಡುಗಡೆ ಆಗುತ್ತವೆ' ಎಂದು ದೂರಿದರು.

'ಯಾರು ತಮ್ಮೊಂದಿಗೆ ಶಾಮೀಲಾಗಿ ಕೆಲಸ ಮಾಡುತ್ತಾರೋ, ಅವರ ಬಗ್ಗೆ ಸುಮ್ಮನಿರುತ್ತಾರೆ. ಯಾರು ವಿರೋಧ ಮಾಡುತ್ತಾರೋ ಅವರ ಸಿ.ಡಿ ಬಿಡುಗಡೆಗೊಳಿಸುತ್ತಾರೆ' ಎಂದು ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

'ರಮೇಶ ಜಾರಕಿಹೊಳಿ ಅವರ ಸಿ.ಡಿ ಪ್ರಕರಣದ ಹಿಂದೆ ಷಡ್ಯಂತ್ರವಿದೆ. ಹಲವು ವರ್ಷಗಳಿಂದ ಜಾರಕಿಹೊಳಿ ಕುಟುಂಬದ ವಿರುದ್ಧ ಷಡ್ಯಂತ್ರ ನಡೆದಿದೆ. ಚುನಾವಣೆ ಬಂದಾಗಂತೂ 6 ತಿಂಗಳು ಜೋರಾಗುತ್ತದೆ. ಆದರೆ, ಮತದಾರರು ಮತ್ತು ತಂದೆ-ತಾಯಿ ಆಶೀರ್ವಾದ ನಮ್ಮ ಜತೆಗಿದ್ದು, ಇಂತಹ ನೂರು ಸಿ.ಡಿ ಬಂದರೂ ನಾವು ಹೆದರುವುದಿಲ್ಲ' ಎಂದರು.

ವೈಯಕ್ತಿಕ ಟೀಕೆ ಬೇಡ: ಬಾಲಚಂದ್ರ ಜಾರಕಿಹೊಳಿ

ಗೋಕಾಕ(ಬೆಳಗಾವಿ ಜಿಲ್ಲೆ): 'ಸಿ.ಡಿ ಪ್ರಕರಣ ಮುಂದಿಟ್ಟುಕೊಂಡು ಸಹೋದರ ರಮೇಶ ಜಾರಕಿಹೊಳಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಬಹಿರಂಗ ಚರ್ಚೆ, ವೈಯಕ್ತಿಕ ಟೀಕೆ ಮಾಡಬಾರದು' ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಮನವಿ ಮಾಡಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಬಗ್ಗೆ ರಮೇಶ ಅವರೊಂದಿಗೆ ಮಾತನಾಡುತ್ತೇನೆ. ಈ ವಿಚಾರವಾಗಿ ಹೇಳಿಕೆ ನೀಡಿದರೆ ಮೂರೂ ದೊಡ್ಡ ಕುಟುಂಬಗಳಿಗೆ ಹಾನಿ ಆಗುತ್ತದೆ. ಚುನಾವಣೆಗೆ ರಾಜಕೀಯವಾಗಿ ಹೋರಾಟ ಮಾಡೋಣ. ಆದರೆ, ಸಾರ್ವಜನಿಕವಾಗಿ ಕಿತ್ತಾಟ ಬೇಡ' ಎಂದರು.

ಪಿತೂರಿ ಬಯಲಿಗೆಳೆಯಲು ರಮೇಶ ಮನವಿ

ಬೆಂಗಳೂರು: ತಮ್ಮ ವಿರುದ್ಧದ ಸಿ.ಡಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸುವಂತೆ ಶಾಸಕ ರಮೇಶ ಜಾರಕಿಹೊಳಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಮಂಗಳವಾರ ಬೆಳಿಗ್ಗೆ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಈ ಕುರಿತು ಚರ್ಚೆ ನಡೆಸಿದ್ದಾರೆ. ತಮ್ಮ ರಾಜಕೀಯ ಭವಿಷ್ಯವನ್ನು ಮುಗಿಸುವ ದುರುದ್ದೇಶದಿಂದಲೇ ಸಿ.ಡಿ ಮಾಡಿ ಬಿಟ್ಟಿದ್ದಾರೆ. ಇದರ ಹಿಂದಿನ ಪಿತೂರಿದಾರರನ್ನು ಬಯಲಿಗೆಳೆಯಲು ಸಿಬಿಐ ತನಿಖೆಯೇ ಆಗಬೇಕು ಮತ್ತು ಅವರನ್ನು ಜೈಲಿಗೆ ಹಾಕಬೇಕೆಂದು ಒತ್ತಾಯಿಸಿರುವುದಾಗಿ ಗೊತ್ತಾಗಿದೆ.

ಯಾತ್ರೆಗೆ ಕರ್ನಾಟಕದ ಐವರ ಸಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯಲ್ಲಿ ಕರ್ನಾಟಕದ ಐವರು 136 ದಿನವೂ ಹೆಜ್ಜೆ ಹಾಕಿದ್ದಾರೆ.

ಬೆಂಗಳೂರಿನ ಖುಷ್ವಂತ್ ರಾಜಶೇಖರಯ್ಯ, ಮೈಸೂರಿನ ಡಾ.ಸುಶ್ರುತಾ, ಪ್ಯಾರಿಜಾನ್, ಹುಬ್ಬಳ್ಳಿಯ ಕಿರಣ್, ಚನ್ನಬಸಪ್ಪ ಜಗಳಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಪಾದಯಾತ್ರೆಯಲ್ಲಿ ಭಾಗಿಯಾಗಿದ್ದಾರೆ.

'ಕರ್ನಾಟಕದವರೆಗೆ ಪಾದಯಾತ್ರೆಯಲ್ಲಿ ಭಾಗವಹಿಸಬೇಕು ಎಂದು ನಿರ್ಧರಿಸಿ ಕನ್ಯಾಕುಮಾರಿಗೆ ಹೋಗಿದ್ದೆವು. ರಾಹುಲ್ ಗಾಂಧಿ ಅವರ ಜತೆ ನಡೆಯುತ್ತಾ ಸಾಗಿದಂತೆ ವಾಪಸ್ ಮರಳಲು ಮನಸ್ಸಾಗಲಿಲ್ಲ. ಕಾಲಲ್ಲಿ ಬೊಬ್ಬೆ ಬಂದರೂ ಅವರ ಜತೆ ಹೆಜ್ಜೆ ಹಾಕುತ್ತಾ ಅಂತಿಮ ಕ್ಷಣದವರೆಗೂ ಸಾಗಿದೆವು' ಎಂದು ಖುಷ್ವಂತ್ ಪ್ರತಿಕ್ರಿಯಿಸಿದರು.

'ಯಾತ್ರೆ ಉತ್ತರ ಭಾರತ ಪ್ರವೇಶಿಸಿದಾಗ ಅಳುಕಿತ್ತು. ಕಾಶ್ಮೀರ ಭಯೋತ್ಪಾದನೆ, ಅಲ್ಲಿನ ಸ್ಥಿತಿಗೆ ಹೆದರಿದ್ದೆವು. ಅಲ್ಲಿಗೆ ಹೋದಾಗ ಕಾಶ್ಮೀರಿಗಳ ಪ್ರೀತಿ ಕಂಡು ಸೋತಿದ್ದೇವೆ. ನಾವು ಅಂದುಕೊಂಡಿದ್ದಕ್ಕಿಂತ ಅವರು ಭಿನ್ನ. ಕೊರೆವ ಚಳಿಯಲ್ಲೂ ದಾರಿಯುದ್ದಕ್ಕೂ ಅಡುಗೆ ಮಾಡಿ ಬಡಿಸಿದರು' ಎಂದು ಖುಷ್ವಂತ್ ಮಾಹಿತಿ ನೀಡಿದರು.

'ಉತ್ತರದ ಕೆಲ ರಾಜ್ಯಗಳಲ್ಲಿ ದಕ್ಷಿಣದ ರಾಜ್ಯಗಳ ಬಗ್ಗೆ ತಪ್ಪು ತಿಳಿವಳಿಕೆಗಳು ಇರುವುದು ಯಾತ್ರೆಯಲ್ಲಿ ಗಮನಕ್ಕೆ ಬಂತು. ಅಂತಹ ತಾರತಮ್ಯ ವ್ಯವಸ್ಥಿತವಾಗಿ ಬಿತ್ತಲಾಗಿದೆ. ಇಂತಹ ಮನೋಭಾವ ತೊಲಗಿಸಲು ದಕ್ಷಿಣದ ರಾಜ್ಯಗಳು ಪ್ರಯತ್ನಿಸಬೇಕು' ಎಂದರು.



ರಾಹುಲ್ ಗಾಂಧಿ ಜತೆ ಹೆಜ್ಜೆ ಹಾಕಿದ್ದ ಖುಷ್ವಂತ್ ರಾಜಶೇಖರಯ್ಯ

'3ರಂದು ಹಾಸನ ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಅಂತಿಮ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಹಾಸನದ ಏಳು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಫೆ.3ರಂದು ಸಮಸ್ಯೆಗಳಿಲ್ಲದೆ ಅಂತಿಮಗೊಳಿಸಲಾಗುವುದು, ತಮ್ಮ ಪಕ್ಷದ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಫೆ. 10 ರಂದು ಬಿಡುಗಡೆ ಮಾಡಲಾಗುವುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ನಮ್ಮ ಕುಟುಂಬದಲ್ಲಿ ಕೋಲ್ಡ್ ವಾರೂ ಇಲ್ಲ; ಹಾಟ್ ವಾರೂ ಇಲ್ಲ. ಹಾಸನದ 7 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಗೆ ಸುಗಮವಾಗಿ ಒಪ್ಪಿಗೆ ದೊರೆಯಲಿದೆ' ಎಂದು ಸಂಡೂರು ತಾಲ್ಲೂಕಿನ ಕುರೇಕುಪ್ಪದಲ್ಲಿ ಮಂಗಳವಾರ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರತಿ ಪಕ್ಷದಲ್ಲೂ ಆಯಾ ಪಕ್ಷದ ಬೆಳವಣಿಗೆಗಿಂತ ಹೆಚ್ಚಾಗಿ ಅವರವರ ಕುಟುಂಬದ, ಮಕ್ಕಳ ಬೆಳವಣಿಗೆ ಕುರಿತು ಚಿಂತನೆ ನಡೆಯುತ್ತಿದೆ. ನಮ್ಮ ಕುಟುಂಬವನ್ನು 30 ವರ್ಷಗಳಿಂದ ಟಾರ್ಗೆಟ್ ಮಾಡಲಾಗುತ್ತಿದೆ. ಜೆಡಿಎಸ್‌ಗೆ ಕುಟುಂಬ ರಾಜಕಾರಣದ ಲೇಬಲ್ ಹಚ್ಚಲಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಆರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಆರು ಐಎಎಸ್ ಅಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ.


ವರ್ಗಾವಣೆ ವಿವರ: ಪೂವಿತಾ ಎಸ್.– ಮುಖ್ಯ ಕಾರ್ಯನಿರ್ವಹಣಾಧಿಕಾರಿ(ಸಿಇಒ), ಚಾಮರಾಜನಗರ ಜಿಲ್ಲಾ ಪಂಚಾಯಿತಿ; ಗಾಯಿತ್ರಿ ಕೆ.ಎಂ.– ಸಿಇಒ, ಮೈಸೂರು ಜಿಲ್ಲಾ ಪಂಚಾಯಿತಿ; ಪೂರ್ಣಿಮಾ ಬಿ.ಆರ್.– ಸಿಇಒ, ಹಾಸನ ಜಿಲ್ಲಾ ಪಂಚಾಯಿತಿ; ಲಿಂಗಮೂರ್ತಿ ಜಿ.– ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ ಆರೋಗ್ಯ ಇಲಾಖೆ; ಸದಾಶಿವ ಪ್ರಭು ಬಿ.– ಸಿಇಒ, ವಿಜಯನಗರ ಜಿಲ್ಲಾ ಪಂಚಾಯಿತಿ; ರಾಹುಲ್ ಶರಣಪ್ಪ ಸಂಕನೂರ್– ಸಿಇಒ, ಬಳ್ಳಾರಿ ಜಿಲ್ಲಾ ಪಂಚಾಯಿತಿ.

ಯೋಜನೆ, ಕಾರ್ಯಕ್ರಮ ಮೇಲುಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿ ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ ಅವರಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖ್ಯ ಮೌಲ್ಯಮಾಪಕರ ಹುದ್ದೆಯ ಹೆಚ್ಚುವರಿ ಪ್ರಭಾರ ನೀಡಿ ಆದೇಶ ಹೊರಡಿಸಲಾಗಿದೆ.

ಯಶಸ್ವಿನಿ ನೋಂದಣಿ: ಫೆ. 28ರವರೆಗೆ ವಿಸ್ತರಣೆ

ಬೆಂಗಳೂರು: ಯಶಸ್ವಿನಿ ಯೋಜನೆಯ ನೋಂದಣಿಗೆ ನಿಗದಿಪಡಿಸಿದ್ದ ಕೊನೇ ದಿನವನ್ನು ಫೆ. 28ರವರೆಗೆ ವಿಸ್ತರಿಸಲಾಗಿದೆ. 2022–23ನೇ ಸಾಲಿನಿಂದ ಈ ಯೋಜನೆಯನ್ನು ಮರು ಜಾರಿಗೊಳಿಸಲಾಗುತ್ತಿದ್ದು, ಹೊಸ ಸದಸ್ಯರ ನೋಂದಣಿಗೆ 2023ರ ಜ.31 ಕೊನೆಯ ದಿನವಾಗಿತ್ತು.

ರೈತರು ಮತ್ತು ಸಹಕಾರ ಸಂಸ್ಥೆಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದರಿಂದ ಫೆ. 28ರವರೆಗೆ ಅವಧಿ ವಿಸ್ತರಿಸುವಂತೆ ಕೋರಿ ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು ಪ್ರಸ್ತಾವ ಸಲ್ಲಿಸಿದ್ದರು.



ದಾನದ ದೇಹದ ರಕ್ಷಣೆ

ಶರತ್ ಭಟ್ ಸೇರಾಜೆ

'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಉಕ್ತಿಯನ್ನು ಮರಣಾನಂತರವೂ ಪಾಲಿಸುವ ಅವಕಾಶವನ್ನು ಕೊಡುವುದು ದೇಹದಾನದ ಕ್ರಿಯೆ. ಅಂಗದಾನ ಮಾಡಿದರೆ ನಿಧನಾನಂತರವೂ ಅಂಗಗಳು ಅಗತ್ಯವಿದ್ದವರಿಗೆ ಉಪಕಾರ ಮಾಡುತ್ತವೆ. ಕಲಿಕೆಗೆ ಪ್ರಯೋಜನವಾಗುವ ಹಾಗೆ ಕೊಡುವುದು ಇನ್ನೊಂದು ತರಹದ ದಾನ.

'ವೈದ್ಯನಾಗುವವನಿಗೆ ಮಾನವನ ದೇಹದ ಒಳಗೆ ಏನಿದೆ, ಅಂಗರಚನೆ ಹೇಗಿದೆ ಎಂಬುದೇ ಗೊತ್ತಿಲ್ಲದಿದ್ದರೆ ಅವನು ಮುಂದೆ ಹೋಗುವ ಹಾಗೇ ಇಲ್ಲ' ಎಂದು ಯಾವ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾದರೂ ಹೇಳಿಯಾನು. 'ಈ ವಿಚಾರದಲ್ಲಿ ಪ್ರಾಯೋಗಿಕವಾಗಿ ಏನನ್ನೂ ಮಾಡಿನೋಡದೆ ಅದೆಷ್ಟು ಪುಟಗಳ ಸಿದ್ಧಾಂತವನ್ನು ಉರು ಹೊಡೆದರೂ ಪ್ರಯೋಜನವಿಲ್ಲ; ಅಂಥವರು ಹಾರುವ ಸಾಮರ್ಥ್ಯವಿಲ್ಲದ, ಒಂದೇ ರೆಕ್ಕೆಯ ಹಕ್ಕಿಯಿದ್ದಂತೆ' ಎಂಬರ್ಥ ಬರುವಂಥ ಮಾತನ್ನು ಎರಡೂವರೆಯೋ ಮೂರೋ ಸಾವಿರ ವರ್ಷಗಳಷ್ಟು ಹಿಂದೆಯೇ ಹೇಳಿದ್ದು 'ಸುಶ್ರುತಸಂಹಿತೆ' ಎನ್ನುವ ಗ್ರಂಥವನ್ನು ನೀಡಿ ಜ್ಞಾನದಾನವನ್ನು ಮಾಡಿದ ಆಚಾರ್ಯ ಸುಶ್ರುತ. ಇದು ಆ ಕಾಲಕ್ಕೂ ಈ ಕಾಲಕ್ಕೂ ಸತ್ಯವೇ. ಹಾಗಾಗಿಯೇ ಎಲ್ಲ ಕಾಲೇಜುಗಳಲ್ಲಿಯೂ ಅಂಗವಿಚ್ಛೇದನ ಮಾಡಿ ಅಂಗರಚನಾಶಾಸ್ತ್ರವನ್ನು, ಶರೀರವಿಜ್ಞಾನವನ್ನು ಹೇಳಿಕೊಡುವ ಶಿಕ್ಷಕರು ಬೇಕೇ ಬೇಕು. 'ಅನಾಟಮಿ ಪ್ರೊಫೆಸರ್' ಎಂದರೆ ಬಲುಬೇಡಿಕೆಯುಳ್ಳ ವ್ಯಕ್ತಿ. ವೈದ್ಯವಿದ್ಯೆಯನ್ನು ಕಲಿಯುವವರಿಗಾಗಿ ಬಹಳಷ್ಟು ಮೃತಶರೀರಗಳು ಬೇಕಾಗುತ್ತವೆ. ಬದುಕಿದ್ದವರ ಚರ್ಮ ಸುಲಿದು ಒಳಗೇನಿದೆ ಎಂದು ನೋಡುವಂತಿಲ್ಲವಲ್ಲ; ಈ ಕೆಲಸಕ್ಕೆ



> ವೈದ್ಯನಾಗುವವನಿಗೆ ಮಾನವನ ದೇಹದ ಒಳಗೆ ಏನಿದೆ, ಅಂಗರಚನೆ ಹೇಗಿದೆ ಎಂಬುದೇ ಗೊತ್ತಿಲ್ಲದಿದ್ದರೆ ಅವನು ಮುಂದೆ ಹೋಗುವ ಹಾಗೇ ಇಲ್ಲ...


ವಿಧಿವಶರಾದವರ ದೇಹವೇ ಬೇಕು.

ಹೀಗೆ ಕೊಡಲ್ಪಟ್ಟ ಮೃತದೇಹದ ಸಂರಕ್ಷಣೆಯ ವಿಧಿವಿಧಾನಗಳು ಯಾವುವು ಎಂಬುದು ಸಹಜವಾದ ಪ್ರಶ್ನೆ. ವೈದ್ಯರು ಮೊದಲಿಗೆ ನೋಡುವುದು ದೇಹದ ಸುಸ್ಥಿತಿಯನ್ನು - ವಿಷಪ್ರಾಶನವಾಗಿದೆಯೇ, ದೀರ್ಘಕಾಲ ಪೀಡಿಸಿದ ರೋಗಗಳಿರಬಾರದು, ಹೀಗೆ. ದೇಹವನ್ನು ಸ್ವೀಕರಿಸಿದ ಮೇಲೆ, 'ಈ ದೇಹವನ್ನು ನಾನು ಗೌರವಿಸುತ್ತೇನೆ, ಇದರ ಸದ್ಬಳಕೆ ಮಾಡುತ್ತೇನೆ' ಎಂದು ವೈದ್ಯರು ಪ್ರತಿಜ್ಞಾಸ್ವೀಕಾರ ಮಾಡಬೇಕು. ಅದಾದ ಮೇಲೆ ದೇಹವನ್ನು ಸ್ವಚ್ಛಗೊಳಿಸಲಾಗುತ್ತದೆ. ಇಷ್ಟಾದ ಮೇಲೆ ಹೆಣವನ್ನು ಕೆಡದಂತೆ ಇಡುವ embalming ಎಂಬ ಪ್ರಕ್ರಿಯೆಯನ್ನು ಆರಂಭಿಸುತ್ತಾರೆ. Balm ಎಂದರೆ ಮುಲಾಮು (ಜಂಡೂಬಾಮ್ ಎಂಬಲ್ಲಿ ಇರುವಂತೆ). ಹಳೆಯ ಕಾಲದಲ್ಲಿ ಮೃತದೇಹವು ಕೊಳೆಯದಂತೆ ಅದಕ್ಕೆ ಮುಲಾಮುಗಳನ್ನು, ಸುಗಂಧದ್ರವ್ಯಗಳನ್ನು, ಲೇಪನದ್ರವ್ಯಗಳನ್ನು ಎಲ್ಲ ಹಚ್ಚುವ ಅಭ್ಯಾಸ ಇದ್ದದ್ದರಿಂದ, Balm ಅನ್ನು ಲೇಪಿಸುವುದು ಎಂಬರ್ಥದಲ್ಲಿ embalming ಎಂಬ ಪ್ರಯೋಗ ಬಂದಿರಬೇಕು, ಈಗ ಇಂಥ ಮುಲಾಮುಗಳನ್ನು ಬಳಿಯುವ ಕ್ರಮ ಇಲ್ಲವಾದರೂ ಆ ಹೆಸರು ಹಾಗೇ ಉಳಿದುಕೊಂಡು ಬಿಟ್ಟಿದೆ.

ನಮ್ಮಲ್ಲಿ ಸುಶ್ರುತನೂ ದೇಹಸಂರಕ್ಷಣೆಯ ವಿವರಗಳನ್ನು ದಾಖಲಿಸಿದ್ದಾನೆ. ಅವನು ಕೊಟ್ಟಿರುವ ವಿಧಾನ ಹೀಗೆ: ದೇಹವನ್ನು ಮುಂಜ ಎಂಬ ಹುಲ್ಲಿನಿಂದ, ಅಥವಾ ದರ್ಭೆಯಿಂದ ಅಥವಾ ನಾರಿನಿಂದ ಮುಚ್ಚಿ ಕಟ್ಟಿ ಅದನ್ನು ಒಂದು ಪಂಜರದಲ್ಲಿಟ್ಟು, ಆ ಪಂಜರವನ್ನು ನದಿಯಂಥ ಹರಿಯುವ ನೀರಿನಲ್ಲಿ ಏಳು ದಿನಗಳ ಕಾಲ ಇಡಬೇಕು. ಪ್ರಯೋಗಕ್ಕೆ ತುಂಬಾ ಪ್ರಾಮುಖ್ಯವನ್ನು ಕೊಟ್ಟಿದ್ದ ಸುಶ್ರುತ ಇದನ್ನು ಮಾಡಿನೋಡದೇ, ಇದು ಕೆಲಸ ಮಾಡುತ್ತದೆಯೇ ಎಂದು ಪರೀಕ್ಷೆ ಮಾಡದೆ ಹೇಳಿರಲಾರ.

ಈಗಿನವರು ಮಾಡುವ 'ಎಂಬಾಮಿಂಗ್' ಬೇರೆಯೇ ತರಹದ್ದು. ಮೊದಲಿಗೆ ಒಂದಷ್ಟು ನೀರಿಗೆ ಫಾರ್ಮಲಿನ್ ದ್ರಾವಣವನ್ನು ಬೆರೆಸಿ, ಅದಕ್ಕೆ ಸ್ವಲ್ಪ ಗ್ಲಿಸರಿನ್ ಅನ್ನು ಸೇರಿಸಿ ಒಂದು ದ್ರಾವಣವನ್ನು ತಯಾರು ಮಾಡುತ್ತಾರೆ. ಹತ್ತು ಲೀಟರ್ ನೀರಿಗೆ ಎರಡು ಲೀಟರ್ ಫಾರ್ಮಲಿನ್, ಒಂದರ್ಧ ಲೀಟರ್ ಗ್ಲಿಸರಿನ್ – ಹೀಗೆ ಅನುಪಾತ ಇರುವಂಥ ಮಿಶ್ರಣ ಇದಾಗಿರಬೇಕು (ಈ ಮಿಶ್ರಣ ಹೆಚ್ಚುಕಡಿಮೆಯಾದರೆ ಅಂಗಗಳು ಕರಗಿ ಮುದ್ದೆಯಾಗಿ ಹೋಗಿಬಿಡುತ್ತವೆ; ಹಾಗಾದರೆ ಅವು ನಿರುಪಯುಕ್ತವಾಗುತ್ತವೆ ಅಂತ ಬೇರೆ ಹೇಳಬೇಕಾದ್ದಿಲ್ಲವಲ್ಲ). ಈ ದ್ರಾವಣವನ್ನು ಶವದ ಒಳಗೆ ತುಂಬಿಸುವುದು ಮುಂದಿನ ಕೆಲಸ. ಹೃದಯದಿಂದ ದೇಹದ ಬೇರೆ ಬೇರೆ ಭಾಗಗಳಿಗೆ ರಕ್ತ ಸರಬರಾಜು ಮಾಡುವ ರಕ್ತನಾಳಗಳಿಗೆ ಅಪಧಮನಿಗಳು ಎಂದು ಹೆಸರು. ಕುತ್ತಿಗೆಯಲ್ಲಿ ಇರುವ ರಕ್ತನಾಳವಾದ Carotid ಎಂಬುದು ಇಂಥದ್ದೇ ಒಂದು ಅಪಧಮನಿ. ಈ ಕರೋಟಿಡ್ ಅಪಧಮನಿಗೆ ಮೇಲೆ ಹೇಳಿದ ದ್ರಾವಣವನ್ನು ಕೊಳವೆಯೊಂದರ ಮೂಲಕ ಒತ್ತಿ ನೂಕಿದರೆ ಅದು ದ್ರಾವಣವನ್ನು ದೇಹದ ಎಲ್ಲ ಭಾಗಗಳಿಗೆ ಸಾಗಿಸುತ್ತದೆ (ಕರೋಟಿಡ್ಡಿನ ಬದಲಿಗೆ ತೊಡೆಯ ಬಳಿ ಇರುವ Femoral ಅಪಧಮನಿಯನ್ನೂ ಬಳಸಬಹುದು; ಈ ವಿಧಾನಕ್ಕೆ ಸ್ವಲ್ಪ ಹೆಚ್ಚು ಹೊತ್ತು ಹಿಡಿಯುತ್ತದೆ.) ಈ ದ್ರಾವಣವು ದೇಹವನ್ನು ಸೇರಿದಾಗ ಎಲ್ಲ ಭಾಗಗಳು ಸೆಟೆದುಕೊಂಡು, ಗಡಸು ಗಡಸಾಗುತ್ತವೆ. ಒಂದು ಭಾಗ ಮೃದುವಾಗಿದ್ದರೆ ಅಲ್ಲಿಗೆ ದ್ರಾವಣ ತಲುಪಿಲ್ಲವೆಂದರ್ಥ. ಅಂಥಲ್ಲಿಗೆ ಚುಚ್ಚುಗೊಳವೆಯನ್ನು ಬಳಸಿ ದ್ರಾವಣವನ್ನು ತುಂಬಬೇಕು.

'ಫಾರ್ಮಲ್ ಡಿಹೈಡ್' ಎಂಬ ಅನಿಲವು ನೀರಿನಲ್ಲಿ ಬೆರೆತರೆ ಅದುವೇ ಫಾರ್ಮಲಿನ್. ಈ ಫಾರ್ಮಲ್ ಡಿಹೈಡ್ ಎಂಬುದು ಕೀಟನಾಶಕಗಳಲ್ಲಿ, ಸೌಂದರ್ಯವರ್ಧಕಗಳಲ್ಲಿ, ಶಾಂಪೂವಿನಲ್ಲಿ ಎಲ್ಲ ಬಳಸಲ್ಪಡುವ ರಾಸಾಯನಿಕವೇ. ಫಂಗಸ್, ಏಕಾಣುಜೀವಿಗಳು (ಬ್ಯಾಕ್ಟೀರಿಯಾ) – ಇವೆಲ್ಲ ಹೆಣವನ್ನು ಕೊಳೆತು ನಾರುವಂತೆ ಮಾಡುತ್ತವೆ. ಇಂಥ ಸೂಕ್ಷ್ಮಕ್ರಿಮಿಗಳಿಗೆ ಇರಲಾಗದಂತೆ ಮಾಡುವುದು ಫಾರ್ಮಲಿನ್ನಿನ ಕೆಲಸ. ಇದೊಂದು ರೀತಿ ಉಪ್ಪಿನಕಾಯಿ ಹಾಕಿದಂತೆ ಎನ್ನಬಹುದೇನೋ. ಸುಶ್ರುತ ಹೇಳಿದ ಹುಲ್ಲು, ದರ್ಭೆಗಳ ಪ್ರಯೋಜವೂ ಇದೇ ಇರಬೇಕೆಂದು ತೋರುತ್ತದೆ. ಮೇಲೆ ಹೇಳಿದ ಫಾರ್ಮಲಿನ್, ಗ್ಲಿಸರಿನ್ನುಗಳ ಬದಲಿಗೆ ಅದೇ ಕೆಲಸ ಮಾಡುವ ಬೇರೆ ರಾಸಾಯನಿಕಗಳ ಬಳಕೆ ಮಾಡುವವರೂ ಹಲವರಿದ್ದಾರೆ. ಇಷ್ಟಾದ ಮೇಲೆ ಶವವನ್ನು ಟ್ಯಾಂಕ್ ಒಂದರಲ್ಲಿ ಸಂಸ್ಕರಿಸಿ ಇಡಲಾಗುತ್ತದೆ, ಈ ಟ್ಯಾಂಕಿನಲ್ಲಿಯೂ ನೀರು ಮತ್ತು ಫಾರ್ಮಲಿನ್ನಿನ ಮಿಶ್ರಣ ಇರುತ್ತದೆ. ನೀರಿನ ಪ್ರಮಾಣವೇ ಹೆಚ್ಚು, ಇಲ್ಲದಿದ್ದರೆ ಈ ಫಾರ್ಮಲಿನ್ನಿನ ಉರಿ, ಘಾಟುಗಳನ್ನು ತಡೆದುಕೊಳ್ಳುವುದು ಕಷ್ಟ. ಹೀಗೆ ಆರು ತಿಂಗಳು ಇಟ್ಟ ಮೇಲೆ, ವೈದ್ಯರು ಈ ದೇಹವನ್ನು ವಿದ್ಯಾರ್ಥಿಗಳಿಗೆ ದೇಹದ ಒಳಗನ್ನು, ಅಂಗಾಂಗಳ ವಿನ್ಯಾಸವನ್ನು ತೋರಿಸಿಕೊಡುವುದಕ್ಕೆ ಉಪಯೋಗಿಸುತ್ತಾರೆ. ಹೀಗೆ ದಾನವಾಗಿ ಕೊಡಲ್ಪಟ್ಟ ದೇಹವು ವಿದ್ಯೆಗೆ ಸಹಕಾರಿಯಾಗಿ ಸಾರ್ಥಕ್ಯವನ್ನು ಪಡೆಯುತ್ತದೆ.





ಹೆಚ್ಚಿತೇ ಬ್ಯಾಟರಿಗಳ ಬಾಳ ಭಾಗ್ಯ?

ಕ್ಷಮಾ ವಿ. ಭಾನುಪ್ರಕಾಶ್

ಪರಿಸರ ಮಾಲಿನ್ಯದ ಬಗ್ಗೆ ಪ್ರತಿದಿನವೂ ಒಂದಿಲ್ಲೊಂದು ಕಡೆ ಓದುತ್ತೇವೆ, ಕೇಳುತ್ತೇವೆ, ಮಾತಾಡುತ್ತೇವೆ. ಪ್ರಸಕ್ತ ಪರಿಸ್ಥಿತಿಯಲ್ಲಿ, ಮಾಹಿತಿಯ ಕೊರತೆ ಯಾರಿಗೂ ಇಲ್ಲ. ಆದರೆ ಜ್ಞಾನದ, ಅನುಷ್ಠಾನದ ಕೊರತೆ ಎದ್ದುಕಾಣುತ್ತಿದೆ. ಪರಿಸರ ಮಾಲಿನ್ಯ ಎಂದಾಕ್ಷಣ ಪ್ಲಾಸ್ಟಿಕ್‌ನ ವಿಷಯ ಬರಲೇಬೇಕಲ್ಲ!

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಕಾರ, ಭಾರತದಲ್ಲಿ ಪ್ರತಿವರ್ಷ ಪ್ಲಾಸ್ಟಿಕ್ ತ್ಯಾಜ್ಯದ ಪ್ರಮಾಣವು ಶೇ 3ರಷ್ಟು ಏರಿಕೆಯಾಗುತ್ತಿದೆಯಂತೆ. ಆದರೆ, ಇದನ್ನೂ ಮೀರಿ ಏರಿಕೆಯಾಗುತ್ತಿರುವುದು ಯಾವುದರಲ್ಲಿ ಗೊತ್ತೇ? ಇ-ವೇಸ್ಟ್ ಅಥವಾ ವಿದ್ಯುನ್ಮಾನ (ಎಲೆಕ್ಟ್ರಾನಿಕ್) ತ್ಯಾಜ್ಯದಲ್ಲಿ. ನಮ್ಮ ದೇಶದಲ್ಲಿ ವಾರ್ಷಿಕವಾಗಿ ವಿದ್ಯುನ್ಮಾನ ತ್ಯಾಜ್ಯದ ಪ್ರಮಾಣದಲ್ಲಿ ಶೇ 31ರಷ್ಟು ಏರಿಕೆ ಕಂಡುಬರುತ್ತಿದೆಯಂತೆ! ಅಬ್ಬ!! ಊಹಿಸಿಕೊಂಡರೂ ಭಯವಾಗುತ್ತದೆ. ಆದರೆ, ಇದು ಅಚ್ಚರಿಯ ಫಲಿತಾಂಶವೇನಲ್ಲ. ತಿಂಗಳಿಗೊಂದು ಫೋನು ಬದಲಾಯಿಸುವವರ, ಮನೆಯಲ್ಲಿ ಎಲ್ಲಕ್ಕೂ ರಿಮೋಟು ಬೇಕೆನ್ನುವವರ, ಇತರ ವಸ್ತುಗಳಾಗಲೀ, ವಿದ್ಯುನ್ಮಾನ ಸಾಧನವಾಗಲೀ ಬಳಸಿ ಬಿಸಾಡುವ ಸಂಸ್ಕೃತಿ ಬೆಳೆಸಿಕೊಂಡ ತಲೆಮಾರಿನ ಅನಿವಾರ್ಯ ಕರ್ಮವಿದು.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು, ಸ್ವಯಂಸೇವಾ ಸಂಸ್ಥೆಗಳು, ಸರ್ಕಾರೇತರ ಪರಿಸರ ಸಂಸ್ಥೆಗಳು ಅನೇಕ ಕಾರ್ಯಕ್ರಮಗಳ, ಯೋಜನೆಗಳ ಮೂಲಕ ಜನಸಾಮಾನ್ಯರಲ್ಲಿ ಇ-ವೇಸ್ಟಿನ ಬಗ್ಗೆ ಅರಿವು ಮೂಡಿಸುವ ಕೆಲಸಗಳನ್ನು ಮಾಡುತ್ತಲೇ ಇದ್ದಾರೆ. ಆದರೆ, ನಿಜವಾಗಿಯೂ ಅರಿವು ಮೂಡಿದ್ದರೆ, ಸಾವಿರಾರು ಟನ್‌ಗಳಷ್ಟು ಬ್ಯಾಟರಿಗಳು ಭೂಮಿಯ ಒಡಲನ್ನು ಸೇರುತ್ತಿರಲಿಲ್ಲ; ಜಗತ್ತಿನ ಮೂರು ಅತಿಹೆಚ್ಚು ಇ-ತ್ಯಾಜ್ಯ ಉತ್ಪಾದಕ ದೇಶಗಳಲ್ಲಿ ಚೀನಾ, ಅಮೆರಿಕಾದ ಜೊತೆಗೆ ನಾವೂ ಸೇರಿದ್ದೇವೆ. ವಿದ್ಯುನ್ಮಾನ ತ್ಯಾಜ್ಯವು ಭೂಮಿಯ ಒಡಲನ್ನು ಸೇರಬಾರದೆಂದರೆ, ಅದನ್ನು ಮರುಬಳಕೆ ಮಾಡಬೇಕು ತಾನೆ? ನಿಜವೇ! ಆದರೆ, ಅದಕ್ಕೂ ಸಿಕ್ಕಾಪಟ್ಟೆ ಖರ್ಚಾಗುತ್ತದಲ್ಲ ಸ್ವಾಮಿ? ಹಣ ಮಾತ್ರವಲ್ಲ ಅಪಾರ ಪ್ರಮಾಣದ ಶಕ್ತಿಯೂ ಬೇಕಲ್ಲ! ಸರಿ, ಹಾಗಾದರೆ, ಇ–ತ್ಯಾಜ್ಯವನ್ನು ಬಿಸಾಡುವುದೇ ಬೇಡ ಎಂದರೆ? ಅಯ್ಯೋ! ಬಿಸಾಡದೇ ಇದ್ದರೆ, ಇ-ತ್ಯಾಜ್ಯದ ಪರ್ವತವೇ ಸೃಷ್ಟಿಯಾಗುತ್ತಲ್ಲ! ಅದೂ, ವರ್ಷಕ್ಕೆ ಶೇ 31ರಷ್ಟು ಬೆಳೆಯುವ ಪರ್ವತ ಬೇರೆ! ಎಂದು ಯೋಚಿಸುತ್ತಿದ್ದೀರಾ? ನಮ್ಮ ವಿಜ್ಞಾನಿಗಳು ಇದಕ್ಕೂ ಉತ್ತರ ಕಂಡುಕೊಂಡಿದ್ದಾರೆ.

ಗಡಿಯಾರ, ರಿಮೋಟ್‌ಗಳು, ಲ್ಯಾಪ್ಟಾಪ್, ಫೋನ್‌ನಂತಹ ಸಾಧನಗಳಲ್ಲಿ ಬಳಸುವ ಬ್ಯಾಟರಿಗಳ ಆಯುಷ್ಯವನ್ನು ಹೆಚ್ಚಿಸುತ್ತಿದ್ದಾರೆ ಸಂಶೋಧಕರು. ಅದೇನು, ಒಂದೆರಡು ವರ್ಷಗಳಲ್ಲ, ರೀಚಾರ್ಜ್ ಮಾಡಿ ಬಳಸುವ ಬ್ಯಾಟರಿಗಳ ಬಗ್ಗೆಯೂ ಇಲ್ಲಿ ಮಾತಾಡುತ್ತಿಲ್ಲ. ಬ್ಯಾಟರಿಯ ಬಾಳಿಕೆಯನ್ನು ಹೆಚ್ಚಿಸುವ ಬಗ್ಗೆ ಮತ್ತು ಅವು ಇ-ತ್ಯಾಜ್ಯವಾಗಿ ಮರುಬಳಕೆ ಕೇಂದ್ರ ಅಥವಾ ಕಸದ ರಾಶಿ ಸೇರುವುದನ್ನು ತಡೆಗಟ್ಟುವ ಬಗ್ಗೆ ಜಗತ್ತಿನ ಅನೇಕ ಪ್ರಯೋಗಾಲಯಗಳಲ್ಲಿ ಭೌತರಸಾಯನವಿಜ್ಞಾನಿಗಳು, ತಂತ್ರಜ್ಞಾನ ತಜ್ಞರು ಕಾರ್ಯನಿರತರಾಗಿದ್ದಾರೆ. ಅದೇ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದ ಆಸ್ಟ್ರೇಲಿಯಾದ ಸಂಶೋಧಕ ಲೆಸ್ಲಿ ಯಿಯೋ ಮತ್ತು ತಂಡದವರು ಒಂದು ವಿನೂತನ ಪ್ರಯೋಗ ಮಾಡಿ ಯಶಸ್ಸನ್ನು ಕಂಡಿದ್ದಾರೆ. ಇವರು ಬ್ಯಾಟರಿಗಳನ್ನು ದೀರ್ಘಾಯುಷಿ ಮಾಡುತ್ತಿಲ್ಲ, ಬ್ಯಾಟರಿಗಳನ್ನು ಅಮರವಾಗಿಸುತ್ತಿದ್ದಾರೆ. ಅದು ಹೇಗೆ ಸಾಧ್ಯ? ಅಂದರೆ, ಒಮ್ಮೆ ಕೊಂಡುಕೊಂಡ ಬ್ಯಾಟರಿ ಜೀವಮಾನಪರ್ಯಂತ ಸಾಕೇ ಎಂದಿರಾ? ಈ ತಜ್ಞರ ಪ್ರಕಾರ, ಹೌದು.

ಸಾಮಾನ್ಯ ಬ್ಯಾಟರಿಗಳಲ್ಲಿ ಬಳಕೆಯಾಗುವ ಪ್ರಬಲ ಆಮ್ಲ(ಆಸಿಡ್) ಅಥವಾ ಕ್ಷಾರ(ಆಲ್ಕಲಿ)ದಂತಹ ರಾಸಾಯನಿಕಗಳಿವೆಯಲ್ಲ? ಅವು ಕಾಲಕ್ರಮೇಣ, ಬ್ಯಾಟರಿಗಳಲ್ಲಿನ ಲೋಹಗಳೊಂದಿಗೆ ರಾಸಾಯಾನಿಕ ಪ್ರಕ್ರಿಯೆ ನಡೆಸಿ, ಅವುಗಳು ಕಿಲುಬು ಹಿಡಿಯುವಂತೆ, ಅವುಗಳ ಮೂಲ ಗುಣವಿಶೇಷಗಳನ್ನು ಕಳೆದುಕೊಂಡು ಸೋರುವಂತೆ ಮಾಡುತ್ತವೆ. ಹಳೆಯ ಟ್ರಾನ್ಸಿಸ್ಟರ್ ರೇಡಿಯೋಗಳನ್ನೋ, ಗಡಿಯಾರದ ಹಿಂಬದಿಯನ್ನೋ ತೆರೆದು ನೋಡಿದ್ದರೆ ಕಂದುಬಣ್ಣದ ದ್ರವವು ಹೊರಬಂದ ಬ್ಯಾಟರಿಗಳನ್ನು ನೀವು ನೋಡಿರಬಹುದು. ಅಥವಾ, ಮರೆತು ಕಪಾಟಿನ ಮೂಲೆ ಸೇರಿ, ಮತ್ತೆಂದೋ ಸಿಕ್ಕ ಸೆಲ್‌ನ ಸುತ್ತ ಸೋರಿದ ಕಂದುಬಣ್ಣದ ದ್ರವವನ್ನು ಕಂಡಿರಬಹುದು. ಇದು ಸಾಮಾನ್ಯವಾಗಿ ಎಲ್ಲಾ ಬ್ಯಾಟರಿಗಳೂ ಒಂದಿಲ್ಲೊಂದು ದಿನ ಅನುಭವಿಸುವ ಸಮಸ್ಯೆಯೇ. ಇದರಿಂದಲೇ ಅವುಗಳ ಆಯುಷ್ಯ ನೀಗಿ, ಅವು ಮರುಬಳಕೆಯ ಕೇಂದ್ರಕ್ಕೋ, ಕಸದ ರಾಶಿಗೋ ಹೋಗುತ್ತವೆ. ಇದನ್ನು ತಡೆಯಲು ಈಗಾಗಲೇ ಅನೇಕ ರಾಸಾಯನಿಕ ಕ್ರಮಗಳಿವೆ. ಈ ತುಕ್ಕು ಹಿಡಿಯುವಂತಹ ರಾಸಾಯನಿಕ ಪ್ರಕ್ರಿಯೆಯನ್ನು ತಪ್ಪಿಸಲು ತುಕ್ಕು-ನಿರೋಧಕ ಗ್ರೀಸ್ ಮತ್ತು ದ್ರಾವಣಗಳು ದೊರೆಯುತ್ತವೆ. ನಮ್ಮ ಆರೋಗ್ಯಕ್ಕೆ ಮಾತ್ರ ಮನೆಮದ್ದು ಸಾಕೇ? ನಮ್ಮ ಬ್ಯಾಟರಿಗಳ ಆರೋಗ್ಯಕ್ಕೂ ಮನೆಮದ್ದು ಬಳಸಬಹುದು ಎಂದು ಕೆಲವರು ವ್ಯಾಸೆಲೀನ್‌ನಂತಹ ಪೆಟ್ರೋಲಿಯಮ್ ಜೆಲ್ಲಿಯನ್ನೋ ಅಡುಗೆಸೋಡಾವನ್ನೋ ಬ್ಯಾಟರಿಗಳಿಗೆ ಸವರುತ್ತಾರೆ. ಆದರೆ, ಅದರ ಬಗ್ಗೆ ತಿಳಿವಳಿಕೆ ಇಲ್ಲದೆ ಇಂತಹ ಪ್ರಕ್ರಿಯೆಗಳಲ್ಲಿ ತೊಡಗಿದರೆ, ಅನುಕೂಲಕ್ಕಿಂತಲೂ ಅನನುಕೂಲ, ಅಪಾಯವೇ ಎದುರಾಗುವುದು ಹೆಚ್ಚು. ಇಂತಹ ರಾಸಾಯನಿಕ ಲೇಪನಗಳು ದೀರ್ಘಾವಧಿ ಫಲಿತಾಂಶಗಳನ್ನು ನೀಡುವುದಿಲ್ಲ ಮತ್ತು ಬ್ಯಾಟರಿಯ ವಿದ್ಯುದ್ವಾಹಕತೆಯನ್ನು ಕಡಿಮೆ ಮಾಡುತ್ತದೆ. ಹಾಗಾಗಿ, ಇದಕ್ಕೊಂದು ಪರ್ಯಾಯ ಹುಡುಕುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದ ಆಸ್ಟ್ರೇಲಿಯಾದ ನ್ಯಾನೋತಜ್ಞರು 'ಎಂಕ್ಸೀನ್' ಎಂಬ ಹೊಸ ನ್ಯಾನೋಸಾಮಗ್ರಿಯನ್ನು ಬಳಸಿ ಬ್ಯಾಟರಿ ತಯಾರಿಸುತ್ತಿದ್ದಾರೆ.

ಈಗಾಗಲೇ ಬಳಕೆಯಲ್ಲಿರುವ ಗ್ರಫೀನ್‌ಗಿಂತಲೂ ಹೆಚ್ಚು ಸುಲಭವಾಗಿ ಬಳಸಬಲ್ಲ, ಹೆಚ್ಚು ದಕ್ಷವೆನಿಸಿದ್ದ ಎಂಕ್ಸೀನ್‌ಗೆ ಇದ್ದ ಒಂದೇ ಸಮಸ್ಯೆಯೆಂದರೆ ಅದು ಬೇಗ ತುಕ್ಕು ಹಿಡಿಯುತ್ತಿತ್ತು. ಅದನ್ನು ತಪ್ಪಿಸಲು, ಹಿಡಿದ ತುಕ್ಕನ್ನು ತೆಗೆಯಲು ಈ ತಜ್ಞರು ಏನು ಮಾಡಿದ್ದಾರೆ ಗೊತ್ತೇ? ಧ್ವನಿತರಂಗಗಳ ಮೊರೆಹೋಗಿದ್ದಾರಂತೆ! ಎಂಕ್ಸೀನ್‌ನಂತಹ ನ್ಯಾನೋಸಾಮಗ್ರಿಯನ್ನು ಬಳಸಿ ತಯಾರಿಸಿದ ಬ್ಯಾಟರಿಗಳಲ್ಲಿ ಸೃಷ್ಟಿಯಾಗುವ ತುಕ್ಕು, ಒಂದು ಕೂದಲಿಗಿಂತಲೂ ಅತ್ಯಂತ ತೆಳ್ಳಗಿರುತ್ತದೆ. ಅದರ ನಿವಾರಣೆ ಕಡುಕಷ್ಟ. ಅಂತಹ ತುಕ್ಕು ಹಿಡಿದ ಎಂಕ್ಸೀನ್ ಬ್ಯಾಟರಿಯನ್ನು ಹೆಚ್ಚಿನ ಆವರ್ತನದ ನ್ಯಾನೊಮಟ್ಟದ ಎಲೆಕ್ಟ್ರೋಮೆಕಾನಿಕಲ್ ಕಂಪನಕ್ಕೆ ಒಡ್ಡಿದರೆ, ತುಕ್ಕು ಮಂಗಮಾಯ! ಇಂತಹ ಹೆಚ್ಚಿನ ಆವರ್ತನದ ಧ್ವನಿತರಂಗಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬಳಸಿ, ಇತರ ಬಗೆಯ ಬ್ಯಾಟರಿಗಳಲ್ಲೂ ತುಕ್ಕುನಿರೋಧಕತೆಯನ್ನೂ ತುಕ್ಕುನಿರ್ಮೂಲನೆಯನ್ನೂ ಸಾಧ್ಯವಾಗಿಸಿದ್ದಾರೆ, ಈ ಸಂಶೋಧಕರು. ಇದನ್ನು ದೊಡ್ಡ ಪ್ರಮಾಣದಲ್ಲಿ ಸಾಧ್ಯವಾಗಿಸಲು ಹೂಡಿಕೆದಾರರನ್ನು, ಸರ್ಕಾರದ ನಿಯಮಾವಳಿಗಳನ್ನು ಎದುರು ನೋಡುತ್ತಿರುವ ತಜ್ಞರು, ಬ್ಯಾಟರಿಗಳ ಭವಿಷ್ಯವನ್ನು, ಇ-ತ್ಯಾಜ್ಯದ ಹಣೆಬರಹವನ್ನು ಬದಲಾಯಿಸಲು ಹೊರಟಿದ್ದಾರೆ. ಅಲ್ಲಿಯವರೆಗೂ, ಇ-ತ್ಯಾಜ್ಯದ ಜವಾಬ್ದಾರಿಯುತ ನಿರ್ವಹಣೆಯನ್ನು ಮಾಡುವ ಹೊಣೆ ನಮ್ಮದು.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಸಮಾಜ ವಿಜ್ಞಾನ

1) ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ....

ಎ) ವಿಶ್ವ ವ್ಯಾಪಾರ ಸಂಘ
ಬಿ) ವಿಶ್ವ ಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ
ಸಿ) ಐ.ಎಮ್.ಎಫ್. (ಡಿ) ಯೂನಿಸೆಫ್

ಉತ್ತರ: (ಬಿ) ವಿಶ್ವ ಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ ಸಮಿತಿ

2) A-ಪಟ್ಟಿಯಲ್ಲಿ ನಾಯಕರು ಮತ್ತು B-ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ. ಅವುಗಳಿಗೆ ಸರಿ ಹೊಂದುವ ಉತ್ತರದ ಗುಂಪನ್ನು ಗುರುತಿಸಿ:

A - ಪಟ್ಟಿ	B - ಪಟ್ಟಿ
(A) ಮೈಸೂರು ಲ್ಯಾನ್ಸ್ ರೆಜಿಮೆಂಟ್	(i) ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ
(b) ಜೋಸೆಫ್ ಸ್ಟಾಲಿನ್	(ii) ನಾಜಿ ಪಕ್ಷ
(c) ಹಿಟ್ಲರ್	(iii) ವಿಶ್ವ ಸಂಸ್ಥೆ
(D) ಮುಸೋಲಿನಿ	(iv) ಪ್ರಥಮ ಮಹಾಯುದ್ಧ

	a	b	c	d
A	iv	iii	ii	i
B	i	ii	iii	iv
C	iii	iv	i	ii
D	ii	i	iv	iii

ಉತ್ತರ: ಎ

A	iv	iii	ii	i

3) ಉತ್ತರ ಪ್ರದೇಶದ ತೆಹ್ರಿ-ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರವು ಮರಗಳನ್ನು ಕಡಿಯಲು ಅನುಮತಿ ನೀಡಿತ್ತು. ಇದರಿಂದ ಅರಣ್ಯನಾಶವಾಗುತ್ತದೆ ಮತ್ತು ಪರಿಸರ ಹಾಳಾಗುತ್ತದೆ ಎಂದು ತಿಳಿದು ಜನರು ಮರಗಳನ್ನು ಅಪ್ಪಿ ಹಿಡಿದು ಕಡಿಯದಂತೆ ತಡೆದರು. ಈ ಚಳವಳಿಯು 1973ರಲ್ಲಿ ಸುಂದರ್ ಲಾಲ್ ಬಹುಗುಣ ಹಾಗೂ.................. ಅವರ ನೇತೃತ್ವದಲ್ಲಿ ನಡೆಯಿತು

ಎ) ಚಂಡಿಪ್ರಸಾದ್ ಭಟ್ ಬಿ) ಇಳಾ ಭಟ್
ಸಿ) ರಾಮಚಂದ್ರ ಗುಹಾ ಡಿ) ಈಶಾ ಫೌಂಡೇಶನ್

ಉತ್ತರ:- (ಎ) ಚಂಡಿಪ್ರಸಾದ್ ಭಟ್

4) ಬ್ಯಾಂಕ್‌ಗಳ ಬ್ಯಾಂಕು. ....

ಎ) ಮೈಸೂರು ಬ್ಯಾಂಕ್ ಬಿ) ಭೂ ಬ್ಯಾಂಕ್
ಸಿ) ಸಹಕಾರಿ ಬ್ಯಾಂಕ್ ಡಿ) ರಿಸರ್ವ ಬ್ಯಾಂಕ್

ಉತ್ತರ:- (ಡಿ) ರಿಸರ್ವ್ ಬ್ಯಾಂಕ್

5) 'ಬಿಳಿ ಕ್ರಾಂತಿಯ ಪಿತಾಮಹ' ಎಂದು ಖ್ಯಾತರಾಗಿರುವವರು....

ಎ) ಧೀರೂಬಾಯಿ ಅಂಬಾನಿ ಬಿ) ವರ್ಗೀಸ್ ಕುರಿಯನ್
ಸಿ) ಅಜೀಂ ಪ್ರೇಮ್‌ಜಿ ಡಿ) ಕಿರಣ್ ಮಜುಂದಾರ್ ಷಾ.

ಉತ್ತರ :- (ಬಿ) ವರ್ಗೀಸ್ ಕುರಿಯನ್

6) ವಿಶ್ವವ್ಯಾಪಾರ ಸಂಘಟನೆ W.T.O ಕೇಂದ್ರ ಕಚೇರಿ ಇರುವುದು............ ...

(ಎ) ಜಿನೇವಾ (ಬಿ) ಪ್ಯಾರಿಸ್
(ಸಿ) ರೋಮ್ (ಡಿ) ನವದೆಹಲಿ

ಉತ್ತರ: (ಎ) ಜಿನೇವಾ

7) A ಪಟ್ಟಿಯಲ್ಲಿ ನಾಯಕರು ಮತ್ತು B ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ. ಇವುಗಳ ಸರಿ ಹೊಂದುವ ಉತ್ತರದ ಗುಂಪನ್ನು ಗುರುತಿಸಿ

A	B
1) ಮಹಮ್ಮದ್ ಅಲಿ ಜಿನ್ನ	ಎ) ಬಹಿಷ್ಕೃತ ಹಿತಕಾರಿಣಿ ಸಭೆ
2) ಡಾ. ಬಿ.ಆರ್.ಅಂಬೇಡ್ಕರ್	ಬಿ) ದಂಡಿ ಸತ್ಯಾಗ್ರಹ
3) ಗಾಂಧೀಜಿ	ಸಿ) ಸ್ವರಾಜ್ ಪಕ್ಷ
4) ಮೋತಿಲಾಲ್ ನೆಹರೂ	ಡಿ) ನೇರ ಕಾರ್ಯಾಚರಣೆ ದಿನ

A) 1-d 2-a 3-b 4-c
B) 1-a 2-b 3-c 4-d
C) 1-b 2-c 3-d 4-a
D) 1-c 2-d 3-a 4-b

ಉತ್ತರ (A) 1-d 2-a 3-b 4-c

8) ಗೋವೆಯನ್ನು ಪೋರ್ಚುಗೀಸರಿಂದ ವಿಮೋಚನೆಗೊಳಿಸಿದ ವರ್ಷ ಯಾವುದು?

ಎ) 1947 ಬಿ) 1955
ಸಿ) 1961 ಡಿ) 1987

ಉತ್ತರ : (ಸಿ) 1961

9) ಪೋರ್ಚುಗೀಸರ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕಲ್ಲಿಕೋಟೆಗೆ ಮೊತ್ತಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಅವನು ಭಾರತಕ್ಕೆ ಬಂದ ವರ್ಷ ಯಾವುದು?

ಎ) 1398 ಬಿ) 1488
ಸಿ) 1598 , ಡಿ) 1498

ಉತ್ತರ:- ಡಿ) 1498

10) ನದಿಗಳು ಪರ್ವತ ಪ್ರದೇಶಗಳಿಂದ ತಂದು ಸಂಚಯಿಸಿರುವ ಮಣ್ಣಿಗೆ.......ಎಂದು ಕರೆಯುವರು.

ಎ) ಜಂಬಿಟ್ಟಿಗೆ ಮಣ್ಣು ಬಿ) ಮೆಕ್ಕಲು ಮಣ್ಣು
ಸಿ) ಮರುಭೂಮಿ ಮಣ್ಣು ಡಿ) ಕೆಂಪುಮಣ್ಣು

ಉತ್ತರ:-ಬಿ) ಮೆಕ್ಕಲು

11) ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ ....

ಎ) ಸಾರ್ವಜನಿಕ ಹಣಕಾಸು ಬಿ) ಸಾರ್ವಜನಿಕ ವೆಚ್ಚಗಳು
ಸಿ) ಯೋಜನಾ ವೆಚ್ಚಗಳು ಡಿ) ಆಯವ್ಯಯ

ಉತ್ತರ :- (ಡಿ) ಆಯವ್ಯಯ

12) ನೀತಿ ಆಯೋಗದ ಎಲ್ಲಾ ಚಟುವಟಿಕೆಗಳನ್ನು ನಾಲ್ಕು ಮುಖ್ಯ ವಿಭಾಗಗಳಲ್ಲಿ ನೋಡಬಹುದು. ಅವುಗಳನ್ನು ಗಮನಿಸಿ.

1) ನೀತಿ ಮತ್ತು ಕಾರ್ಯಕ್ರಮ ಚೌಕಟ್ಟು
2) ಸಹಕಾರಿ ಒಕ್ಕೂಟ ವ್ಯವಸ್ಥೆ
3) ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ
4) ಚಿಂತಕರ ಕೂಟ ಮತ್ತು ಜ್ಞಾನ ಮತ್ತು ನಾವೀನ್ಯ ಸಮೂಹ

ಇವುಗಳಲ್ಲಿ ಯಾವುದಾದರೂ ತಪ್ಪಾಗಿದೆಯೇ ಗುರುತಿಸಿ.?
ಉತ್ತರ ಸಂಕೇತಗಳು

ಎ) 1 ಮಾತ್ರ ತಪ್ಪಾಗಿದೆ ಬಿ) 2 ಮತ್ತು 3 ಮಾತ್ರ ತಪ್ಪಾಗಿದೆ
ಸಿ) 3 ಮತ್ತು 4 ಮಾತ್ರ ತಪ್ಪಾಗಿದೆ ಡಿ) ಯಾವುದೂ ತಪ್ಪಾಗಿಲ್ಲ.

ಉತ್ತರ:- (ಡಿ) ಯಾವುದೂ ತಪ್ಪಾಗಿಲ್ಲ.

ಎಸ್ಸೆಸ್ಸೆಲ್ಸಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ


ಪ್ರಜಾವಾಣಿ ನೋಡಿಯೊ — ಪಿಯುಸಿ ಭೌತ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತ

ಪಿಯುಸಿ

37) X–ಅಕ್ಷ, $y=x$ ಸರಳರೇಖೆ ಮತ್ತು $x^2+y^2=32$ ವೃತ್ತಗಳಿಂದ ಆವೃತವಾದ ಮೊದಲ ಚತರ್ಥಾಂಕದಲ್ಲಿನ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಪರಿಹಾರ: $y = x$...... (1) ಮತ್ತು $x^2 + y^2 = 32$ .... (2) ಗಳು ದತ್ತ ಸಮೀಕರಣಗಳು ಇವೆರಡೂ ಸಮೀಕರಣಗಳನ್ನು ಏಕಕಾಲಿಕವಾಗಿ ಬಿಡಿಸಿದಾಗ ಅವು ಪ್ರಥಮ ಚತುರ್ಥಾಂಕದಲ್ಲಿ B(4, 4) ರಲ್ಲಿ ಸಂಧಿಸುತ್ತದೆ ಎಂದು ತಿಳಿಯುತ್ತದೆ.



∴ ಬೇಕಾದ ಕ್ಷೇತ್ರಫಲ = OBMO ಪ್ರದೇಶ ಕ್ಷೇತ್ರಫಲ + BMAB ಪ್ರದೇಶದ ಕ್ಷೇತ್ರಫಲ

OBMO ಪ್ರದೇಶದ ಕ್ಷೇತ್ರಫಲ =

$$\int_0^4 y\,dx = \int_0^4 x\,dx = \left(\frac{x^2}{2}\right)_0^4 = 8$$

BMAB ಪ್ರದೇಶದ ಕ್ಷೇತ್ರಫಲ =

$$\int_4^{4\sqrt{2}} y\,dx = \int_4^{4\sqrt{2}} \sqrt{32-x^2}\,dx$$

$$= \left[\frac{1}{2}\cdot x\sqrt{32-x^2} + \frac{1}{2}\times 32\times \sin^{-1}\frac{x}{4\sqrt{2}}\right]_4^{4\sqrt{2}}$$

$$= \left(\frac{1}{2}\times 4\sqrt{2}\times 0 + \frac{1}{2}\times 32\times \sin^{-1}1\right) - \left(\frac{4}{2}\sqrt{32-16} + \frac{1}{2}\times 32\times \sin^{-1}\frac{4}{4\sqrt{2}}\right)$$

$$= 16\times\frac{\pi}{2} - 8 - 16\times\frac{\pi}{4} = (4\pi - 8) \quad \text{... (4)}$$

(3) ಮತ್ತು (4) ನ್ನು ಕೂಡಿದಾಗ ಬೇಕಾದ ಕ್ಷೇತ್ರಫಲ $= 4\pi$ ಎಂದಾಗುತ್ತದೆ

38) ಉತ್ಪನ್ನ $y = e^{-3x}$, $\frac{d^2y}{dx^2} + \frac{dy}{dx} - 6y = 0$ ಅವಕಲನ ಸಮೀಕರಣದ ಪರಿಹಾರವೇ ಎಂದು ತಾಳೆ ನೋಡಿ

ಪರಿಹಾರ: ದತ್ತ ಉತ್ಪನ್ನ $y=e^{-3x}$. ಎರಡು ಬದಿಯಲ್ಲಿ x ಗೆ ಅನುಗುಣವಾಗಿ, ಅವಕಲಿಸಿದಾಗ

$$\frac{dy}{dx} = -3e^{-3x} \quad \text{............ (1)}$$

ದೊರೆಯುತ್ತದೆ ಸಮೀಕರಣ (1)ನ್ನು ಮತ್ತೆ ಅವಕಲಿಸಿದಾಗ,

$$\frac{d^2y}{dx^2} = -9e^{-3x}$$

ದೊರೆಯುತ್ತದೆ. $\frac{d^2y}{dx^2}$, $\frac{dy}{dx}$ ಮತ್ತು y ನ ಬೆಲೆಗಳನ್ನು ದತ್ತ ಸಮೀಕರಣದಲ್ಲಿ ಆದೇಶಿಸಿದಾಗ,

ಎಡಬದಿ= $9e^{-3x}+(-3e^{-3x}) - 6.e^{-3x} = 9e^{-3x} - 9e^{-3x} = 0$ = ಬಲಬದಿ ಆಗುವುದು

ಆದುದರಿಂದ, ದತ್ತ ಉತ್ಪನ್ನವು ದತ್ತ ಅವಕಲನ ಸಮೀಕರಣದ ಪರಿಹಾರವೆಂದು ನಿರ್ಧರಿಸಬಹುದು.

39) $A=\begin{bmatrix}1 & -1\\ 2 & -1\end{bmatrix}$, $B=\begin{bmatrix}a & -1\\ b & -1\end{bmatrix}$ ಮತ್ತು $(A+B)^2 = A^2 + B^2$ ಆದರೆ a ಮತ್ತು b ಕಂಡುಹಿಡಿಯಿರಿ

ಪರಿಹಾರ:- ದತ್ತ $(A+B)^2 = A^2+B^2$

$$(A+B)(A+B) = A^2+B^2$$

$$\Rightarrow A(A+B)+B(A+B) = A^2+B^2$$

$$\Rightarrow AA+AB+BA+BB = A^2+B^2$$

$$\Rightarrow A^2+AB+BA+B^2 = A^2+B^2$$

$$\Rightarrow AB+BA = 0$$

$$\Rightarrow \begin{bmatrix}1 & -1\\ 2 & -1\end{bmatrix}\begin{bmatrix}a & -1\\ b & -1\end{bmatrix} + \begin{bmatrix}a & -1\\ b & -1\end{bmatrix}\begin{bmatrix}1 & -1\\ 2 & -1\end{bmatrix} = 0$$

$$\Rightarrow \begin{bmatrix}a-b & -1+1\\ 2a-b & -2+1\end{bmatrix} + \begin{bmatrix}a-2 & -a+1\\ b-2 & -b+1\end{bmatrix} = \begin{bmatrix}0 & 0\\ 0 & 0\end{bmatrix}$$

$$\Rightarrow \begin{bmatrix}a-b+a-2 & 0-a+1\\ 2a-b+b-2 & -1-b+1\end{bmatrix} = \begin{bmatrix}0 & 0\\ 0 & 0\end{bmatrix}$$

$$\Rightarrow \begin{bmatrix}2a-b-2 & -a+1\\ 2a-2 & -b\end{bmatrix} = \begin{bmatrix}0 & 0\\ 0 & 0\end{bmatrix}$$

$$\Rightarrow 2a-b-2 = 0$$
$$-a+1 = 0$$
$$2a-2 = 0$$
$$-b = 0$$

From (2) and (4), we get a =1, b = 0

31.1.23

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಕೃಷಿ ಪಂಡಿತ ಪ್ರಶಸ್ತಿ ಪ್ರದಾನ

ಸಂಚಾರಿ ಕೃಷಿ ಚಿಕಿತ್ಸಾಲಯ ಶುರು

ಪ್ರಜಾವಾಣಿ ವಾರ್ತೆ



ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರೈತರಿಗೆ 'ಕೃಷಿ ಪಂಡಿತ' ಪ್ರಶಸ್ತಿ ಪ್ರದಾನ ಮಾಡಿದರು. ಡಾ. ಅಶೋಕ ದಳವಾಯಿ, ಅರವಿಂದ ಬೆಲ್ಲದ, ಬಿ.ಸಿ.ಪಾಟೀಲ, ಅಮೃತ ದೇಸಾಯಿ, ಗೋವಿಂದರಾಜು, ಸಿದ್ದು ಸವದಿ, ತವನಪ್ಪ ಅಷ್ಟಗಿ, ಡಾ. ಪಿ.ಎಲ್‌ಪಾಟೀಲ ಹಾಗೂ ಇತರರು ಇದ್ದಾರೆ.

ಧಾರವಾಡ: ಕೃಷಿ ಇಲಾಖೆಯಿಂದ ₹11ಕೋಟಿ ವೆಚ್ಚದಲ್ಲಿ ಖರೀದಿಸಿದ 64 ಸಂಚಾರಿ ಕೃಷಿ ಚಿಕಿತ್ಸಾಲಯಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ 2018–19, 2020–21, 2021–22ನೇ ಸಾಲಿನ ಕೃಷಿ ಪಂಡಿತ ಹಾಗೂ ಕೃಷಿ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಮಾತನಾಡಿದ ಅವರು, 'ಇಷ್ಟು ವರ್ಷಗಳ ಕಾಲ ಯಾವುದೇ ಸರ್ಕಾರಗಳು ತಿರುಗಿ ನೋಡದೇ ಉಳಿದಿದ್ದ ರೈತ, ಕೂಲಿ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ ಯೋಜನೆ ವಿಸ್ತರಿಸಲಾಗಿದೆ. ಯಾವುದೇ ಯೋಜನೆಯ ಫಲಾನುಭವಿಗಳಾಗಿದ್ದರೂ ಅವರಿಗೆ ವಿದ್ಯಾನಿಧಿ ಸಿಗಲಿದೆ. ಹೀಗಾಗಿ 47 ಸಾವಿರ ರೈತ ಕೂಲಿಕಾರ್ಮಿಕರ ಮಕ್ಕಳಿಗೆ ಅನುಕೂಲ ಮಾಡಿಕೊಡಲಾಗಿದೆ. ಇದು ನನಗೆ ಹಂಡೆ ಹಾಲು ಕುಡಿದಷ್ಟು ಸಂತೋಷವನ್ನುಂಟು ಮಾಡಿದೆ' ಎಂದರು.

'ನಾನು ಮುಖ್ಯಮಂತ್ರಿ ಮಂತ್ರಿ ಸ್ಥಾನದಲ್ಲಿ ಇರುವವರೆಗೂ ರೈತರ ಪರವಾಗಿ ಕೆಲಸ ಮಾಡುತ್ತೇನೆ. ರೈತರ ಮಕ್ಕಳು ವಿದ್ಯಾಭ್ಯಾಸ ಮಾಡಲೆಂದೇ ರೈತ ವಿದ್ಯಾನಿಧಿ ಯೋಜನೆ ಜಾರಿಗೆ ತರಲಾಗಿದೆ. ಈ ಬಾರಿ ಬಜೆಟ್‌ನಲ್ಲೂ ಹಲವು ಕಾರ್ಯಕ್ರಮಗಳು ಸೇರಿಸುವ ಮೂಲಕ ರೈತ ಪರ ಬಜೆಟ್ ಮಂಡಿಸಲಾಗುವುದು' ಎಂದರು.

> **ಕೃಷಿ ಪಂಡಿತ ಹಾಗೂ ಕೃಷಿ ಪ್ರಶಸ್ತಿ ಪಡೆದ ಶ್ರೇಷ್ಠ ಕೃಷಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಅಗತ್ಯ ಆರ್ಥಿಕ ನೆರವನ್ನು ಸರ್ಕಾರವೇ ಭರಿಸಲಿದೆ.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಸಾಲಮನ್ನಾ ಕೂಗು: ಕೃಷಿ ಸಚಿವ ಬಿ.ಸಿ.ಪಾಟೀಲ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾತಿನ ನಡುವೆ 'ಸಾಲಮನ್ನಾ' ಹಾಗೂ 'ಬೆಳೆ ವಿಮೆ' ಮತ್ತು ಕೃಷಿ ಸಮ್ಮಾನದ ರಾಜ್ಯ ಸರ್ಕಾರದ ಭಾಗ ಬಾರದ ಕುರಿತು ರೈತರು ಆಕ್ರೋಶ ವ್ಯಕ್ತಪಡಿಸಿ ಘೋಷಣೆ ಕೂಗಿದರು.

ಕಾರ್ಯಕ್ರಮದ ನಂತರ ರೈತರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಬೊಮ್ಮಾಯಿ ಅವರು ರೈತರ ಸಮಸ್ಯೆ ಆಲಿಸಿ ಪರಿಹರಿಸುವ ಭರವಸೆ ನೀಡಿದರು.

ಫೆ. 28ಕ್ಕೆ ಪ್ರಾಂಶುಪಾಲರ ಹುದ್ದೆಗಳಿಗೆ ಪರೀಕ್ಷೆ

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ಫೆ. 28ರಂದು ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಣೆ ಹೊರಡಿಸಿದೆ. ಅಂದು ಮಧ್ಯಾಹ್ನ 3ರಿಂದ 5ರವರೆಗೆ ಪರೀಕ್ಷೆ ನಡೆಸಲು ಯೋಚಿಸಲಾಗಿದೆ. ಶೀಘ್ರ ಅಂತಿಮ ವೇಳಾಪಟ್ಟಿ ನೀಡಲಾಗುವುದು ಎಂದು ಕೆಇಎ ಹೇಳಿದೆ. ಖಾಲಿ ಇರುವ 310 ಪ್ರಾಂಶುಪಾಲರ ಹುದ್ದೆಗಳಿಗೆ ಅರ್ಜಿ ಸಲ್ಲಿಕೆಯ ಅವಧಿಯನ್ನು ಫೆ. 6ರವರೆಗೂ ವಿಸ್ತರಿಸಲಾಗಿದೆ. ಅರ್ಜಿ ಶುಲ್ಕ ಪಾವತಿಸಲು ಫೆ. 8 ಕಡೇ ದಿನಾಂಕ.

ಶಿವಮೂರ್ತಿ ಶರಣರ ಜಾಮೀನು ಅರ್ಜಿ ತಿರಸ್ಕೃತ

ಚಿತ್ರದುರ್ಗ: ಲೈಂಗಿಕ ಅಪರಾಧ ಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಹಾಗೂ ಎಸ್‌ಸಿ,ಎಸ್‌ಟಿ ಮೇಲಿನ ದೌರ್ಜನ್ಯತಡೆ ಕಾಯ್ದೆಯಡಿ ಬಂಧಿತರಾಗಿರುವ ಮುರುಘಾಮಠದ ಶಿವಮೂರ್ತಿ ಶರಣರು ಜಾಮೀನು ಕೋರಿ ಸಲ್ಲಿಸಿದ್ದ ಎರಡು ಪ್ರತ್ಯೇಕ ಅರ್ಜಿಗಳಲ್ಲಿ ಒಂದನ್ನು ಜಿಲ್ಲಾ ನ್ಯಾಯಾಲಯ ಮಂಗಳವಾರ ತಿರಸ್ಕರಿಸಿದೆ.

ಸಂತ್ರಸ್ತ ಇಬ್ಬರು ಪ್ರೌಢಶಾಲಾ ವಿದ್ಯಾರ್ಥಿನಿಯರ ಪೈಕಿ ಒಬ್ಬರು ಎಸ್‌ಸಿ, ಎಸ್‌ಟಿ ಮೇಲಿನ ದೌರ್ಜನ್ಯತಡೆ ಕಾಯ್ದೆ ವ್ಯಾಪ್ತಿಯಲ್ಲಿದ್ದು, ಈ ದೋಷಾರೋಪ ಪಟ್ಟಿಯ ಮೇಲಿನ ಜಾಮೀನು ಅರ್ಜಿಯನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿದೆ.

ಮತ್ತೊಂದು ದೋಷಾರೋಪ ಪಟ್ಟಿಯ ಮೇಲಿನ ಅರ್ಜಿಯ ಆದೇಶವನ್ನು ನ್ಯಾಯಾಧೀಶೆ ಬಿ.ಕೆ.ಕೋಮಲಾ ಅವರು ಫೆ. 6ಕ್ಕೆ ಕಾಯ್ದಿರಿಸಿದ್ದಾರೆ. ದೋಷಾರೋಪ ಪಟ್ಟಿ ಸಲ್ಲಿಕೆಗೂ ಮುನ್ನ ಜಾಮೀನು ಅರ್ಜಿಯನ್ನು ಇದೇ ನ್ಯಾಯಾಲಯ ತಿರಸ್ಕರಿಸಿತ್ತು.

ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿರುವಾಗಲೇ ದೋಷಾರೋಪಪಟ್ಟಿ ಸಲ್ಲಿಕೆಯಾಗಿತ್ತು. ಹೈಕೋರ್ಟ್‌ನಲ್ಲಿದ್ದ ಅರ್ಜಿಯನ್ನು ಹಿಂಪಡೆದ ಶರಣರ ಪರ ವಕೀಲರು, ಮತ್ತೆ ಜಿಲ್ಲಾ ನ್ಯಾಯಾಲಯದ ಮೊರೆ ಹೋಗಿದ್ದರು.

ದೋಷಾರೋಪ ಪಟ್ಟಿಯಿಂದ ತಮ್ಮನ್ನು ಕೈಬಿಡುವಂತೆ ಹಾಸ್ಟೆಲ್ ವಾರ್ಡನ್ ಹಾಗೂ ಮಠದ ಮಾಜಿ ವ್ಯವಸ್ಥಾಪಕ ಪರಮಶಿವಯ್ಯ ಸಲ್ಲಿಸಿದ್ದ ಅರ್ಜಿಯ ಆದೇಶವನ್ನು ಕೋರ್ಟ್ ಫೆ. 8ಕ್ಕೆ ಕಾಯ್ದಿರಿಸಿತು.

ಪುಸ್ತಕ ನೀತಿ ಪುನರ್‌ರಚನೆ: ಅಭಿಪ್ರಾಯ ಆಹ್ವಾನ

ಬೆಂಗಳೂರು: ಕನ್ನಡ ಪುಸ್ತಕ ನೀತಿ ಪುನರ್‌ರಚನೆಗೆ ಕನ್ನಡ ಪುಸ್ತಕ ಪ್ರಾಧಿಕಾರವು ಸಾರ್ವಜನಿಕರಿಂದ ಸಲಹೆ, ಅಭಿಪ್ರಾಯಗಳನ್ನು ಆಹ್ವಾನಿಸಿದೆ.


'ಕನ್ನಡ ಪುಸ್ತಕ ಲೋಕವು ಆಧುನಿಕ ಮಾಧ್ಯಮಗಳ ನೂತನ ಆವಿಷ್ಕಾರಗಳ ಫಲವಾಗಿ ವಿಸ್ತಾರಗೊಳ್ಳುತ್ತಿದೆ. ಇ-ಪುಸ್ತಕ, ಆಡಿಯೋ ಪುಸ್ತಕ ಒಳಗೊಂಡಂತೆ ಆಧುನಿಕ ಪುಸ್ತಕೋದ್ಯಮದ ಸಾಧಕ- ಬಾಧಕಗಳು ಹಾಗೂ ಕನ್ನಡ ಪುಸ್ತಕ ಲೋಕದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಈ ಪುಸ್ತಕ ನೀತಿ ರಚನೆ ಆಗಬೇಕಿದೆ' ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

'ಪ್ರಾಧಿಕಾರವು ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಅಧ್ಯಕ್ಷತೆಯಲ್ಲಿ ಉಪ ಸಮಿತಿ ರಚಿಸಿದ್ದು, ಸಮಿತಿಯು ಅಂತಿಮ ಹಂತದ ಕರಡು ಸಿದ್ಧಪಡಿಸುತ್ತಿದೆ. ನಾಡಿನ ಲೇಖಕರು, ಓದುಗರು, ಹಾಗೂ ಆಸಕ್ತ ಸಾರ್ವಜನಿಕರಿಂದ ಸಲಹೆ, ಅಭಿಪ್ರಾಯಗಳನ್ನು ಪಡೆಯಲು ಸಮಿತಿಯು ನಿರ್ಧರಿಸಿದೆ' ಎಂದು ತಿಳಿಸಿದ್ದಾರೆ.

ಸಲಹೆ, ಸೂಚನೆ , ಅಭಿಪ್ರಾಯಗಳನ್ನು ಫೆ.10ರೊಳಗೆ ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, 1ನೇ ಮಹಡಿ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು-560002 ಈ ವಿಳಾಸಕ್ಕೆ ಕಳುಹಿಸಬಹುದು. ಇ-ಮೇಲ್ ವಿಳಾಸ kannadappradhikara@gmail.com ಮೂಲಕವೂ ಕಳುಹಿಸಬಹುದು.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು


ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಹೌದು 68%
ಅಲ್ಲ 32%

ರಾಹುಲ್‌ಗಾಂಧಿ ನೇತೃತ್ವದಲ್ಲಿ ನಡೆದ ಭಾರತ್ ಜೋಡೊ ಯಾತ್ರೆ ಕಾಂಗ್ರೆಸ್ ಪಕ್ಷದ ಪುನಶ್ಚೇತನಕ್ಕೆ ಸಹಾಯಕವಾಗುವುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ಸುಭಾಷಿತ

ಒಳ್ಳೆಯ ಮನಸ್ಸಿನಿಂದ ಹೊಂದಿಕೊಂಡಿರುವುದೇ ಧರ್ಮ.
ವೈಮನಸ್ಸಿನಿಂದ ಬೇರೆಯಾಗುವುದೇ ಅಧರ್ಮ.
-ದ.ರಾ. ಬೇಂದ್ರೆ

ಯಾತ್ರೆಯ ಸ್ಫೂರ್ತಿಯ ಆಧಾರದಲ್ಲಿ ಹೊಸ ಸಂಕಥನ ಇಂದಿನ ಅಗತ್ಯ

ಒಂದಕ್ಕೊಂದು ಹೋಲಿಕೆಯೇ ಸಾಧ್ಯವಿಲ್ಲದ ರೀತಿಯ ಹವಾಮಾನವನ್ನು ಹೊಂದಿರುವ ವಿವಿಧ ಪ್ರದೇಶಗಳನ್ನು ಹಾದು, ವಿಸ್ತೃತ ಜನಸಮುದಾಯಗಳ ಜೊತೆಗೆ ಸಂವಾದ ನಡೆಸುತ್ತಾ 145 ದಿನಗಳ ಕಾಲ 4,000 ಕಿಲೊಮೀಟರ್‌ಗೂ ಹೆಚ್ಚು ದೂರವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಡಿಗೆಯಲ್ಲಿ ಕ್ರಮಿಸಿದ್ದಾರೆ. ಈ ಯಾತ್ರೆಯ ಮೂಲಕ ಅವರೊಬ್ಬ ಪ್ರಬುದ್ಧ ರಾಜಕಾರಣಿಯಾಗಿ ಹೊರಹೊಮ್ಮಿದ್ದಾರೆ ಎಂಬುದು ಒಪ್ಪಿಕೊಳ್ಳಬಹುದಾದ ವಿಚಾರ. ತಮ್ಮ ಮನದಲ್ಲೇನಿದೆ ಎಂಬುದನ್ನು ಅವರು ಯಾತ್ರೆಯ ಉದ್ದಕ್ಕೂ ಹೇಳಿದ್ದಾರೆ ಮತ್ತು ಭಿನ್ನವಾಗಿ ಇರುವ ಭರವಸೆಯನ್ನೂ ಕೊಟ್ಟಿದ್ದಾರೆ. ಈ ವಿಚಾರಗಳೇ ಈ ಕಾಲದ ರಾಜಕಾರಣಿಗಳಲ್ಲಿ ರಾಹುಲ್ ಅವರನ್ನು ಭಿನ್ನವಾಗಿ ನಿಲ್ಲಿಸಿವೆ. ಅತ್ಯಂತ ಕೆಟ್ಟ ಜನರ ಕೊನೆಯ ಆಶ್ರಯತಾಣವೇ ರಾಜಕಾರಣ ಎಂಬ ಸಿನಿಕ ಭಾವನೆ ಹೊಂದಿರುವ ಜನರಿಗೆ ಇದೊಂದು ಹೊಸ ಆಶಾಭಾವವನ್ನು ನೀಡಬೇಕು. ರಾಹುಲ್ ಅವರು ಜ್ಞಾನೋದಯಗೊಂಡ ವ್ಯಕ್ತಿಯಾಗಿ ಯಾತ್ರೆಯ ಕೊನೆಯಲ್ಲಿ ಮೂಡಿಬಂದಿರಬಹುದು. ಆದರೆ, ಅವರಲ್ಲಿ ಉಂಟಾಗಿರುವ ಹೊಸ ಜಾಗೃತಿ ಮತ್ತು ವಿವೇಕವು ಕಾಂಗ್ರೆಸ್ ಪಕ್ಷ ಮತ್ತು ಅದರ ಭವಿಷ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದನ್ನು ಹೇಳುವುದು ಕಷ್ಟ. ರಾಜಕಾರಣದ ಅಥವಾ ಪಕ್ಷದ ಚುನಾವಣಾ ಗೆಲುವಿನ ತಮ್ಮ 'ಭಾರತ್ ಜೋಡೊ ಯಾತ್ರೆ'ಗೂ ಯಾವ ಸಂಬಂಧವೂ ಇಲ್ಲ ಎಂದು ರಾಹುಲ್ ಅವರು ಪದೇ ಪದೇ ಹೇಳಿದ್ದಾರೆ. ಯಾತ್ರೆ ಎಂಬುದು ಎಲ್ಲರನ್ನೂ ಒಗ್ಗೂಡಿಸುತ್ತದೆ ಎಂಬ ಸಿದ್ಧಾಂತವನ್ನು ಅವರು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. ದ್ವೇಷ ಮತ್ತು ವಿಭಜನೆಯೇ ಮೇಲುಗೈ ಸಾಧಿಸಿರುವ ಈ ಹೊತ್ತಿನಲ್ಲಿ ಪ್ರೀತಿ ಮತ್ತು ಒಗ್ಗಟ್ಟಿನ ಮಹತ್ವವನ್ನು ಸಾರುವುದಷ್ಟೇ ತಮ್ಮ ಉದ್ದೇಶ ಎಂದು ಅವರು ಹೇಳಿದ್ದಾರೆ. ಅವರು ಮೀಟಿದ ತಂತಿಯು ಜನರ ಮನಮುಟ್ಟಿದೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಆದರೆ, ಮುಂದಿನ ಹಂತದ ಯಾತ್ರೆಯು ಇನ್ನಷ್ಟು ಕ್ಲಿಷ್ಟವಾಗಿ ಇರುತ್ತದೆ.



ರಾಹುಲ್ ಗಾಂಧಿ ಅವರು ಯಾತ್ರೆಯಿಂದ ಪಡೆದುಕೊಂಡಿರುವ ಹೊಸ ವರ್ಚಸ್ಸನ್ನು ಬಳಸಿಕೊಂಡು ಪ್ರಯೋಜನ ಪಡೆಯಲು ಕಾಂಗ್ರೆಸ್ ಕಠಿಣ ಶ್ರಮ ವಹಿಸಬೇಕಾದ ಅಗತ್ಯ ಇದೆ

ಕೇಂದ್ರ ಮತ್ತು ರಾಜ್ಯಗಳ ಚುನಾವಣೆಗಳಲ್ಲಿ ಸತತ ಸೋಲು, ಪಕ್ಷಾಂತರ, ಒಳಜಗಳ, ಗುಂಪುಗಾರಿಕೆಯಿಂದಾಗಿ ತತ್ತರಿಸಿರುವ ಕಾಂಗ್ರೆಸ್ ಪಕ್ಷವು ಪುನಶ್ಚೇತನಗೊಂಡು ಹೊಸ ಚೈತನ್ಯ ಪಡೆದುಕೊಳ್ಳಬೇಕಾದ ಅಗತ್ಯ ಇದೆ. ಪಕ್ಷವು ಅಧಿಕಾರ ಮತ್ತು ಬಲವನ್ನು ಕಳೆದುಕೊಂಡಿದೆ. ಕಾಂಗ್ರೆಸ್ ಪಕ್ಷದ ಅತ್ಯುನ್ನತ ನಾಯಕ ಎಂದೇ ಬಿಂಬಿತರಾಗಿರುವ ರಾಹುಲ್ ಗಾಂಧಿ ಅವರಿಗೆ ಒಳಿತಾದರೆ, ಅದರಿಂದ ಪಕ್ಷಕ್ಕೂ ಒಳ್ಳೆಯದಾಗಬೇಕು. ಆದರೆ, ರಾಹುಲ್ ಅವರು ಪಡೆದುಕೊಂಡಿರುವ ಹೊಸ ವರ್ಚಸ್ಸನ್ನು ಬಳಸಿಕೊಂಡು ಪ್ರಯೋಜನ ಪಡೆಯಲು ಕಠಿಣ ಶ್ರಮದ ಅಗತ್ಯ ಇದೆ. [illegible]

ಲೋಕಸಭೆಗೆ 2024ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗೂ ಮುನ್ನ, ಮುಂದಿನ ಕೆಲವು ತಿಂಗಳುಗಳಲ್ಲಿ ಕೆಲವು ರಾಜ್ಯಗಳ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗಳು ಪಕ್ಷಕ್ಕೆ ನಿರ್ಣಾಯಕವಾಗಿವೆ. ಯಾತ್ರೆಯ ಆಶಯವನ್ನು ಪಕ್ಷವು ತನ್ನದಾಗಿಸಿಕೊಂಡು, ಅದರ ಆಧಾರದಲ್ಲಿ ಪರ್ಯಾಯ ರಾಜಕಾರಣದ ಸಂಕಥನ ರೂಪಿಸಿ, ಬಿಜೆಪಿಗೆ ಸವಾಲಾಗುವ ಸಿದ್ಧಾಂತವನ್ನು ಜನರ ಮುಂದೆ ಇರಿಸಿದರೆ, ರಾಹುಲ್ ಅವರ ಯಾತ್ರೆಯು ವ್ಯಕ್ತಿಯನ್ನು ಮೀರಿ ನಿಂತಂತೆ ಆಗುತ್ತದೆ.

ದಿನದ ಟ್ವೀಟ್

ಶುಲ್ಕ ಕೊಟ್ಟರೂ ಸಿಗುವುದಿಲ್ಲ



ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿ, ಸರ್ಕಾರಿ ಅಧಿಕಾರಿ ಮತ್ತು ಸ್ವಯಂ ಘೋಷಿತ ಅತಿಗಣ್ಯ ವ್ಯಕ್ತಿ ವಿಶೇಷ ಸೌಲಭ್ಯ ಪಡೆದುಕೊಳ್ಳು-ತ್ತಿರುವವರೆಗೆ, ಎಲ್ಲ ಸರದಿ ಸಾಲುಗಳನ್ನು ಹಾಗೂ ವ್ಯವಸ್ಥೆಗಳನ್ನು ಅವರು ದಾಟಿ ನಡೆಯುತ್ತಿರುವಷ್ಟು ಕಾಲ, ಭಾರತೀಯರಾದ ನಮಗೆ ಅತ್ಯುತ್ತಮ ಮೂಲಸೌಕರ್ಯ ಅಥವಾ ಅಡೆತಡೆ ಇಲ್ಲದ ಸಾರ್ವಜನಿಕ ಸೇವೆಗಳು ಸಿಗುವುದಿಲ್ಲ. ಅವುಗಳಿಗೆ ಭಾರಿ ಶುಲ್ಕ ಕೊಟ್ಟರೂ ಸಿಗುವುದಿಲ್ಲ.

ಸುಚೇತಾ ದಲಾಲ್, ಪತ್ರಕರ್ತೆ, ಲೇಖಕಿ

ಕಿಡಿನುಡಿ



ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 2021ರಲ್ಲಿ 191 ದೇಶಗಳ ಪೈಕಿ ನಾವು 132ನೇ ಸ್ಥಾನದಲ್ಲಿದ್ದೆವು. ನಮ್ಮ ಅಂಕವು ಜಾಗತಿಕ ಸರಾಸರಿಗಿಂತ ಶೇ 14ರಷ್ಟು ಕೆಳಗಿತ್ತು. 2020ರಲ್ಲಿ ನಮ್ಮ ಸ್ಥಾನವು 130ನೆಯದಾಗಿತ್ತು. ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮವು (ಯುಎನ್‌ಡಿಪಿ) ಈ ಸೂಚ್ಯಂಕವನ್ನು ಮೂರು ಮಾನದಂಡಗಳ ಆಧಾರದ ಮೇಲೆ ನಿಗದಿಪಡಿಸುತ್ತದೆ. ಅವೆಂದರೆ: ಸುದೀರ್ಘ ಮತ್ತು ಆರೋಗ್ಯಕರ ಜೀವನ, ಸುಶಿಕ್ಷಿತರಾಗಿ ಇರುವುದು, ಹಿತಕರವಾದ ಜೀವನಮಟ್ಟವನ್ನು ಹೊಂದುವುದು. ಎಲ್ಲಿದೆ ಅಚ್ಛೇ ದಿನ್?

ಪ್ರೊ. ಗೌರವ್ ವಲ್ಲಭ್, ಪ್ರಾಧ್ಯಾಪಕ

25 ವರ್ಷಗಳ ಹಿಂದೆ

ಭಾನುವಾರ, 1-2-1998

● ರಾಜ್ಯದ ಚುನಾವಣಾ ಕಣದಲ್ಲಿ ಬಹುತೇಕ ಬಹುಮುಖಿ ಸ್ಪರ್ಧೆ

ಬೆಂಗಳೂರು, ಜ. 31– ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಮುಖ್ಯ ಮಂತ್ರಿಗಳಾದ ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ, ಸಚಿವರಾದ ಸಿ. ಬೈರೇಗೌಡ, ತಿಪ್ಪೇಸ್ವಾಮಿ, ವಿ. ಸೋಮಣ್ಣ, ಬಸವರಾಜ್ ಶಿವಣ್ಣನವರ್ ಸೇರಿದಂತೆ ಒಟ್ಟು 200 ಮಂದಿ ಅಭ್ಯರ್ಥಿಗಳು ಅಂತಿಮವಾಗಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಕಣದಲ್ಲಿ ಉಳಿದಿದ್ದಾರೆ.

ಲೋಕಸಭಾ ಚುನಾವಣೆಗೆ ರಾಜ್ಯದ ವಿವಿಧ ಕ್ಷೇತ್ರಗಳಿಂದ ಒಟ್ಟು 317 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಅದರಲ್ಲಿ 35 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತ-ವಾಗಿದ್ದವು. ಉಳಿದ 282 ಅಭ್ಯರ್ಥಿಗಳ ಪೈಕಿ ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾದ ಇಂದು ಕೇಂದ್ರದ ಮಾಜಿ ಸಚಿವೆ ಡಿ.ಕೆ. ತಾರಾದೇವಿ (ಚಿಕ್ಕಮಗಳೂರು) ಮತ್ತು ರಾಜ್ಯದ ಮಾಜಿ ಸಚಿವರಾದ ವೈ.ಕೆ. ರಾಮಯ್ಯ (ತುಮಕೂರು), ವಿಶ್ವನಾಥ ರೆಡ್ಡಿ ಮುದ್ನಾಳ್ (ರಾಯಚೂರು) ಸೇರಿದಂತೆ 82 ಮಂದಿ ಅಭ್ಯರ್ಥಿಗಳು ತಮ್ಮ ನಾಮಪತ್ರವನ್ನು ಹಿಂತೆಗೆದುಕೊಂಡಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 1-2-1973

● 'ಶಿಮ್ಲಾ ಒಪ್ಪಂದದ ಮುಂದಿನ ಕ್ರಮಕ್ಕೆ ಭಾರತ ಸಿದ್ಧ'

ನವದೆಹಲಿ, ಜ. 31– ಶಿಮ್ಲಾ ಒಪ್ಪಂದದ ಮುಂದಿನ ಹಂತದ ಕ್ರಮ ಕೈಗೊಳ್ಳಲು ಭಾರತ ಆಸಕ್ತಿ ಹೊಂದಿದೆಯೆಂದೂ ಶಿಮ್ಲಾ ಒಪ್ಪಂದಕ್ಕೆ ಸಂಬಂಧಿಸಿದಂತೆ ಯಾವುದೇ ಬಿಕ್ಕಟ್ಟಿಗೂ ಅದು ಹೊಣೆ ಅಲ್ಲವೆಂದೂ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ತಿಳಿಸಿದ್ದಾರೆ.

'ಈ ಬಗ್ಗೆ ವಿದೇಶಾಂಗ ಸಚಿವರೂ ಪದೇ ಪದೇ ಹೇಳಿದ್ದಾರೆ. ನಾನು ಹೇಳಲಿರುವುದೂ ಅಷ್ಟೇ. ಶಿಮ್ಲಾ ಒಪ್ಪಂದದಂತೆ ಮುಂದಿನ ಕ್ರಮಕ್ಕೆ ನಾವು ಆಸಕ್ತರಾಗಿದ್ದೇವೆ' ಎಂದು ಇಂದಿರಾ ಗಾಂಧಿ ಅವರು ಈಗ ಭಾರತದಲ್ಲಿ ಪ್ರವಾಸ ಕೈಗೊಂಡಿರುವ ಕರಾಚಿಯ 'ಮಾರ್ನಿಂಗ್ ಸ್ಟಾರ್' ದಿನಪತ್ರಿಕೆ ಸಂಪಾದಕ ಸುಲ್ತಾನ್ ಅಹ್ಮದ್ ಅವರಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

● ಕಾಳಿ ನದಿ ಪ್ರದೇಶಕ್ಕೆ ಅಭಾವ ಜಿಲ್ಲೆಗಳಿಂದ 10,000 ಜನರ ರವಾನೆ

ಬೆಂಗಳೂರು, ಜ. 31– ನಿರ್ಮಾಣ ಕಾರ್ಯ ಮುಂದುವರಿಯುತ್ತಿರುವ ಕಾಳಿ ನದಿ ಯೋಜನಾ ಪ್ರದೇಶಕ್ಕೆ ಅಭಾವಪೀಡಿತ ಜಿಲ್ಲೆಗಳ ಸುಮಾರು 10,000 ಜನರನ್ನು ವರ್ಗಾಯಿಸಲು ಸರ್ಕಾರ ಉದ್ದೇಶಿಸಿದೆ.

ಅಲ್ಪಕಾಲದಲ್ಲಿಯೇ ಇಷ್ಟೊಂದು ಮಂದಿಗೆ ವ್ಯವಸ್ಥೆ ಮಾಡಲು ಸಿದ್ಧತೆಯಿಂದಿ-ರಬೇಕು ಎಂದು ಬೆಳಗಾವಿ ವಿಭಾಗಾಧಿಕಾರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿ-ಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಎಚ್.ಎಂ. ಚನ್ನಬಸಪ್ಪ ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

ಈ ಭಾಗದಲ್ಲಿ ಭೂಮಿಯನ್ನಳೆಯುವ ಅಳತೆಗೋಲೇ ಮುರಿದುಹೋಗಿದೆ!

ಜೋಶಿಮಠ ಕುಸಿತ: ಎಚ್ಚರಿಕೆಯ ನಿರ್ಲಕ್ಷ್ಯ



ವಿಶ್ಲೇಷಣೆ

ಟಿ.ಆರ್. ಅನಂತರಾಮು

ಉತ್ತರಪ್ರದೇಶದಿಂದ 2000ದಲ್ಲಿ ಉತ್ತರಾಖಂಡವನ್ನು ಪ್ರತ್ಯೇಕಗೊಳಿಸಿ ಹೊಸ ರಾಜ್ಯ ಸೃಷ್ಟಿಸುವಾಗ, ಈ ರಾಜ್ಯಕ್ಕೆ ಭೂಕುಸಿತ, ಭೂಕಂಪನ, ಮೇಘಸ್ಫೋಟ, ಪ್ರವಾಹಭೀತಿ ಒಡ್ಡುತ್ತಿದ್ದ ಭಾಗಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡದ್ದು ಅರಿವೇ ಆಗಲಿಲ್ಲ. ಬ್ರಹ್ಮಪುತ್ರ ನದಿಯಿಂದ ಪ್ರವಾಹ ಭೀತಿ ಎದುರಿಸುತ್ತಿರುವ ಅಸ್ಸಾಂ ಮೇಲುಭಾಗದಲ್ಲಿ ಟೀ ತೋಟ, ಜನವಸತಿಯನ್ನು ಖಾಲಿ ಮಾಡಲು ಹೇಗೆ ಸಾಧ್ಯವಿಲ್ಲವೋ, ಅದೇ ಸ್ಥಿತಿ ಹೆಚ್ಚು ಕಡಿಮೆ ಉತ್ತರಾಖಂಡದಲ್ಲೂ ಇದೆ. ಜೋಶಿಮಠದ ಪರಿಸ್ಥಿತಿಯೂ ಅದೇ. ಯಾವುದೋ ಕಾಲದಲ್ಲಿ ಭೂಕಂಪನಕ್ಕೆ ತುತ್ತಾಗಿ ಭಾರಿ ಭೂಕುಸಿತವಾಗಿ, ಅದರ ಅವಶೇಷಗಳ ಮೇಲೆ ಈ ಯಾತ್ರಾಸ್ಥಳ ತಲೆ ಎತ್ತಿತು. ಅದು ಬಲು ಇಕ್ಕಟ್ಟಾದ ಜಾಗ. ಎರಡೂವರೆ ಚದರ ಕಿಲೊಮೀಟರ್ ವಿಸ್ತೀರ್ಣ. ಕಟ್ಟಿರುವುದು 4,500 ವಸತಿಗಳನ್ನು, ವಾಸಿಸುತ್ತಿರುವವರು ಬರೀ 25,000 ಮಂದಿ. ಆಗಾಗ ಭೂಮಿ ಇಲ್ಲಿ ಮೈಕೊಡವಿಕೊಳ್ಳುತ್ತದೆ.

ಎಂದಿನಂತೆ ಈ ನೆಲ ಈಗಲೂ ಅಸ್ಥಿರತೆ ತೋರಿದೆ. ಇಲ್ಲಿನ ಮಿಲಿಟರಿ ನೆಲೆ ಸೇರಿದಂತೆ 800 ಕಟ್ಟಡಗಳಲ್ಲಿ ಬಿರುಕು ಕಾಣಿಸಿದೆ. ಹಾಗೆಯೇ ಇಡೀ ನಗರ ಮೆಲ್ಲನೆ ಕೆಳಕ್ಕೆ ಇಳಿಯುತ್ತಿದೆ. ಈ ಪಟ್ಟಣವಾಸಿಗಳನ್ನು ಕನಿಷ್ಠ 10 ಕಿ.ಮೀ. ದೂರವಿರುವ ನಾಲ್ಕು ಕ್ಯಾಂಪುಗಳಿಗೆ ಸ್ಥಳಾಂತರಿಸುವ ಪ್ರಕ್ರಿಯೆ ಮುಂದುವರಿದಿದೆ. ವಿಷಾದವೆಂದರೆ, ರಾತ್ರಿ ಮಲಗುವುದನ್ನು ಬಿಟ್ಟರೆ ಉಳಿದಂತೆ ಬಿರುಕುಬಿಟ್ಟ ಮನೆಗಳಿಗೇ ಹಿಂತಿರುಗುತ್ತಿದ್ದಾರೆ; ಬೆಳಗಿನ ಹೊತ್ತು ಈಗಲೂ ಊಟ, ವಸತಿ, ಶೌಚಕ್ಕೆ ಅದೇ ಗತಿ. ಕಳೆದ ಜನವರಿ 12ರಂದು ಇಸ್ರೊ ಸಂಸ್ಥೆ ಅತ್ಯಂತ ಸೂಕ್ಷ್ಮವಾಗಿ ಉಪಗ್ರಹಗಳ ಛಾಯಾಚಿತ್ರಗಳನ್ನು ಅಧ್ಯಯನ ಮಾಡಿ, ಈವರೆಗೆ ಎಂಟು ಸೆಂ.ಮೀ. ಕುಸಿದಿದೆ ಎಂದು ವರದಿ ನೀಡಿದಾಗ ರಾಜ್ಯದ ಆಡಳಿತವೇ ನಡುಗಿಹೋಗಿತ್ತು. ಮರುದಿನವೇ ಕೇಂದ್ರ ಸರ್ಕಾರದ ವಿಕೋಪ ನಿರ್ವಹಣಾ ವಿಭಾಗ ಸುತ್ತೋಲೆಯನ್ನು ಹೊರಡಿಸಿ, ಸರ್ಕಾರಿ ಸಂಸ್ಥೆಗಳು ಮಾಧ್ಯಮಗಳೊಂದಿಗೆ ಇದನ್ನು ಚರ್ಚಿಸಬಾರದೆಂದು ಎಚ್ಚರಿಕೆ ಕೊಟ್ಟಿತ್ತು. ಜನ ಭಯಭೀತರಾಗುತ್ತಾರೆ ಎಂಬುದು ಇದರ ಹಿಂದಿರುವ ತರ್ಕ.

ಇಡೀ ಉತ್ತರಾಖಂಡವೇ ಹಿಮಾಲಯದ ಅಸ್ಥಿರ ಭಾಗದ ಮೇಲೆ ನಿಂತಿದೆ ಎಂಬ ಸಂಗತಿ ಹೊಸತಾಗಿ ಬೆಳಕಿಗೆ ಬಂದದ್ದಲ್ಲ. ಭಾರತೀಯ ಭೂವೈಜ್ಞಾನಿಕ ಸರ್ವೆ ಸಂಸ್ಥೆ 1935ರಲ್ಲೇ ದೇಶದ ಭೂಕಂಪನ ನಕ್ಷೆ ತಯಾರಿಸಿದಾಗ, ಹಿಮಾಲಯದ ಈ ಭಾಗ ಅತಿ ಅಪಾಯಕಾರಿ ವಲಯ- 5ಕ್ಕೆ ಬರುತ್ತದೆ ಎಂದು ಸೂಚಿಸಿತ್ತು. ಮುಂದೆ ರಾಜ್ಯದ ಜನತೆ ಇದನ್ನು ಕಣ್ಣಾರೆ ಕಾಣಬೇಕಾಯಿತು. ಉತ್ತರಕಾಶಿ ಭೂಕಂಪನ (1991, 2022), ಚಮೋಲಿ ಭೂಕಂಪನ (1999), ಗಢವಾಲ್ ಭೂಕಂಪನ (1991), ರುದ್ರಪ್ರಯಾಗ ಭೂಕಂಪನ (2017), ಸಾಲದೆಂಬಂತೆ ನಂದಾದೇವಿಯಿಂದ ಹಿಮನದಿ ಕರಗಿ ನದಿಗಳನ್ನು ಉಕ್ಕುವಂತೆ ಮಾಡಿದ್ದು (2021), ಈ ಒಂದೊಂದೂ ಆರ್ಥಿಕವಾಗಿಯೂ ಉತ್ತರಾಖಂಡವನ್ನು ಅಲುಗಾಡಿಸಿದವು. ಇದಕ್ಕೆ ಯಾರನ್ನು ದೂಷಿಸಬೇಕು?

ಮಹಾಕವಿ ಕಾಳಿದಾಸ ಇಡೀ ಹಿಮಾಲಯವನ್ನು 'ಭೂಮಿಯನ್ನಳೆಯುವ ಅಳತೆಗೋಲು' ಎಂದು 'ಕುಮಾರಸಂಭವ' ಕಾವ್ಯದಲ್ಲಿ ವರ್ಣಿಸಿದ. ಆದರೆ ಜೋಶಿಮಠದ ಈ ಭಾಗದಲ್ಲಿ ಈ ಅಳತೆಗೋಲೇ ಮುರಿದುಹೋಗಿರುವುದು ಈಗ ಸ್ಪಷ್ಟ. ಸರ್ಕಾರ ಈ ಅವಘಡವನ್ನು ಗಂಭೀರವಾಗಿ ತೆಗೆದುಕೊಂಡು ಈ ಜನವರಿ 8ರಂದು ಜೋಶಿಮಠವನ್ನು 'ಭೂಕುಸಿತದ ವಲಯ' ಎಂದು ಘೋಷಿಸಿದೆ. ಈ ಹಿಂದೆ ನೀಡಿದ ಯಾವ ಸರ್ಕಾರಿ ವರದಿಯೂ ನಗರದ ಅಭಿವೃದ್ಧಿಯ ಪರವಾಗಿರಲಿಲ್ಲ. ಜೋಶಿಮಠ ಕುಸಿತದ ಕಥೆ ಇವತ್ತಿನದಲ್ಲ. ಸರ್ಕಾರವು ಗಢವಾಲ್‌ನ ಜಿಲ್ಲಾಧಿಕಾರಿ ಎನ್.ಸಿ. ಮಿಶ್ರಾ ಅವರ ಅಧ್ಯಕ್ಷತೆಯಲ್ಲಿ ಹದಿನೆಂಟು ಸದಸ್ಯರ ಸಮಿತಿಯನ್ನು ನೇಮಿಸಿ, 1976ರಲ್ಲಿ ಜೋಶಿಮಠದ ಅನೇಕ ವಸತಿಗಳಲ್ಲಿ ಬಿರುಕುಬಿಟ್ಟಿರುವುದರ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಕೇಳಿತ್ತು. ಜೋಶಿಮಠ ಹಳೆಯ ಭೂಕುಸಿತದಿಂದಾಗಿ ಉಂಟಾದ ಕಲ್ಲು ಮಣ್ಣುಗಳ ಮೇಲೆ ನಿಂತಿದೆ ಎಂದು ಆಗಲೇ ವರದಿ ಹೇಳಿತ್ತು. ಹೊಸದಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು ಅಪಾಯಕರ ಎಂದು ಎಚ್ಚರಿಕೆ ನೀಡಿತ್ತು.

2006ರಲ್ಲಿ ಹಿಮಾಲಯದ ಈ ಭಾಗ ಮತ್ತೊಮ್ಮೆ ಮುನಿದಿತ್ತು. ನಗರದ ಇನ್ನಷ್ಟು ಮನೆಗಳು ಬಿರುಕುಬಿಟ್ಟವು. ಆಗ ಸರ್ವೆ ಮಾಡುವ ಕೆಲಸ ವಿಕೋಪ ನಿರ್ವಹಣೆ ಮಾಡುವ ಸಂಸ್ಥೆಯ ಮೇಲೆ ಬಿತ್ತು. ಜೋಶಿಮಠದ ಕೆಳಗೆ ಒಂಬತ್ತು ಸಣ್ಣ ಸಣ್ಣ ಹಳ್ಳ, ಝರಿಗಳು ನಿಶ್ಶಬ್ದವಾಗಿ ನೆಲವನ್ನು ಕೊರೆದುಬಿಟ್ಟಿವೆ, ಇದು ಅಪಾಯಕಾರಿ ಎಂದು ವರದಿ ಹೇಳಿತು. ಆಗ ವರ್ಷಕ್ಕೆ ಈ ಪಟ್ಟಣ ಒಂದು ಸೆಂಟಿಮೀಟರಿನಷ್ಟು ಕುಸಿಯಬಹುದು ಎಂದು ಅಂದಾಜು ಮಾಡಿತ್ತು. ಬಹುಶಃ ಇದು ಲೆಕ್ಕಕ್ಕೆ ಬಾರದಷ್ಟು ಎಂದು ಸರ್ಕಾರ ಮತ್ತೊಮ್ಮೆ ತಜ್ಞರ ವರದಿಯನ್ನು ಬದಿಗಿಟ್ಟಿತು. ಈಗ ಇನ್ನೂ ಒಂದು ವರದಿ ಅರಣ್ಯ ಇಲಾಖೆಯಿಂದ ಬಂದಿದೆ. ಜೋಶಿಮಠದ ಸುತ್ತಮುತ್ತಲ ಅರಣ್ಯ ಸೇರಿದಂತೆ ಕಳೆದ 20 ವರ್ಷಗಳಲ್ಲಿ 50,000 ಹೆಕ್ಟೇರ್ ಕಾಡು ಚಮೋಲಿ ಜಿಲ್ಲೆಯಲ್ಲಿ ಬಹು ತ್ವರಿತಗತಿಯಲ್ಲಿ ನಾಶವಾಗಿದೆ. ಸಣ್ಣ ಮಳೆ ಬಂದರೂ ಸಾಕು, ನೀರು ಒಳಕ್ಕೂ ಇಳಿಯುತ್ತದೆ. ಮೊದಲೇ ಸಡಿಲವಾಗಿದ್ದ ನೆಲ ಇನ್ನಷ್ಟು ಸಡಿಲವಾಗುತ್ತದೆ.


ಪಟ್ಟಣವಾಸಿಗಳು ಎಚ್ಚೆತ್ತು ನಮಗೆ ಬೇರೆ ಸ್ಥಳ ಒದಗಿಸಿಕೊಡಿ ಎಂದು ದುಂಬಾಲು ಬಿದ್ದರು. 2011ರಲ್ಲಿ ಸರ್ಕಾರವು ಅಪಾಯಕಾರಿ ಜಾಗದಲ್ಲಿರುವ ವಸತಿಗಳನ್ನು ಖಾಲಿ ಮಾಡಿಸಿ ಪುನರ್ವಸತಿ ಕಲ್ಪಿಸುವ ಕುರಿತು ತೀರ್ಮಾನಿಸಿತ್ತು. ಆ ಮಟ್ಟಿಗೆ ಇಂಥ ತೀರ್ಮಾನ ತೆಗೆದುಕೊಂಡ ರಾಜ್ಯಗಳಲ್ಲಿ ಉತ್ತರಾಖಂಡವೇ ಮೊದಲು ಎಂದು ಕೊಚ್ಚಿಕೊಂಡಿತು. ಆದರೆ ಆದದ್ದೇನು? 2000ನೇ ಇಸವಿಯಲ್ಲಿ ಉತ್ತರಾಖಂಡದಲ್ಲಿ ಇದ್ದದ್ದು 8,000 ಕಿಲೊಮೀಟರ್ ಉದ್ದದ ರಸ್ತೆಗಳು. ಇಂದು ಅದು 40,000 ಕಿ.ಮೀ.ನಷ್ಟು ಹಬ್ಬಿದೆ ಎಂದು ಗಢವಾಲ್ ವಿಶ್ವವಿದ್ಯಾಲಯ ಸಮೀಕ್ಷಾ ವರದಿ ನೀಡಿದೆ. ಪ್ರತೀ ಕಿಲೊಮೀಟರ್ ರಸ್ತೆ ನಿರ್ಮಿಸುವಾಗಲೂ ಗರಿಷ್ಠ 60,000 ಘನ ಮೀಟರ್ ಕಲ್ಲು ಮಣ್ಣು ರಾಶಿ ಬಿದ್ದು ನದಿಗಳು ಅವನ್ನು ಸಲೀಸಾಗಿ ಹೊತ್ತು ಸಾಗುತ್ತವೆ. ಜಲಮೂಲಗಳನ್ನು ತುಂಬುತ್ತವೆ, ನೀರು ಮತ್ತಷ್ಟು ಒಳಕ್ಕೆ ಇಳಿಯಲು ಅನುಕೂಲವಾಗುತ್ತದೆ. ಚಾರ್‌ಧಾಮ್ ಯೋಜನೆಯ ಸಾಧಕ ಬಾಧಕಗಳ ಕುರಿತು ವರದಿ ಮಾಡಲು ಸುಪ್ರೀಂ ಕೋರ್ಟ್ ಒಂದು ಉನ್ನತ ಮಟ್ಟದ ಸಮಿತಿಯನ್ನು ಸ್ಥಾಪಿಸಿತು. ರವಿ ಚೋಪ್ರಾ ಅದರ ಅಧ್ಯಕ್ಷರಾಗಿದ್ದರು, ಕೊನೆಗೆ ಉತ್ತರಾಖಂಡ ಸರ್ಕಾರ ತನ್ನ ಈ ಭಾಗದ ಅಭಿವೃದ್ಧಿಯನ್ನು ಎಗ್ಗಿಲ್ಲದೆ ಮಾಡುತ್ತಿದೆ ಎಂದು ಬೇಸರಿಸಿ ಅವರು 2022ರ ಮಾರ್ಚ್ ತಿಂಗಳಲ್ಲಿ ರಾಜೀನಾಮೆಯನ್ನೇ ಕೊಟ್ಟರು.

ಇಲ್ಲಿ ಇನ್ನೂ ಒಂದು ಸಂಗತಿಯ ಪ್ರಸ್ತಾಪ ಅತ್ಯಗತ್ಯ. ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್, ಅದು ನಿರ್ಮಾಣ ಮಾಡುತ್ತಿರುವ ಜಲ ವಿದ್ಯುತ್ ಸ್ಥಾವರಕ್ಕಾಗಿ ತಪೋವನ್- ವಿಷ್ಣುಗಡ ಭಾಗದಲ್ಲಿ ಸುರಂಗ ಕೊರೆದಿದೆ. ಸುರಂಗದ ಮೇಲುಭಾಗದಲ್ಲಿ ನೀರು ಚಿಮ್ಮಿ ಕೆಳಭಾಗಕ್ಕೆ ಹರಿದುಬಂದಿರುವುದೇ ಈ ಅವಘಡಕ್ಕೆ ಕಾರಣ ಎಂದು ಪರಿಸರವಾದಿಗಳು, ಭೂವಿಜ್ಞಾನಿಗಳೂ ಒಟ್ಟಿಗೇ ದನಿ ಎತ್ತಿದ್ದಾರೆ. ಇಡೀ ಭಾರತವು ಗಣರಾಜ್ಯೋತ್ಸವ ಆಚರಣೆಯಲ್ಲಿ ಸಂಭ್ರಮಿಸುತ್ತಿದ್ದಾಗ, ಜೋಶಿಮಠದ ನಿವಾಸಿಗಳು 'ಗೋಬ್ಯಾಕ್ ಎಂ.ಟಿ.ಪಿ.ಸಿ.' ಎಂದು ಪ್ರತಿಭಟಿಸುತ್ತಿದ್ದರು. 'ಮೊದಲು ಜೋಶಿಮಠದ ಚರಂಡಿಗಳನ್ನು ದುರಸ್ತಿ ಮಾಡಿ, ಇಲ್ಲದಿದ್ದರೆ ಇದರಲ್ಲಿ ನಿಂತ ನೀರೇ ಇಡೀ ಪಟ್ಟಣಕ್ಕೆ ಸಂಚಕಾರ ತರಬಹುದು' ಎಂದು ಕೆಲವು ಪ್ರಜ್ಞಾವಂತ ನಾಗರಿಕರು ಸಿಡಿದೆದ್ದಿದ್ದಾರೆ.

ಈಗ ಐ.ಐ.ಟಿ. ರೂರ್ಕಿ ಸೇರಿದಂತೆ ಸುಮಾರು ಆರು ಪ್ರಮುಖ ಸಂಸ್ಥೆಗಳ ವಿಜ್ಞಾನಿಗಳು ಜೋಶಿಮಠದ ಯಾತ್ರೆಯನ್ನು ಮುಗಿಸಿದ್ದಾರೆ. ಈ ತಂಡ ಇನ್ನಷ್ಟು ಅಧ್ಯಯನ ಮಾಡಿ ವಿವರವಾದ ವರದಿಯನ್ನು ಸಲ್ಲಿಸಬೇಕೆಂದು ಸರ್ಕಾರ ಬಯಸಿದೆ. ಸದ್ಯ ವರದಿಗಳ ಮೇಲೆ ವರದಿ ಕೂರುತ್ತಿವೆ. ಅವೂ ಒಂದು ದಿನ ಜಾರಬಹುದು!



ಚುರುಮುರಿ



ಸೌಧ ಶುದ್ಧಿ

● ಮಣ್ಣೆರಾಜು

'ಭ್ರಷ್ಟಾಚಾರದಿಂದ ಅಪವಿತ್ರಗೊಂಡಿರುವ ವಿಧಾನಸೌಧವನ್ನು ಗಂಜಲದಿಂದ ಪವಿತ್ರಗೊಳಿ-ಸಬಹುದಾ?' ಸುಮಿ ಕೇಳಿದಳು.

'ಗೊತ್ತಿಲ್ಲ, ಆದರೆ ಗಂಜಲ ಸಿಂಪಡಣೆ ಮಾಡಿದರೆ ವಿಧಾನಸೌಧದ ಜೇಡ, ಜಿರಲೆ, ಗೆದ್ದಲಂತೂ ನಾಶವಾಗಬಹುದು' ಅಂದ ಶಂಕ್ರಿ.

'ಅತಿಯಾದ ಭ್ರಷ್ಟಾಚಾರದಿಂದ ವಿಧಾನಸೌಧದ ಪಾವಿತ್ರ್ಯಕ್ಕೆ ಅಪಚಾರವಾಗಿದೆ ಅಂತ ಸೌಧ ಸಹವಾಸಿಗಳೇ ಆರೋಪಿಸಿದ್ದಾರೆ. ಗಂಜಲ, ಗಂಗಾಜಲದಿಂದ ಶುದ್ಧಿ ಮಾಡಬೇಕಂತೆ. ವಿಧಾನಸೌಧದ ಜೊತೆಗೆ ಅದರೊಳಗಿನವರೂ ಗಂಜಲ ಸ್ನಾನ ಮಾಡಿ ಶುದ್ಧರಾಗಬೇಕು ಅಲ್ವೇನ್ರೀ?'

'ಹೌದು, ಜೊತೆಗೆ, ಕೊರೊನಾ ಕಾಲದಲ್ಲಿ ಕೈ ತೊಳೆಯಲು ಸ್ಯಾನಿಟೈಸರ್ ಬಳಸುವಂತೆ ಸರ್ಕಾರಿ ಕಚೇರಿ ಜನ ಗಂಜಲದಲ್ಲಿ ಕೈ ತೊಳೆದು ಶುದ್ಧ-ಹಸ್ತರಾಗಿ ಕಚೇರಿ ಪ್ರವೇಶಿಸುವ ಪದ್ಧತಿಯನ್ನೂ ಜಾರಿ ಮಾಡಬೇಕು'.

'ಮಾಡಬೇಕು, ಹೀಗೆ ಮಾಡಿದರೆ ಗಂಜಲಕ್ಕೆ ಬೇಡಿಕೆ ಬರುತ್ತದೆ. ಹಾಲಿನ ಡೇರಿಯಂತೆ ಗಂಜಲ ಡೇರಿಗಳೂ ಶುರುವಾಗುತ್ತವೆ. ಹೈನುಗಾರಿಕೆ ಜೊತೆಗೆ ಗಂಜಲಗಾರಿಕೆಯನ್ನೂ ಆರಂಭಿಸಿದರೆ ರೈತರ ಆದಾಯ ದ್ವಿಗುಣವಾ-ಗುತ್ತದೆ. ವಿಧಾನಸೌಧ ಒಳಗೊಂಡಂತೆ ಸರ್ಕಾರಿ ಕಚೇರಿಗಳ ಶುದ್ಧೀಕರಣ ಮಾಡಲು ಸರ್ಕಾರ ಬಜೆಟ್‌ನಲ್ಲಿ ವಿಶೇಷ ಗಂಜಲ ಅನುದಾನ ಮೀಸಲಿಡಬೇಕು'.

'ಭ್ರಷ್ಟಾಚಾರ ತಡೆಗೆ ಇಷ್ಟೆಲ್ಲಾ ವ್ಯವಸ್ಥೆ ಮಾಡಬೇಕಾ? ಭ್ರಷ್ಟರು, ಭ್ರಷ್ಟಾಚಾರ ಬೆಂಬಲಿ-ಸುವವರನ್ನು ಮಟ್ಟ ಹಾಕಿದರೆ ಆಗೋದಿಲ್ವಾ?'

'ಭ್ರಷ್ಟಾಚಾರ ತಡೆಯಬೇಕಾಗಿದ್ದ ಜನನಾಯಕರೇ ಭ್ರಷ್ಟಾಚಾರದಲ್ಲಿ ತೊಡಗುವುದು ಬೇಲಿಯೇ ಎದ್ದು ಹೊಲ ಮೇಯ್ದಂತೆ. ಎಲೆಕ್ಷನ್ ಸಮಯದಲ್ಲಿ ಮತದಾರರು ರಾಜಕಾರಣಿಗಳ ಭ್ರಷ್ಟಾಚಾರದ ಕಾಣಿಕೆ ಪಡೆಯುವುದು ಹೊಲವೇ ಬೇಲಿಗೆ ಬಲಿಯಾದಂತೆ...' ಶಂಕ್ರಿ ಹೇಳಿದ.

'ಮೆಲ್ಲಗೆ ಮಾತಾಡ್ರೀ...ನಮ್ಮ ಮನೆಯನ್ನೂ ಗಂಜಲದಿಂದ ಶುದ್ಧಿ ಮಾಡಬೇಕಾಗುತ್ತದೆ... ಎಲೆಕ್ಷನ್ ನಾಯಕರಿಂದ ನಾನೂ ಕುಕ್ಕರ್, ಸೀರೆ, ಬೆಳ್ಳಿ ಬಟ್ಟಲು ಈಸ್ಕೊಂಡಿದ್ದೀನಿ...' ಸುಮಿ ಪಿಸುಗುಟ್ಟಿದಳು.

ಸಂಗತ

ಶೈಕ್ಷಣಿಕ ಚರ್ಚೆ: ತಪ್ಪು ಆದ್ಯತೆ?

ವಿದ್ಯಾರ್ಥಿಗಳನ್ನು ಬಾಧಿಸುತ್ತಿರುವುದು ಪರೀಕ್ಷೆಯ ಒತ್ತಡವಷ್ಟೇ ಅಲ್ಲ. ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಯ ಕಾರಣಕ್ಕೂ ವಿದ್ಯಾರ್ಥಿಗಳು ಒತ್ತಡಗಳನ್ನು ಎದುರಿಸುತ್ತಿದ್ದಾರೆ

● ಎಚ್.ಕೆ.ಶರತ್

ನಾವು ಹೆಚ್ಚು ಚರ್ಚಿಸಬೇಕಿರುವುದು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಒತ್ತಡ ಹಾಗೂ ಸಮಯದ ನಿರ್ವಹಣೆ ಕುರಿತು ತಿಳಿವಳಿಕೆ ಮೂಡಿಸುವುದು ಹೇಗೆ ಎಂದೋ ಅಥವಾ ವಿದ್ಯಾರ್ಥಿಗಳ ಮೇಲೆ ಬಹಳಷ್ಟು ಒತ್ತಡ ಹೇರುವ ಈಗಿನ ಪರೀಕ್ಷಾ ಪದ್ಧತಿಯಲ್ಲಿ ತರಬೇಕಿರುವ ಸುಧಾರಣೆಗಳ ಕುರಿತೋ?


ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಪರೀಕ್ಷೆಯ ಮೇಲಿನ ಚರ್ಚೆ (ಪರೀಕ್ಷಾ ಪೇ ಚರ್ಚಾ) ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರೊಂದಿಗೆ ಇತ್ತೀಚೆಗಷ್ಟೇ ಮತ್ತೊಂದು ಬಾರಿ ಸಮಾಲೋಚನೆ ನಡೆಸಿದ್ದಾರೆ. ಮೊಬೈಲ್ ಬಳಕೆ ಕಡಿಮೆ ಮಾಡಿ, ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಅಡ್ಡದಾರಿ ತುಳಿಯಬೇಡಿ, ಸಮಯ ನಿರ್ವಹಣೆ ಮಾಡುವುದು ಹೇಗೆಂದು ಅಮ್ಮನಿಂದ ಕಲಿಯಿರಿ, ಟೀಕೆಯನ್ನು ಸಕಾರಾತ್ಮಕವಾಗಿ ಸ್ವೀಕರಿಸಿ, ಪ್ರಾದೇಶಿಕ ಭಾಷೆ ಕಲಿಯಿರಿ ಎನ್ನುವ ಸಲಹೆಗಳನ್ನು ಈ ಬಾರಿಯ ಪರೀಕ್ಷೆಯ ಮೇಲಿನ ಚರ್ಚೆ ವೇಳೆ ವಿದ್ಯಾರ್ಥಿಗಳಿಗೆ ನೀಡಿದ್ದಾರೆ.

ಪರೀಕ್ಷೆ ಎದುರಿಸುವುದು ಹೇಗೆ, ಒತ್ತಡ ನಿಭಾಯಿಸುವುದು ಹೇಗೆ, ವಿದ್ಯಾರ್ಥಿಗಳು ಸಮಯ ನಿರ್ವಹಣೆ ಹೇಗೆ ಮಾಡಬೇಕು ಎಂಬ ವಿಷಯಗಳ ಕುರಿತು ಸಲಹೆಗಳಿಗೇನೂ ನಮ್ಮಲ್ಲಿ ಕೊರತೆ ಇಲ್ಲ. ಈ ಸಲಹೆಗಳಿಗೂ ಪರೀಕ್ಷೆಯೂ ಸೇರಿದಂತೆ ಶಿಕ್ಷಣ ವ್ಯವಸ್ಥೆಯಲ್ಲಿ ತರಬೇಕಾದ ಸುಧಾರಣೆಗಳಿಗೂ ನೇರ ಸಂಬಂಧವೇನೂ ಇಲ್ಲ. ವ್ಯವಸ್ಥೆಯ ಹಂತದಲ್ಲಿ ಸುಧಾರಣೆ ತರುವ ಅಗತ್ಯವಿರುವಾಗ, ಚರ್ಚೆ ನಡೆಯಬೇಕಿರುವುದು ಶಿಕ್ಷಣ ಕ್ಷೇತ್ರದ ಅಸಲಿ ಬಿಕ್ಕಟ್ಟುಗಳ ಸುತ್ತ ಅಲ್ಲವೇ? ಸದ್ಯ ನಾವು ಅಳವಡಿಸಿಕೊಂಡಿರುವ ಪರೀಕ್ಷಾ ಪದ್ಧತಿಯಿಂದ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ ಎಂಬುದನ್ನು ಮನಗಂಡ ಮೇಲೆ, ಒತ್ತಡರಹಿತ ಕಲಿಕೆ ಮತ್ತು ಪರೀಕ್ಷಾ ಪದ್ಧತಿಯನ್ನು ಅನ್ವೇಷಿಸುವುದು ಆದ್ಯತೆಯಾಗಬೇಕಲ್ಲವೇ?

ನಮ್ಮಲ್ಲಿ ಬೇರೂರಿರುವ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆಯು ಶಿಕ್ಷಣ ಕ್ಷೇತ್ರದಲ್ಲೂ ದೊಡ್ಡ ಕಂದಕವನ್ನೇ ಸೃಷ್ಟಿ ಮಾಡಿರುವಾಗ, ಒಂದೇ ಮಾನದಂಡ ಇಟ್ಟುಕೊಂಡು ಎಲ್ಲ ವಿದ್ಯಾರ್ಥಿಗಳನ್ನೂ ಸಮಾನವಾಗಿ ಪರೀಕ್ಷಿಸುವ ಪದ್ಧತಿ ನ್ಯಾಯಯುತವಾದುದೇ ಎಂದೂ ಪರಾಮರ್ಶಿಸಬೇಕಲ್ಲವೇ? ಸೌಲಭ್ಯವಂಚಿತ ವಿದ್ಯಾರ್ಥಿಗಳನ್ನು ಅನುಕೂಲಸ್ಥ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಲು ಬಿಡುವುದು ಸೂಕ್ತವೇ? ಕಲಿಕಾ ಸಂಪನ್ಮೂಲಗಳ ಲಭ್ಯತೆಯಲ್ಲೇ ಅಸಮಾನತೆ ಏರ್ಪಟ್ಟಿರುವಾಗ, ಈಗಿನ ಪರೀಕ್ಷಾ ಫಲಿತಾಂಶದ ಮೂಲಕವೇ ಎಲ್ಲವನ್ನೂ ನಿರ್ಧರಿಸಲು ಸಾಧ್ಯವೇ?

ಓದುವ ವಿದ್ಯಾರ್ಥಿಗಳನ್ನು ಬಾಧಿಸುತ್ತಿರುವುದು ಪರೀಕ್ಷೆಯ ಒತ್ತಡವಷ್ಟೇ ಅಲ್ಲ. ತಮ್ಮ ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಯ ಕಾರಣಕ್ಕೂ ವಿದ್ಯಾರ್ಥಿಗಳು ನಾನಾ ರೀತಿಯ ಒತ್ತಡಗಳನ್ನು ಎದುರಿಸುತ್ತಿದ್ದಾರೆ. ಶಿಕ್ಷಣ ಪಡೆಯಲು ಮತ್ತು ಕಲಿಕೆಗೆ ಅಗತ್ಯವಿರುವ ಸಂಪನ್ಮೂಲಗಳನ್ನು ದಕ್ಕಿಸಿಕೊಳ್ಳಲು ಕೂಡ ಬಹಳಷ್ಟು ಹೆಣಗಾಡಬೇಕಾದ ಪರಿಸ್ಥಿತಿಯಲ್ಲಿ ಹಲವು ವಿದ್ಯಾರ್ಥಿಗಳಿದ್ದಾರೆ. ಶುಲ್ಕ ಕಟ್ಟಲು, ಮುಂದೆ ಓದಿಸಲು ಪೋಷಕರಿಗೆ ಸಾಧ್ಯವಾಗುವುದೋ ಇಲ್ಲವೋ ಎನ್ನುವ ಪ್ರಶ್ನೆಯೂ ಬಡ ವಿದ್ಯಾರ್ಥಿಗಳನ್ನು ಬಾಧಿಸುತ್ತಿದೆ. ಹೆಚ್ಚಿನ ಸರ್ಕಾರಿ ಶಾಲೆಗಳಲ್ಲಿ ಸುಸ್ಥಿತಿಯಲ್ಲಿರುವ ಕಟ್ಟಡ ಹಾಗೂ ಶೌಚಾಲಯದಂತಹ ಮೂಲಭೂತ ಸೌಕರ್ಯಗಳಿಗೂ ಅಭಾವವಿದೆ. ಇಂತಹ ಸೌಕರ್ಯವಂಚಿತ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಅಳಲು ಆಲಿಸುವುದು ಕೂಡ ಆಳುವವರ ಆದ್ಯತೆಯಾಗಬೇಕಲ್ಲವೇ?

ಇನ್ನು ಓದಿಗೆ ಲಭ್ಯವಿರುವ ಸಮಯವೂ ಒಬ್ಬೊಬ್ಬ ವಿದ್ಯಾರ್ಥಿಗೆ ಒಂದೊಂದು ರೀತಿಯಲ್ಲಿ ಇರುತ್ತದೆ. ಮನೆಯಲ್ಲಿ ನಾನಾ ರೀತಿಯ ಕೆಲಸಗಳನ್ನು ದಿನನಿತ್ಯ ಮಾಡಿಕೊಂಡೇ ಓದಬೇಕಿರುವ ಕೌಟುಂಬಿಕ ಪರಿಸ್ಥಿತಿಯೂ ಹಲವರದ್ದಾಗಿದೆ. ಕುಟುಂಬ ನಿರ್ವಹಣೆ ಹಾಗೂ ಶಿಕ್ಷಣಕ್ಕೆ ಹಣ ಹೊಂದಿಸುವ ಸಲುವಾಗಿ ಅರೆಕಾಲಿಕ ಕೆಲಸಗಳನ್ನು ನಿರ್ವಹಿಸುತ್ತಲೇ ಓದು ಮುಂದುವರಿಸುತ್ತಿರುವ ವಿದ್ಯಾರ್ಥಿಗಳು ಕಾಣಸಿಗುವುದು ನಮ್ಮಲ್ಲಿ ಅಪರೂಪವೇನಲ್ಲ.



ಸಕಲ ಸೌಲಭ್ಯಗಳುಳ್ಳ ಶಾಲೆಗಳಲ್ಲಿ ಓದುವ ಅನುಕೂಲಸ್ಥರ ಮನೆಯ ಮಕ್ಕಳಿಗೆ ಸಕಲ ರೀತಿಯ ಸಲಹೆಗಳೂ ನೆರವುಗಳೂ ಸಕಾಲಕ್ಕೆ ದೊರಕುತ್ತಲೇ ಇರುತ್ತವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಶಿಕ್ಷಣ ಸಚಿವಾಲಯ ಕಾಳಜಿ ತೋರಬೇಕಿರುವುದು, ಇಲ್ಲಗಳ ನಡುವೆಯೂ ಓದು ಮುಂದುವರಿಸುತ್ತಿರುವ ಮಕ್ಕಳ ಮೇಲಲ್ಲವೇ?

ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಪರೀಕ್ಷೆಯ ಮೇಲೆ ಚರ್ಚೆ ನಡೆಸಲು ವ್ಯಯಿಸುವ ಸಮಯ ಹಾಗೂ ಸಂಪನ್ಮೂಲವನ್ನು, ಒಟ್ಟಾರೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೆ ವ್ಯಯಿಸುವುದು ಆದ್ಯತೆಯಾಗಬೇಕಲ್ಲವೇ? ಪರೀಕ್ಷೆಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ಪ್ರಧಾನಿಯವರಿಂದ ಹೊರಹೊಮ್ಮುತ್ತಿರುವ ಸಲಹೆಗಳು, ಸೌಲಭ್ಯ ವಂಚಿತ ಮಕ್ಕಳ ಮೇಲಿನ ಒತ್ತಡವನ್ನೇನೂ ಕಡಿಮೆ ಮಾಡುವ ಹಾಗೆ ತೋರುತ್ತಿಲ್ಲ.

ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರಕಿಸುವ ದಿಸೆಯಲ್ಲಿ ಯೋಜನೆಗಳನ್ನು ರೂಪಿಸುವುದು 'ಪರೀಕ್ಷಾ ಪೇ ಚರ್ಚಾ'ಗಿಂತ ಹೆಚ್ಚು ಅರ್ಥಪೂರ್ಣವಾದುದಲ್ಲವೇ? ಕೋಚಿಂಗ್ ಸೆಂಟರ್ ಕೇಂದ್ರಿತ ಪರೀಕ್ಷೆಗಳ ಆಧಾರದಲ್ಲಿ ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವುದಕ್ಕೆ ಪರ್ಯಾಯವಾಗಿ, ಸೌಲಭ್ಯವಂಚಿತ ವಿದ್ಯಾರ್ಥಿಗಳನ್ನೂ ಒಳಗೊಳ್ಳುವ ಮಾದರಿಗಳನ್ನು ಅನ್ವೇಷಿಸುವುದರ ಕುರಿತು ಚರ್ಚೆಗಳು ನಡೆಯಬೇಕಿರುವುದು ವರ್ತಮಾನದ ಅಗತ್ಯ.

ವಾಚಕರ ವಾಣಿ

ರೈತ ಸಂಜೀವಿನಿ: ತಾಲ್ಲೂಕಿಗೂ ವಿಸ್ತರಿಸಿ

ರಾಜ್ಯ ಸರ್ಕಾರವು ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನೆಗೆ ಸಂಬಂಧಿಸಿದಂತೆ ರೈತ ಕ್ಷೇತ್ರ ಭೇಟಿಯ ಮೂಲಕ ಮಾಹಿತಿ, ತಿಳಿವಳಿಕೆ ನೀಡುವ ಸಲುವಾಗಿ 'ರೈತ ಸಂಜೀವಿನಿ' ಎಂಬ ಹೆಸರಿನಲ್ಲಿ 64 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ಆರಂಭಿಸಿರುವುದು ಅಭಿನಂದನೀಯ. ಇದರ ಉಪಯುಕ್ತತೆಯನ್ನು ಪರಿಶೀಲಿಸಿ, ಕಂಡುಬರುವ ನ್ಯೂನತೆಗಳನ್ನು ತ್ವರಿತಗತಿಯಲ್ಲಿ ಸರಿಪಡಿಸಿ, ರಾಜ್ಯದ ಎಲ್ಲ ತಾಲ್ಲೂಕುಗಳಿಗೂ ಈ ಸೌಲಭ್ಯವನ್ನು ವಿಸ್ತರಿಸಬೇಕು.

ರಮೇಶ್, ಬೆಂಗಳೂರು

ಮತ ಮಾರಾಟವೆಂಬ ಬೀಜ–ವೃಕ್ಷ ನ್ಯಾಯ!

'ಚುನಾವಣೆಗಳಲ್ಲಿ ಹಣ, ಮದ್ಯದಂತಹ ಆಮಿಷಗಳಿಗೆ ಮತ ಮಾರಿಕೊಳ್ಳುವುದಿಲ್ಲ ಎಂದು ಪ್ರತೀ ಪ್ರಜೆ ಅಭಿಯಾನ ಆರಂಭಿಸಿ, ಶ್ರೇಷ್ಠ ಪ್ರಜಾಸತ್ತಾತ್ಮಕ ಸಂಸದೀಯ ವ್ಯವಸ್ಥೆ ರಕ್ಷಿಸಬೇಕು' ಎಂದಿರುವ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಮಾತು (ಪ್ರ.ವಾ., ಜ. 31) ಸರ್ವಸಮ್ಮತವಾದುದು ಎಂಬುದನ್ನು ಪ್ರಜೆಗಳು ಮತ್ತು ಎಲ್ಲ ರಾಜಕೀಯ ಪಕ್ಷಗಳೂ ಒಪ್ಪುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಪ್ರಜೆಗಳು ಮತಗಳನ್ನು ಮಾರಬಾರದೆಂದು ಹೇಳಿದಂತೆಯೇ ಅಧ್ಯಕ್ಷರು 'ಮತಗಳನ್ನು ಹಣ, ಮದ್ಯದಂತಹ ಆಮಿಷಗಳ ಮೂಲಕ ಕೊಳ್ಳುವುದಿಲ್ಲ' ಎಂದು ಪ್ರತೀ ಅಭ್ಯರ್ಥಿ ಅಭಿಯಾನ ಆರಂಭಿಸಿ, ಶ್ರೇಷ್ಠ ಪ್ರಜಾಸತ್ತಾತ್ಮಕ ಸಂಸದೀಯ ವ್ಯವಸ್ಥೆ ರಕ್ಷಿಸಬೇಕು ಎಂದು ಹೇಳಿದ್ದರೆ ಮಾತು ಪೂರ್ಣವೂ, ಅರ್ಥಪೂರ್ಣವೂ ಆಗುತ್ತಿತ್ತು. ಮತಗಳನ್ನು ಮಾರುವವರು ಇರುವುದರಿಂದ ಕೊಳ್ಳುವವರು ಇರುವರೋ ಅಥವಾ ಕೊಳ್ಳುವವರು ಇರುವುದರಿಂದ ಮಾರುವವರು ಇದ್ದಾರೆಯೋ ಎಂಬುದು ಬೀಜ–ವೃಕ್ಷ ನ್ಯಾಯದಂತೆ ಸಂಶೋಧನೆಗೆ ಒಳಪಡಿಸಬೇಕಾದ ಸಂಗತಿ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಉದ್ಯೋಗ ಅವಕಾಶ ಹೆಚ್ಚಿಸಲು ಗಮನ ಕೊಡಿ

ಪದವಿ ಮುಗಿಸಿದ ಲಕ್ಷಾಂತರ ಯುವಕ-ಯುವತಿಯರು ಇಂದು ನಿರುದ್ಯೋಗಿಗಳಾಗಿದ್ದಾರೆ. ಪ್ರಸ್ತುತ ದಿನಮಾನಗಳಲ್ಲಿ ನೇಮಕಾತಿಯಲ್ಲಿ ನಡೆಯುತ್ತಿರುವ ಅಕ್ರಮಗಳು ಯುವಜನರನ್ನು ಗೊಂದಲಕ್ಕೆ, ಮಾನಸಿಕ ಖಿನ್ನತೆಗೆ ದೂಡಿವೆ. ಹೀಗಾಗಿ ರಾಜ್ಯ ಸರ್ಕಾರ ಪ್ರಸ್ತುತ ಮಂಡಿಸಲಿರುವ 'ಯುವ ಬಜೆಟ್'ನಲ್ಲಿ ಯುವ ಸಮೂಹಕ್ಕೆ ಹುರುಪು ತುಂಬುವ ರೀತಿಯ ಕಾರ್ಯಕ್ರಮಗಳನ್ನು ಘೋಷಿಸಬೇಕು. ಖಿನ್ನತೆಗೆ ಒಳಗಾದವರನ್ನು ಬಾಧೆ ಮುಕ್ತಗೊಳಿಸಲು ಆಪ್ತ ಸಮಾಲೋಚಕ ಶಿಬಿರಗಳನ್ನು ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ತಿಂಗಳಿಗೊಮ್ಮೆ ಏರ್ಪಡಿಸಲು ಸಾಧ್ಯವಾಗುವಂತಹ ಕಾರ್ಯಕ್ರಮಗಳನ್ನು ಪ್ರಕಟಿಸಬೇಕು. ಜೊತೆಗೆ ಉದ್ಯೋಗ ಅವಕಾಶಗಳ ಸೃಷ್ಟಿ, ಪದವಿ ಮಟ್ಟದಲ್ಲಿ ಪಠ್ಯಕ್ರಮದ ಜೊತೆಗೆ ಕೌಶಲಾಧಾರಿತ ಶಿಕ್ಷಣಕ್ಕೆ ಇನ್ನಷ್ಟು ಒತ್ತು ನೀಡಬೇಕು. ವೃತ್ತಿ ಮಾರ್ಗದರ್ಶನ ಶಿಬಿರಗಳನ್ನು ಆಯೋಜಿಸಲು ಕ್ರಮ ಜರುಗಿಸಬೇಕು.

ರಾಜ ಮುಗಲಳ್ಳಿ, ಉಜ್ಜಯಿನಿ

ಅವು ನಮ್ಮ ಬಸ್‌ಗಳು, ನೆನಪಿರಲಿ...

ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಬಸ್ ಗ್ಲಾಸ್ ಮೇಲೆ ವಿವಿಧ ನಟರ ಹೆಸರು, ಸಂಘ ಸಂಸ್ಥೆಗಳ ಹೆಸರು, ಕೆಲವು ಪಾಂಪ್ಲೆಟ್, ರೇಡಿಯಂ ವರ್ಕ್, ದೇವರ ಹೆಸರುಗಳು ಕಂಡುಬರುತ್ತವೆ. ಬಸ್ಸುಗಳ ಮೇಲೆ ಇಷ್ಟು ಪ್ರೀತಿ ಹೊಂದಿರುವ ಜನರು, ಕಡಲೆಕಾಯಿ ತಿಂದು ಬಸ್ಸಲ್ಲೇ ಸಿಪ್ಪೆ ಚೆಲ್ಲುವುದು, ಖಾಲಿಯಾದ ಚಿಪ್ಸ್ ಪ್ಯಾಕೆಟ್‌ಗಳನ್ನು ಸೀಟಿನ ಮೂಲೆಯಲ್ಲಿ ತುರುಕುವುದು, ಕೈಕೊಳೆಯನ್ನು ಎದುರಿನ ಸೀಟಿಗೆ ಒರೆಸುವುದು, ಕಿಟಕಿಯಲ್ಲಿ ಮುಖ ಮುಂದೆ ಮಾಡಿ ಉಗಿಯುವುದನ್ನು ಯಾಕೆ ಮಾಡುತ್ತಾರೆ ಎನ್ನುವುದು ತಿಳಿಯುವುದಿಲ್ಲ. ಪ್ರೀತಿಯನ್ನು ಬಸ್‌ನ ಹೊರಗಷ್ಟೇ ತೋರಿಸಿದರೆ ಸಾಲದು, ಸ್ವಚ್ಛತೆಯಲ್ಲಿಯೂ ಇರಲಿ, ಅವು ನಮ್ಮ ಬಸ್‌ಗಳು. ನೆನಪಿರಲಿ.

ಬಸನಗೌಡ ಪಾಟೀಲ, ಯರಗುಪ್ಪಿ

ಸಾಮಾಜಿಕ ಬದಲಾವಣೆಯ ಭರವಸೆಯ ನಡೆ

ತಮಿಳುನಾಡಿನ ತಂದರಂಪಟ್ಟು ತಾಲ್ಲೂಕಿನ ಗ್ರಾಮವೊಂದರ ಮುತ್ತು ಮಾರಿಯಮ್ಮನ್ ದೇವಸ್ಥಾನವನ್ನು ಆ ಊರಿನ ದಲಿತರು ಪ್ರವೇಶಿಸಿರುವುದು ಅಸಮಾನತೆಯಿಂದ ಸಮಾನತೆಯೆಡೆಗಿನ ದಿಟ್ಟ ನಡೆ. ಅಷ್ಟು ಮಾತ್ರವಲ್ಲ, ಸಾಮಾಜಿಕ ಬದಲಾವಣೆಯ ಆಶಾವಾದದ ದ್ಯೋತಕವೂ ಹೌದು.

ಸಂವಿಧಾನದ ಅಡಿಯಲ್ಲಿ ಸರ್ವರೂ ಸಮಾನರು ಎಂಬುದನ್ನು ಪ್ರಬಲ ಜಾತಿಯ ವಿದ್ಯಾವಂತರಿಗೂ ಮನವರಿಕೆ ಮಾಡಿಕೊಡಬೇಕಾದ ಪರಿಸ್ಥಿತಿ ಇರುವುದು ವಿಷಾದನೀಯ. ಇದರಿಂದ ನಮ್ಮ ಶಿಕ್ಷಣ ವ್ಯವಸ್ಥೆ ನಮ್ಮನ್ನು ಸಾಕ್ಷರರನ್ನಾಗಿಸಿದೆಯೇ ವಿನಾ ಸುಶಿಕ್ಷಿತರನ್ನಾಗಿಸಿಲ್ಲ ಎಂಬುದು ಸಾಬೀತಾಗಿದೆ. ಸಂವಿಧಾನದ ಮೂಲ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಪ್ರಾಥಮಿಕ ಹಂತದಲ್ಲೇ ಪಠ್ಯಕ್ರಮವಾಗಿಸಿ ಸೂಕ್ತ ಮನವರಿಕೆ ಮಾಡಿಕೊಡುವ ಜರೂರು ಇಂದಿನದ್ದಾಗಿದೆ.

ದಿನಮಣಿ ಬಿ.ಎಸ್., ಮೈಸೂರು

ನವ್ಯ ಶೈಲಿಯ ರಸಮೀಮಾಂಸೆ

ಅಗಲಿದ ಕವಿ ಕೆ.ವಿ.ತಿರುಮಲೇಶ್ ಅವರ ಕಾವ್ಯ ತುಂಬಾ ವಿಶಿಷ್ಟವಾದುದು. 1978ರ 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾದ ಅವರ 'ಕಾರಡ್ಕ' ಎಂಬ ಕವನ ನನ್ನನ್ನು ಆರು ತಿಂಗಳ ಕಾಲ ಕಾಡಿದ್ದುಂಟು. ನವೋದಯ ಕಾವ್ಯದಲ್ಲಿದ್ದ ಪ್ರಕೃತಿ ಸೌಂದರ್ಯಾರಾಧನೆಯ ರಸಮೀಮಾಂಸೆ ನವ್ಯಕಾವ್ಯದಲ್ಲಿ ಇಲ್ಲ ಎಂಬ ಆರೋಪವನ್ನು ಈ ಕವನ ಸುಳ್ಳಾಗಿಸಿತ್ತು. ಅಪ್ಪಟ ನವ್ಯ ಶೈಲಿಯಲ್ಲಿ ತಿರುಮಲೇಶ್ ಅವರು ತಮ್ಮ ಹುಟ್ಟಿದ ಊರಾದ ಕಾರಡ್ಕದ ಪ್ರಕೃತಿ ಚಿತ್ರಣವನ್ನು ಈ ಕವಿತೆಯಲ್ಲಿ ಕಟ್ಟಿಕೊಟ್ಟಿದ್ದರು. ತಿರುಮಲೇಶ್ ಅವರ ಇನ್ನಿತರ ಕವನ ಸಂಕಲನಗಳು ಸಹ ತಮ್ಮ ವಿಶಿಷ್ಟ ಸಂವೇದನೆಯಿಂದಾಗಿ ಓದುಗರ ಗಮನ ಸೆಳೆಯುತ್ತವೆ. ಅಂಥ ಪ್ರತಿಭಾವಂತ ಕವಿಯನ್ನು ನಮ್ಮ ಸಾರಸ್ವತ ಲೋಕವು ಕಾವ್ಯ ಕರ್ಮಕ್ಕಾಗಿ ಹೆಚ್ಚಾಗಿ ಬಳಸಿಕೊಳ್ಳಲೇ ಇಲ್ಲ. ಇದೊಂದು ನಷ್ಟವೇ ಸರಿ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

'ಇಂಡಿಯಾ: ದಿ ಮೋದಿ ಕ್ವೆಶ್ಚನ್'- ಇದು ಗುಜರಾತ್‌ನಲ್ಲಿ 2002ರಲ್ಲಿ ನಡೆದ ಗಲಭೆಯ ಸುತ್ತ ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರದ ಹೆಸರು. ಈ ಸಾಕ್ಷ್ಯಚಿತ್ರ ವಿವಾದ ಸೃಷ್ಟಿಸಿದೆ. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಮತ್ತು ಟ್ವಿಟರ್‌ನಿಂದ ಈ ಸಾಕ್ಷ್ಯಚಿತ್ರದ ಲಿಂಕ್ ತೆಗೆದುಹಾಕುವಂತೆ ಸರ್ಕಾರ ಆದೇಶಿಸಿದೆ. ಭಾರತದಲ್ಲಿ ಸಾಕ್ಷ್ಯಚಿತ್ರ ಕುರಿತಂತೆ ವಿವಾದವಾಗಿ ಕೇಂದ್ರ ಸರ್ಕಾರ ಕ್ರಮಕ್ಕೆ ಮುಂದಾಗಿದ್ದು ಇದೇ ಮೊದಲೇನೂ ಅಲ್ಲ. ಸಾಕ್ಷ್ಯಚಿತ್ರ ಮತ್ತು ಭಾರತವನ್ನು ಕೆಟ್ಟದಾಗಿ ಚಿತ್ರಿಸಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ಬ್ರಿಟನ್‌ನ ಮಾಧ್ಯಮ ಸಂಸ್ಥೆ ಬಿಬಿಸಿಯೊಂದಿಗೆ ಹಲವು ಬಾರಿ ಜಟಾಪಟಿ ನಡೆದಿದೆ. ಜೊತೆಗೆ, ಭಾರತೀಯರು ಮತ್ತು ವಿದೇಶಿಯರು ನಿರ್ಮಿಸಿದ ಹಲವು ಸಾಕ್ಷ್ಯಚಿತ್ರಗಳ ಕುರಿತು ಕೂಡ ಆಕ್ಷೇಪಗಳು ವ್ಯಕ್ತವಾಗಿ ವಿವಾದಗಳಾಗಿವೆ


ಸಾಕ್ಷ್ಯಚಿತ್ರ ನಿಷೇಧ 'ಪರಂಪರೆ'

ಬಿಬಿಸಿ ನಿಷೇಧಕ್ಕೆ ಕಾರಣವಾದ 'ಕಲ್ಕತ್ತಾ'

ಫ್ರಾನ್ಸ್‌ನ ಪ್ರಸಿದ್ಧ ಸಿನಿಮಾ ನಿರ್ದೇಶಕ ಲೂಯಿಸ್ ಮಾಲ್ ನಿರ್ದೇಶಿಸಿದ್ದ 'ಕಲ್ಕತ್ತಾ' ಎಂಬ ಹೆಸರಿನ ಸಾಕ್ಷ್ಯಚಿತ್ರವನ್ನು ಬಿಬಿಸಿ 1969ರಲ್ಲಿ ಪ್ರಸಾರ ಮಾಡಿತ್ತು. 'ಈ ಸಾಕ್ಷ್ಯಚಿತ್ರವು ಕಲ್ಕತ್ತಾದ ಬಡತನವನ್ನೇ ಕೇಂದ್ರವಾಗಿ ಇರಿಸಿಕೊಂಡಿದೆ. ಹಾಗಾಗಿ, ಭಾರತವನ್ನು ಕೆಟ್ಟದಾಗಿ ಚಿತ್ರಿಸುವುದೇ ಇದರ ಉದ್ದೇಶ' ಎಂದು ಆಗ ಆಕ್ಷೇಪ ವ್ಯಕ್ತವಾಗಿತ್ತು. ಆಗ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರಿಗೂ ಸಾಕ್ಷ್ಯಚಿತ್ರವು ಅಸಮಾಧಾನ ತರಿಸಿತ್ತು. ಸಾಕ್ಷ್ಯಚಿತ್ರವು ಅತ್ಯಂತ ಹೆಚ್ಚು ಪೂರ್ವಗ್ರಹಗಳಿಂದ ಕೂಡಿದೆ ಎಂಬ ದೂರನ್ನು ಭಾರತ ಸರ್ಕಾರವು ಬ್ರಿಟನ್ ಹೈಕಮಿಷನ್‌ಗೆ ನೀಡಿತ್ತು. ಆದರೆ, ಬಿಬಿಸಿಯ ವ್ಯವಹಾರದಲ್ಲಿ ಹಸ್ತಕ್ಷೇಪ ಸಾಧ್ಯವಿಲ್ಲ ಎಂದು ಬ್ರಿಟನ್‌ನ ವಿದೇಶಾಂಗ ಸಚಿವಾಲಯವು ಹೇಳಿತ್ತು. ಬಿಬಿಸಿಯ ಮೇಲೆ 1970ರ ಆಗಸ್ಟ್ 29ರಂದು ನಿಷೇಧ ಹೇರಲಾಯಿತು. ಆದರೆ ಆ ಸಂದರ್ಭದಲ್ಲಿ ಈಗಿನಂತೆ ವಿಷಯದ ಕುರಿತು ರಾಜಕೀಯ ಭಿನ್ನಾಭಿಪ್ರಾಯ ಇರಲಿಲ್ಲ. ಎಲ್ಲ ಪಕ್ಷಗಳೂ ಈ ನಿರ್ಧಾರಕ್ಕೆ ಸಹಮತ ಸೂಚಿಸಿದ್ದವು.

ದೆಹಲಿಯಲ್ಲಿದ್ದ ಬಿಬಿಸಿ ಕಚೇರಿಯನ್ನು 15 ದಿನಗಳಲ್ಲಿ ಮುಚ್ಚುವಂತೆ ಬಿಬಿಸಿಯ ದೆಹಲಿ ಪ್ರತಿನಿಧಿ ಮಾರ್ಕ್ ಟಲ್ಲಿ ಮತ್ತು ವರದಿಗಾರ ರಾನಿ ರಾಬ್ಸನ್ ಅವರಿಗೆ ಸೂಚಿಸಲಾಯಿತು. ಸುಮಾರು ಎರಡು ವರ್ಷ ಕಾಲ ಬಿಬಿಸಿಯನ್ನು ಭಾರತದಿಂದ ಹೊರಕ್ಕೆ ಹಾಕಲಾಗಿತ್ತು. 1971ರ ಕೊನೆಯಲ್ಲಷ್ಟೇ ಬಿಬಿಸಿಗೆ ಭಾರತದಿಂದ ವರದಿ ಮಾಡಲು ಅವಕಾಶ ಕೊಡಲಾಯಿತು.

ಸತ್ಯಜಿತ್ ರೇ ಅವರನ್ನೂ ಬಿಡದ 'ನಿಷೇಧ'




32 ರಾಷ್ಟ್ರಪ್ರಶಸ್ತಿಗಳನ್ನು ಪಡೆದಿರುವ ಪ್ರಖ್ಯಾತ ಚಿತ್ರ ನಿರ್ದೇಶಕ ಸತ್ಯಜಿತ್ ರೇ ಅವರಿಗೂ ನಿಷೇಧದ ಬಿಸಿ ತಾಗಿತ್ತು. 1971ರಲ್ಲಿ ಅವರು ನಿರ್ದೇಶಿಸಿದ್ದ 'ಸಿಕ್ಕಿಂ' ಹೆಸರಿನ ಸಾಕ್ಷ್ಯಚಿತ್ರಕ್ಕೆ ಭಾರತ ಸೇರಿ ಎರಡು ದೇಶಗಳು ನಿಷೇಧ ಹೇರಿದ್ದವು. ಸಿಕ್ಕಿಂ ರಾಜ್ಯವು ಭಾರತದ ಒಕ್ಕೂಟಕ್ಕೆ ಸೇರುವ ಮುನ್ನ, ಪಾಲ್ಡೆನ್ ತೊಂಡುಪ್ ನಾಮ್‌ಗ್ಯಾಲ್ ಎಂಬ ದೊರೆಯ ಆಳ್ವಿಕೆಯಲ್ಲಿತ್ತು. ರಾಜ್ಯದ ಸಾರ್ವಭೌಮತೆಯನ್ನು ಜಗತ್ತಿಗೆ ತೋರಿಸುವ ಉದ್ದೇಶದಿಂದ ಸತ್ಯಜಿತ್ ರೇ ಅವರಿಗೆ ಸಿಕ್ಕಿಂ ಕುರಿತ ಸಾಕ್ಷ್ಯಚಿತ್ರ ತಯಾರಿಸಲು ರಾಜ ನಿರ್ದೇಶಿಸಿದ್ದ. ರೇ ಅವರು ಸಿದ್ಧಪಡಿಸಿದ್ದ ಚಿತ್ರದ ಕೆಲವು ಅಂಶಗಳಿಗೆ ಆಕ್ಷೇಪ ವ್ಯಕ್ತವಾಗಿತ್ತು ಎನ್ನಲಾಗಿದೆ. ಸಿಕ್ಕಿಂ ರಾಜ್ಯವು 1975ರಲ್ಲಿ ಭಾರತದ ಭಾಗವಾಯಿತು. ಸಿಕ್ಕಿಂ ಜನರ ಭಾವನೆಗೆ ಧಕ್ಕೆ ಉಂಟಾಗಬಾರದು ಎಂಬ ಉದ್ದೇಶದಿಂದ ಚಿತ್ರಕ್ಕೆ ನಿರ್ಬಂಧ ಹೇರಲಾಗಿತ್ತು ಎನ್ನಲಾಗಿದೆ. ಸುಮಾರು 35 ವರ್ಷಗಳ ಬಳಿಕ, 2010ರಲ್ಲಿ ನಿಷೇಧ ತೆರವು ಮಾಡಲಾಯಿತು. ಈ ಚಿತ್ರ ಯಾವುದೇ ರಾಜಕೀಯ ದುರುದ್ದೇಶದ ವಿಷಯವನ್ನು ಒಳಗೊಂಡಿರಲಿಲ್ಲ ಎಂದು ವಿಶ್ಲೇಷಿಸಲಾಗಿದೆ.

ಆಕ್ರೋಶಕ್ಕೆ ಕಾರಣವಾದ 'ರಾಮ್ ಕೆ ನಾಮ್'

ಅಯೋಧ್ಯೆಯಲ್ಲಿದ್ದ 16ನೇ ಶತಮಾನದಲ್ಲಿ ನಿರ್ಮಾಣವಾದ ಬಾಬರಿ ಮಸೀದಿಯನ್ನು ನೆಲಸಮಗೊಳಿಸಬೇಕು ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ನಡೆಸಿದ್ದ ಅಭಿಯಾನದ ಕುರಿತು ಆನಂದ್ ಪಟವರ್ಧನ್ ಅವರು 1991ರಲ್ಲಿ 'ರಾಮ್ ಕೆ ನಾಮ್' ಎಂಬ ಹೆಸರಿನ ಸಾಕ್ಷ್ಯಚಿತ್ರ ನಿರ್ಮಿಸಿದ್ದರು. 1992ರ ಸೆಪ್ಟೆಂಬರ್‌ನಲ್ಲಿ ಈ ಸಾಕ್ಷ್ಯಚಿತ್ರವನ್ನು ಬಿಡುಗಡೆ ಮಾಡಲಾಯಿತು. ರಾಮ ಮಂದಿರ ನಿರ್ಮಾಣವಾಗಬೇಕು ಎಂದು ವಿಶ್ವ ಹಿಂದೂ ಪರಿಷತ್ ನಡೆಸಿದ ಅಭಿಯಾನ ಮತ್ತು ಮಂದಿರದ ಹೆಸರಿನಲ್ಲಿ ನಡೆದ ಕೋಮು ಹಿಂಸೆಯನ್ನು ಸಾಕ್ಷ್ಯಚಿತ್ರದಲ್ಲಿ ವಿವರಿಸಲಾಗಿತ್ತು. ಬಲಪಂಥೀಯ ಮುಖಂಡರೂ ಸೇರಿ ಹಲವರ ಸಂದರ್ಶನಗಳೂ ಸಾಕ್ಷ್ಯಚಿತ್ರದಲ್ಲಿ ಇವೆ. ಸಿನಿಮಾ ಪ್ರಮಾಣೀಕರಣದ ಕೇಂದ್ರೀಯ ಮಂಡಳಿ (ಸಿಬಿಎಫ್‌ಸಿ), ಸಾಕ್ಷ್ಯಚಿತ್ರಕ್ಕೆ ಪ್ರಮಾಣಪತ್ರ ನೀಡುವಾಗ ಹಲವು ಕಡಿತಗಳನ್ನು ಸೂಚಿಸಿತ್ತು. ಬಳಿಕ ರಚಿಸಲಾದ ಹೊಸ ಸಮಿತಿಯು ಯಾವುದೇ ಕಡಿತ ಮಾಡದೆ 'ಯು' ಪ್ರಮಾಣಪತ್ರ ನೀಡಿತ್ತು.

1992ರ ಅತ್ಯುತ್ತಮ ತನಿಖಾ ಸಾಕ್ಷ್ಯಚಿತ್ರ ಎಂಬ ರಾಷ್ಟ್ರಪ್ರಶಸ್ತಿಯನ್ನೂ ಇದು ಪಡೆದುಕೊಂಡಿತ್ತು. ಆದರೆ, ದೂರದರ್ಶನವು ಇದನ್ನು ಪ್ರದರ್ಶನಕ್ಕೆ ಪರಿಗಣಿಸಲೇ ಇಲ್ಲ ಎಂಬುದು ವಿವಾದಕ್ಕೆ ಕಾರಣವಾಯಿತು. ಈ ವಿಚಾರವು ಕೋರ್ಟ್ ಮೆಟ್ಟಿಲು ಹತ್ತಿತ್ತು. ಬಾಂಬೆ ಹೈಕೋರ್ಟ್ 1997ರಲ್ಲಿ ಸೂಚನೆ ನೀಡುವವರೆಗೆ ಇದರ ಪ್ರಸಾರ ಸಾಧ್ಯವಾಗಲಿಲ್ಲ. ವಿಎಚ್‌ಪಿ ಮತ್ತು ಇತರ ಹಿಂದುತ್ವವಾದಿ ಸಂಘಟನೆಗಳು ಇದು ಪ್ರದರ್ಶನಗೊಂಡ ಹಲವು ಸ್ಥಳಗಳಲ್ಲಿ ಪ್ರತಿಭಟನೆ ನಡೆಸಿದವು. ನ್ಯೂಯಾರ್ಕ್‌ನ ಅಮೆರಿಕನ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿಯಲ್ಲಿ 2002ರಲ್ಲಿ ಪ್ರದರ್ಶನ ಏರ್ಪಾಡಾಗಿತ್ತು. ಆದರೆ, ವಿಎಚ್‌ಪಿ ಪ್ರತಿಭಟನೆಯಿಂದಾಗಿ ಪ್ರದರ್ಶನ ರದ್ದು ಮಾಡಬೇಕಾಗಿ ಬಂತು. 2014ರಲ್ಲಿ ಕೆಲವೆಡೆ ಪ್ರದರ್ಶನದ ಪ್ರಯತ್ನ ನಡೆದಿತ್ತು. ಆಗಲೂ ಕೆಲವು ಸ್ಥಳಗಳಲ್ಲಿ ಪ್ರದರ್ಶನ ರದ್ದು ಮಾಡಬೇಕಾಗಿ ಬಂದಿತ್ತು. 2019ರಲ್ಲಿಯೂ ಈ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸುವ ಪ್ರಯತ್ನವನ್ನು ನಡೆಸಲಾಗಿದೆ.

ಗುಜರಾತ್ ಗಲಭೆ ಕುರಿತ ಸಾಕ್ಷ್ಯಚಿತ್ರಕ್ಕೆ ನಿಷೇಧ



2002ರ ಗುಜರಾತ್ ಗಲಭೆಯ ವಸ್ತುವಾಗುಳ್ಳ 'ಫೈನಲ್ ಸಲ್ಯೂಷನ್' ಎಂಬ 208 ನಿಮಿಷಗಳ ಸಾಕ್ಷ್ಯಚಿತ್ರವನ್ನು ರಾಕೇಶ್ ಶರ್ಮಾ ಅವರು 2004ರಲ್ಲಿ ನಿರ್ದೇಶಿಸಿದ್ದರು. ಚಿತ್ರೀಕರಣದ ಸಮಯದಿಂದಲೂ ವಿರೋಧ ಎದುರಿಸಿದ್ದ ಶರ್ಮಾ ಅವರಿಗೆ, ಪ್ರಮಾಣಪತ್ರ ನೀಡಲು ಸೆನ್ಸಾರ್ ಮಂಡಳಿ ಒಪ್ಪಲಿಲ್ಲ. ಹಿಂದೂ–ಮುಸ್ಲಿಮರ ಮಧ್ಯೆ ದ್ವೇಷವನ್ನು ಹರಡುವ ಹಾಗೂ ಹಿಂಸೆಯನ್ನು ಪ್ರಚೋದಿಸುವ ಅಂಶಗಳಿವೆ ಎಂಬ ಕಾರಣ ನೀಡಿತ್ತು. ಮುಂಬೈ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಸಿನಿಮಾ ಪ್ರದರ್ಶಿಸಲು ನಿರಾಕರಿಸಲಾಯಿತು. ಸರ್ಕಾರವೂ ಈ ಚಿತ್ರಕ್ಕೆ ನಿಷೇಧ ಹೇರಿತು. ಮತ್ತೊಂದೆಡೆ, ಚಿತ್ರದ ಪರವಾಗಿ ಅಭಿಯಾನವೂ ಶುರುವಾಯಿತು. ಸೆನ್ಸಾರ್ ವಿರೋಧಿ ಅಭಿಯಾನದ ವೇದಿಕೆಯಲ್ಲಿ ಚಿತ್ರ ಪ್ರದರ್ಶಿಸಲಾಯಿತು. ಕೆಲವು ತಿಂಗಳ ಬಳಿಕ ಯುಪಿಎ ಸರ್ಕಾರವು ನಿಷೇಧವನ್ನು ವಾಪಸ್ ಪಡೆಯಿತು. ಚಿತ್ರದ ಯಾವ ಭಾಗಕ್ಕೂ ಕತ್ತರಿ ಹಾಕಲಿಲ್ಲ. ಆದರೆ, ಪ್ರಚಾರದ ಕೊರತೆಯಿಂದಾಗಿ, ಹೆಚ್ಚು ಜನರನ್ನು ತಲುಪಲು ಈ ಚಿತ್ರಕ್ಕೆ ಸಾಧ್ಯವಾಗಲಿಲ್ಲ.


ಪ್ರದರ್ಶನವಾಗದ 'ಇಂಡಿಯಾಸ್ ಡಾಟರ್'

ದೆಹಲಿಯಲ್ಲಿ 2012ರ ಡಿಸೆಂಬರ್‌ನಲ್ಲಿ ಫಿಸಿಯೋಥೆರಪಿ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಮತ್ತು ಹಲ್ಲೆಯ ಕುರಿತು ಬಿಬಿಸಿ, 'ಇಂಡಿಯಾಸ್ ಡಾಟರ್' ಎಂಬ ಹೆಸರಿನಲ್ಲಿ ಸಾಕ್ಷ್ಯಚಿತ್ರವನ್ನು ನಿರ್ಮಿಸಿತ್ತು. ಬ್ರಿಟನ್‌ನ ಸಿನಿಮಾ ನಿರ್ದೇಶಕ ಲೆಸ್ಲಿ ಉಡ್ವಿನ್ ಇದನ್ನು ನಿರ್ದೇಶಿಸಿದ್ದರು. ಕೃತ್ಯ, ಅದನ್ನು ಎಸಗಿದವರ ಬದುಕು, ಸಂತ್ರಸ್ತೆಯ ಮನೆಯವರ ಸಂದರ್ಶನ ಮುಂತಾದ ವಿಚಾರಗಳು ಸಾಕ್ಷ್ಯಚಿತ್ರದಲ್ಲಿ ಇದ್ದವು. ಆರೋಪಿಗಳಲ್ಲಿ ಒಬ್ಬನಾದ ಮುಕೇಶ್ ಸಿಂಗ್ ಸಂದರ್ಶನವೂ ಸಾಕ್ಷ್ಯಚಿತ್ರದಲ್ಲಿ ಇತ್ತು. ಈ ಸಂದರ್ಶನಕ್ಕೆ ಸರ್ಕಾರದ ಅನುಮತಿಯನ್ನು ಉಡ್ವಿನ್ ಅವರು ಪಡೆದಿಲ್ಲ ಎಂದೂ ಹೇಳಲಾಗಿತ್ತು.

ಸಾಕ್ಷ್ಯಚಿತ್ರವು ಸಂತ್ರಸ್ತೆಯ ಗುರುತು ಬಹಿರಂಗಪಡಿಸಿದೆ ಮತ್ತು ಅವರ ಚಿತ್ರವನ್ನು ಪ್ರದರ್ಶಿಸಿದೆ. ಇದು ಭಾರತ ಮತ್ತು ಬ್ರಿಟನ್‌ನ ನಿಯಮಗಳಿಗೆ ವಿರುದ್ಧ ಎಂದು ಭಾರತ ಸರ್ಕಾರ ಹೇಳಿತ್ತು. ದೇಶದಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಬಹುದು, ಅಪರಾಧಿಯನ್ನು ವೈಭವೀಕರಿಸಿದ್ದರಿಂದಾಗಿ ಅಪರಾಧ ಮನಸ್ಥಿತಿಯ ಜನರ ಮೇಲೆ ಇದು ಪ್ರಭಾವ ಬೀರಬಹುದು ಎಂಬುದು ಕೂಡ ನಿಷೇಧಕ್ಕೆ ಇತರ ಕಾರಣಗಳಾಗಿದ್ದವು.

'ಈ ಸಾಕ್ಷ್ಯಚಿತ್ರವು ಭಾರತವನ್ನು ಕೆಟ್ಟದಾಗಿ ಚಿತ್ರಿಸುವ ಉದ್ದೇಶ ಹೊಂದಿದೆ' ಎಂದು ಆಗ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ ವೆಂಕಯ್ಯ ನಾಯ್ಡು ಹೇಳಿದ್ದರು.

'ಮಜಫ್ಫರ್‌ನಗರ್ ಬಾಕಿ ಹೈ'



2013ರಲ್ಲಿ ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ ನಡೆದಿದ್ದ ಗಲಭೆಯನ್ನು ಚಿತ್ರಿಸುವ 'ಮಜಫ್ಫರ್‌ನಗರ್ ಬಾಕಿ ಹೈ' ಸಾಕ್ಷ್ಯಚಿತ್ರವು ವಿವಾದ ಸೃಷ್ಟಿಸಿತ್ತು. ನಕುಲ್ ಸಿಂಗ್ ಸಾಹ್ನಿ ನಿರ್ದೇಶನದ ಈ ಚಿತ್ರವನ್ನು ಕೆಲವು ವಿಶ್ವವಿದ್ಯಾಲಯಗಳಲ್ಲಿ ಪ್ರದರ್ಶಿಸುವ ಯತ್ನಗಳು ನಡೆದಿದ್ದವು. ಆದರೆ, ಎಬಿವಿಪಿ ವಿರೋಧದಿಂದಾಗಿ ಚಿತ್ರ ಪ್ರದರ್ಶನ ಸಾಧ್ಯವಾಗಲಿಲ್ಲ. ಇದು ದೆಹಲಿಯ ಜೆಎನ್‌ಯು ವಿದ್ಯಾರ್ಥಿ ಸಂಘ ಹಾಗೂ ಎಬಿವಿಪಿ ನಡುವೆ ಜಟಾಪಟಿಗೂ ಕಾರಣವಾಗಿತ್ತು. ಆದರೂ, 50ಕ್ಕೂ ನಗರಗಳಲ್ಲಿ ಚಿತ್ರ ಪ್ರದರ್ಶಿಸಲಾಗದೆ.ಅಪಾರ್ಟ್‌ಮೆಂಟ್‌ಗಳು, ತರಗತಿ ಕೋಣೆಗಳಲ್ಲೂ ಪ್ರದರ್ಶನ ಏರ್ಪಡಿಸಲಾಗಿತ್ತು. ತಮಿಳುನಾಡು, ಪಶ್ಚಿಮ ಬಂಗಾಳದಲ್ಲಿ ಪ್ರದರ್ಶನಕ್ಕೆ ತಡೆ ಒಡ್ಡಲಾಗಿತ್ತು.

ಪ್ರಮಾಣಪತ್ರ ಸಿಗಲಿಲ್ಲ, ರಾಷ್ಟ್ರಪ್ರಶಸ್ತಿ ಬಂತು

2010ರಲ್ಲಿ ನಿರ್ಮಾಣವಾದ 'ಇನ್‌ಶಾ ಅಲ್ಲಾ, ಫುಟ್ಬಾಲ್' ವಿಚಿತ್ರ ರೀತಿಯಲ್ಲಿ ವಿವಾದ ಸೃಷ್ಟಿ ಮಾಡಿದೆ. ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ಈ ಸಾಕ್ಷ್ಯಚಿತ್ರಕ್ಕೆ ಮೊದಲಿಗೆ 'ಎ' ಪ್ರಮಾಣಪತ್ರ ನೀಡಿತು. ಬಳಿಕ, ಸಾಕ್ಷ್ಯಚಿತ್ರವು ಬಿಡುಗಡೆಗೆ ಸಿದ್ಧವಾದಾಗ ಅದರ ಮೇಲೆ ನಿಷೇಧ ಹೇರಿತು.

ಕಾಶ್ಮೀರದ ಫುಟ್ಬಾಲ್ ಆಟಗಾರನೊಬ್ಬ ಆಡುವುದಕ್ಕೆ ಬ್ರೆಜಿಲ್‌ಗೆ ಹೋಗಲು ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸುತ್ತಾನೆ. ಆದರೆ, ಅವರ ತಂದೆಯು ಉಗ್ರಗಾಮಿಯಾಗಿದ್ದ ಎಂಬ ಕಾರಣಕ್ಕೆ ಎರಡು ವರ್ಷ ಪಾಸ್‌ಪೋರ್ಟ್ ಸಿಗುವುದಿಲ್ಲ. ಸಾಕ್ಷ್ಯಚಿತ್ರವು ಈ ಆಟಗಾರನ ಕುರಿತದ್ದಾಗಿದೆ. ಆಗ ಮುಖ್ಯಮಂತ್ರಿಯಾಗಿದ್ದ ಉಮರ್ ಅಬ್ದುಲ್ಲಾ ಮಧ್ಯಪ್ರವೇಶಿಸಿದ ನಂತರ ಫುಟ್ಬಾಲ್ ಆಟಗಾರ ಬಷರತ್ ಬಷೀರ್ ಬಾಬಾಗೆ ಪಾಸ್‌ಪೋರ್ಟ್ ಸಿಗುತ್ತದೆ.

ಸಾಕ್ಷ್ಯಚಿತ್ರಕ್ಕೆ ನಿಷೇಧ ಹೇರಿದ್ದರಿಂದಾಗಿ ನಿರ್ದೇಶಕ ಅಶ್ವಿನ್ ಕುಮಾರ್ ಅವರು ಚಿತ್ರವನ್ನು ಖಾಸಗಿಯಾಗಿ ಹಂಚಿಕೊಂಡಿದ್ದರು ಮತ್ತು ಇಂಟರ್‌ನೆಟ್‌ನಲ್ಲಿ ಪಾಸ್‌ವರ್ಡ್ ಹಾಕಿ ಅಪ್‌ಲೋಡ್ ಮಾಡಿದ್ದರು. ಆದರೆ, ಈ ಚಿತ್ರಕ್ಕೆ ಅದೇ ವರ್ಷ ಸಾಮಾಜಿಕ ಪರಿಣಾಮ ಬೀರುವ ಅತ್ಯುತ್ತಮ ಸಾಕ್ಷ್ಯಚಿತ್ರ ಎಂಬ ರಾಷ್ಟ್ರಪ್ರಶಸ್ತಿ ಸಿಕ್ಕಿತು. ಸರ್ಕಾರವನ್ನು ಕೆಟ್ಟದಾಗಿ ಚಿತ್ರಿಸಲಾಗಿದೆ ಎಂದು ಭಾವಿಸಿ ಸಿಬಿಎಫ್‌ಸಿ ಸಾಕ್ಷ್ಯಚಿತ್ರಕ್ಕೆ ಪ್ರಮಾಣಪತ್ರವನ್ನು ನಿರಾಕರಿಸಿತ್ತು.

'ಬ್ಯಾಟಲ್ ಫಾರ್ ಬನಾರಸ್'ಗೆ ಅಡ್ಡಿ

ರಾಷ್ಟ್ರ ಪ್ರಶಸ್ತಿ ವಿಜೇತ ನಿರ್ದೇಶಕ ಕಮಲ್ ಸ್ವರೂಪ್ ನಿರ್ದೇಶನದ 'ಬ್ಯಾಟಲ್ ಫಾರ್ ಬನಾರಸ್' ಸಾಕ್ಷ್ಯಚಿತ್ರಕ್ಕೆ ಪ್ರಮಾಣಪತ್ರ ನೀಡಲು ಸಿಬಿಎಫ್‌ಸಿ 2015ರಲ್ಲಿ ನಿರಾಕರಿಸಿತು. ಲೋಕಸಭೆಗೆ 2014ರಲ್ಲಿ ನಡೆದ ಚುನಾವಣೆಯಲ್ಲಿ ನರೇಂದ್ರ ಮೋದಿ ಮತ್ತು ಅರವಿಂದ ಕೇಜ್ರಿವಾಲ್ ನಡುವೆ ವಾರಾಣಸಿಯಲ್ಲಿ ಸ್ಪರ್ಧೆ ನಡೆದಿತ್ತು. ಈ ಸ್ಪರ್ಧೆಯ ಕುರಿತು ಸಾಕ್ಷ್ಯಚಿತ್ರ ನಿರ್ಮಿಸಲಾಗಿದೆ. ಚುನಾವಣಾ ಪ್ರಚಾರ ಸಂದರ್ಭದಲ್ಲಿ ವಾರಾಣಸಿಯಲ್ಲಿಯೇ ಇದ್ದ ಸ್ವರೂಪ್ ಮತ್ತು ಅವರ ತಂಡ ಚಿತ್ರೀಕರಣ ನಡೆಸಿತ್ತು.

'ಇದೊಂದು ರಾಜಕೀಯ ವಿಡಂಬನೆ. ಸಾಕ್ಷ್ಯಚಿತ್ರದಲ್ಲಿ ಎಲ್ಲ ರಾಜಕಾರಣಿಗಳ ವಿರುದ್ಧ ಮಾತನಾಡಲಾಗಿದೆ. ಆದರೆ, ಈ ಸಾಕ್ಷ್ಯಚಿತ್ರವು ಅರವಿಂದ ಕೇಜ್ರಿವಾಲ್ ಅವರ ಪರವಾಗಿದೆ. ಸಾಕ್ಷ್ಯಚಿತ್ರದಲ್ಲಿ ಬಳಸಿದ ಭಾಷೆಯು ಸಾರ್ವಜನಿಕವಾಗಿ ವೀಕ್ಷಿಸುವಂತೆ ಇಲ್ಲ ಎಂದು ನನ್ನ ತಂಡವು ಹೇಳಿದೆ. ಇದು ಸಿಬಿಎಫ್‌ಸಿ ಮಾರ್ಗಸೂಚಿಗೆ ಅನುಸಾರವಾಗಿ ಇಲ್ಲ' ಎಂದು ಸಿಬಿಎಫ್‌ಸಿಯ ಆಗಿನ ಅಧ್ಯಕ್ಷರು ಹೇಳಿದ್ದು ವರದಿಯಾಗಿತ್ತು.

ಸಿಬಿಎಫ್‌ಸಿ ಕ್ರಮವನ್ನು ಪ್ರಶ್ನಿಸಿ ಸ್ವರೂಪ್ ಅವರು ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಪ್ರಮಾಣಪತ್ರ ನೀಡುವುದಿಲ್ಲ ಎಂಬ ತೀರ್ಮಾನವನ್ನು ಹೈಕೋರ್ಟ್ 2018ರಲ್ಲಿ ರದ್ದು ಮಾಡಿತ್ತು.

ಆಧಾರ: ಪಿಟಿಐ, ಚಿತ್ರ–ಐಎಂಡಿಬಿ

ಸಿನಿ ಬಿಟ್ಸ್

'ಕಿಚ್ಚ' @ 27

ನಟ 'ಕಿಚ್ಚ' ಸುದೀಪ್ ಅವರು ಬಣ್ಣದ ಲೋಕಕ್ಕೆ ಪ್ರವೇಶಿಸಿ 27 ವರ್ಷ. ಈ ಸಂದರ್ಭದಲ್ಲಿ ತಮ್ಮ ಸಿನಿಪಯಣದ ಹೆಜ್ಜೆಗಳನ್ನು ನೆನಪಿಸಿಕೊಂಡಿರುವ ಚಂದನವನದ 'ಅಭಿನಯ ಚಕ್ರವರ್ತಿ', ಇದೊಂದು ಸ್ಮರಣೀಯವಾದ ಪಯಣ ಎಂದಿದ್ದಾರೆ.

1996 ಜನವರಿ 31ರಂದು ಕಂಠೀರವ ಸ್ಟುಡಿಯೊದಿಂದ ಸುದೀಪ್ ಅವರ ಸಿನಿಪಯಣ ಆರಂಭ ವಾಗಿತ್ತು. ಅಂದು 'ಬ್ರಹ್ಮ' ಚಿತ್ರದ ಮೂಲಕ ಸುದೀಪ್ ಬಣ್ಣದಲೋಕ ಪ್ರವೇಶಿಸಿದ್ದರು. 1997ರಲ್ಲಿ ಬಿಡುಗಡೆಯಾದ 'ತಾಯವ್ವ' ಮುಖಾಂತರ ಮೊದಲ ಬಾರಿಗೆ ತೆರೆ ಮೇಲೆ ಕಾಣಿಸಿಕೊಂಡರು.

'ಖಂಡಿತವಾಗಿಯೂ ಇದೊಂದು ಸ್ಮರಣೀಯ ಪಯಣ. ನೂರಾರು ಅದ್ಭುತ ಪ್ರತಿಭೆಗಳುಳ್ಳ ಈ ಸಿನಿಮಾ ಕ್ಷೇತ್ರದಲ್ಲಿ 27 ವರ್ಷಗಳನ್ನು ಪೂರೈಸಿರುವುದು ಸಂತೋಷ ತಂದಿದೆ. ಪ್ರತಿಯೊಂದು ಹೆಜ್ಜೆಯಲ್ಲಿ ನನ್ನ ಬೆನ್ನಿಗೆ ನಿಂತ ಗೆಳೆಯರಿಗೆ, ಕುಟುಂಬದ ಸದಸ್ಯರಿಗೆ, ಅವಕಾಶ ನೀಡಿದ ಕನ್ನಡ ಸಿನಿಮಾ ರಂಗಕ್ಕೆ ಧನ್ಯವಾದ. ನನ್ನನ್ನು ನಂಬಿ ಸಿನಿಮಾಗಳಲ್ಲಿ ಅವಕಾಶ ನೀಡಿದ ಹಿಂದಿ, ತಮಿಳು, ತೆಲುಗು ಚಿತ್ರರಂಗದವರಿಗೂ ಧನ್ಯವಾದ ಹೇಳದಿದ್ದರೆ ಈ ಮಾತು ಅಪೂರ್ಣ' ಎಂದು ಸುದೀಪ್ ಟ್ವೀಟ್ ಮಾಡಿದ್ದಾರೆ.

'ವಿಕ್ರಾಂತ್ ರೋಣ' ರಿಲೀಸ್ ಆಗಿ ಆರು ತಿಂಗಳು ಕಳೆದಿದ್ದರೂ, ತಮ್ಮ ಮುಂದಿನ ಪ್ರಾಜೆಕ್ಟ್ ಯಾವುದು ಎನ್ನುವುದನ್ನು ಸುದೀಪ್ ಇಲ್ಲಿಯವರೆಗೂ ಘೋಷಿಸಿಲ್ಲ. ಇತ್ತೀಚೆಗೆ ಸುದ್ದಿಗೋಷ್ಠಿಯೊಂದರಲ್ಲಿ 'ಇನ್ನೂ ಅನೌನ್ಸ್ ಮಾಡಿಲ್ಲ ಅಂದರೆ ಏನೋ ನಡೀತಾ ಇದೆ ಎಂದರ್ಥವಲ್ಲವೇ? ಅಡುಗೆ ತಯಾರಾಗಲು ಕೊಂಚ ಸಮಯ ತೆಗೆದುಕೊಳ್ಳುತ್ತಿದೆ. ಬಡಿಸುತ್ತೇನೆ' ಎನ್ನುವ ಮೂಲಕ ತಮ್ಮ ಮುಂದಿನ ಪ್ರಾಜೆಕ್ಟ್ ಕುರಿತು ಮಾಹಿತಿ ನೀಡಿದ್ದರು. ಈ ನಡುವೆ ಹೊಂಬಾಳೆ ಫಿಲ್ಮ್ಸ್ ಸಂಸ್ಥೆ ಸುದೀಪ್ ಅವರ ಮುಂದಿನ ಚಿತ್ರ ನಿರ್ಮಾಣ ಮಾಡಲಿದೆ ಎನ್ನುವ ಮಾತು ಗಾಂಧಿನಗರದಲ್ಲಿ ಹರಿದಾಡುತ್ತಿದೆ.


ಸುದೀಪ್

'ಲಂಬೋದರ ವಿವಾಹ' ಶೀಘ್ರ

ಸೌರಭ ಕುಲಕರ್ಣಿ ಚೊಚ್ಚಲ ನಿರ್ದೇಶನದ ಸಿನಿಮಾ 'ಎಸ್.ಎಲ್.ವಿ' ಬಿಡುಗಡೆಗೆ ಸಜ್ಜಾಗಿದೆ. ರಂಗಭೂಮಿ-ಕಿರುತೆರೆ ನಟ ಅಂಜನ್ ಎ. ಭಾರದ್ವಾಜ್ ನಾಯಕ ಮತ್ತು ಖ್ಯಾತ ನಟ ಮಂಡ್ಯ ರಮೇಶ್ ಪುತ್ರಿ ದಿಶಾ ರಮೇಶ್ ಈ ಚಿತ್ರದ ನಾಯಕಿ. ಚಿತ್ರವು ಕಳೆದ ಡಿಸೆಂಬರ್‌ನಲ್ಲಿ ಗಲ್ಫ್ ರಾಷ್ಟ್ರಗಳಲ್ಲಿ ವಿಶೇಷ ಪ್ರದರ್ಶನಗಳನ್ನು ಕಂಡಿದೆ.

ಎಸ್.ಎಲ್.ವಿ. ಎಂದರೆ 'ಸಿರಿ ಲಂಬೋದರ ವಿವಾಹ'. 'ಸಿರಿ' ಹಾಗೂ 'ಲಂಬೋದರ' ಜೋಡಿಯ ವಿವಾಹ ಮಾಡಿಸಲು ನಾಯಕ-ನಾಯಕಿ ಸಿದ್ಧರಾಗುತ್ತಾರೆ. ಅಲ್ಲಿ ನಡೆಯುವ ಒಂದಷ್ಟು ಹಾಸ್ಯ, ಭಾವನಾತ್ಮಕ ಸನ್ನಿವೇಶಗಳ ಮಿಶ್ರಣವೇ 'ಎಸ್.ಎಲ್.ವಿ' ಎನ್ನುತ್ತಾರೆ ನಿರ್ದೇಶಕರು. ತಾರಾಂಗಣದಲ್ಲಿ ರಾಜೇಶ್ ನಟರಂಗ, ಸುಂದರ್ ವೀಣಾ, ಬಲ ರಾಜವಾಡಿ, ರೋಹಿತ್ ನಾಗೇಶ್, ಪಿ.ಡಿ. ಸತೀಶ್‌ಚಂದ್ರ, ಸದಾನಂದ ಕಾಳೆ, 'ಗಿಚ್ಚಿ ಗಿಲಿಗಿಲಿ' ಖ್ಯಾತಿಯ ಶಿವು ಇದ್ದಾರೆ. ವರ್ಸ್ಯಾಟೋ ವೆಂಚರ್ಸ್, ಪವಮಾನ ಕ್ರಿಯೇಷನ್ಸ್, ಫೋರೆಸ್ ನೆಟ್‌ವರ್ಕ್ ಸಲ್ಯೂಷನ್ಸ್ ಹಾಗೂ ಧೂಪದ ದೃಶ್ಯ ಬ್ಯಾನರ್‌ಗಳ ಅಡಿಯಲ್ಲಿ ಚಿತ್ರ ತಯಾರಾಗಿದೆ.

ಕಿಟ್ಟಿ ಕೌಶಿಕ್ ಅವರ ಛಾಯಾಗ್ರಹಣ, ಸಂಘರ್ಷ್ ಕುಮಾರ್ ಅವರ ಸಂಗೀತ ನಿರ್ದೇಶನ, ವಿನೋದ್ ಅವರ ಸಾಹಸ ನಿರ್ದೇಶನ, ಗಂಗಮ್ ರಾಜು ಅವರ ನೃತ್ಯ ಸಂಯೋಜನೆ, ನಮ್ಮನೆ ಪ್ರೊಡಕ್ಷನ್ಸ್ ತಂಡದ ಕ್ರಿಯಾಶೀಲತೆ ಚಿತ್ರದಲ್ಲಿದೆಯಂತೆ.


ದಿಶಾ ರಮೇಶ್

ಬೆಂಗಳೂರಲ್ಲಿ ಕನ್ನಡ ಚಲನಚಿತ್ರ ಕಪ್

ಮೈಸೂರಿನಲ್ಲಿ ಫೆ.11 ಹಾಗೂ 12ರಂದು ನಡೆಯಬೇಕಿದ್ದ ಕನ್ನಡ ಚಲನಚಿತ್ರ ಕಪ್(ಕೆಸಿಸಿ) 3ನೇ ಆವೃತ್ತಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸ್ಥಳಾಂತರವಾಗಿದೆ. ಪಂದ್ಯಾವಳಿಯ ದಿನಾಂಕಗಳೂ ಬದಲಾಗಿದ್ದು ಫೆ.24 ಮತ್ತು 25ರಂದು ನಡೆಯಲಿದೆ. ಈ ಬಾರಿಯ ಕೆಸಿಸಿಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರಾದ ಬ್ರಯನ್ ಲಾರಾ, ಸುರೇಶ್ ರೈನಾ, ಕ್ರಿಸ್ ಗೇಲ್, ಬದರೀನಾಥ್, ಹರ್ಷಲ್ ಗಿಬ್ಸ್, ತಿಲಕರತ್ನೆ ದಿಲ್ಶಾನ್ ಆಡಲಿದ್ದಾರೆ. ಒಟ್ಟು ಆರು ತಂಡಗಳು ಕೆಸಿಸಿಯಲ್ಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಶಾರುಕ್ ಖಾನ್–ದೀಪಿಕಾ ಪಡುಕೋಣೆ ತಾರಾಗಣದ ಬಾಲಿವುಡ್ ಚಿತ್ರ 'ಪಠಾಣ್' ಬಿಡುಗಡೆಯಾಗಿ, ದಾಖಲೆಗಳನ್ನು ಮುರಿದು ಯಶಸ್ವಿಯಾಗಿ ಪ್ರದರ್ಶನವಾಗುತ್ತಿದೆ. ಬಿಡುಗಡೆಗೂ ಮುನ್ನ, ಚಿತ್ರವನ್ನು ನಿಷೇಧಿಸಬೇಕು ಎಂಬ ಕೂಗು ಜೋರಾಗಿತ್ತು. ಚಿತ್ರ ನೋಡಿದ ಪ್ರೇಕ್ಷಕರು ನಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ ಎಂದು ಹೇಳಲಾಗುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಯೂಟ್ಯೂಬ್ ವಾಹಿನಿಗಳ ವಿಡಿಯೊಗಳನ್ನು ಹಲವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಆದರೆ ಇವು ಹಳೆಯ ವಿಡಿಯೊಗಳು.



ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ತುಣುಕುಗಳು 'ಫಿಲ್ಮಿಫೀವರ್' ಹಾಗೂ 'ಬಾಲಿವುಡ್‌ವಾಲಾ' ಹೆಸರಿನ ಯೂಟ್ಯೂಬ್ ವಾಹಿನಿಗಳಿಗೆ ಸಂಬಂಧಿಸಿದ ಹಳೆಯ ವಿಡಿಯೊಗಳು ಎಂದು 'ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಈ ಎರಡೂ ವಾಹಿನಿಗಳಲ್ಲಿ ಪ್ರಸಾರವಾಗಿರುವ ವಿಡಿಯೊಗಳು, 'ಬ್ರಹ್ಮಾಸ್ತ್ರ' ಹಾಗೂ 'ರೂಹಿ' ಸಿನಿಮಾಗಳಿಗೆ ಪ್ರೇಕ್ಷಕರು ನೀಡಿದ ಪ್ರತಿಕ್ರಿಯೆಗಳು ಎಂದು ವೆಬ್‌ಸೈಟ್ ವರದಿ ಮಾಡಿದೆ. ಬೇರೆ ಸಿನಿಮಾಗಳಿಗೆ ಜನರು ನೀಡಿದ ಪ್ರತಿಕ್ರಿಯೆಗಳನ್ನೇ ಪಠಾಣ್ ಸಿನಿಮಾದ ಪ್ರತಿಕ್ರಿಯೆಗಳು ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಮತ್ವತೆ

ಅಳಬೇಕು ನಗಬೇಕು, ಸಮತೆ ಶಮವಿರಬೇಕು |
ಹೊಳೆಯ ನೆರೆವೊಲು ಹೃದಯರಸ ಹರಿಯಬೇಕು
ಅಲೆಯಿನಲುಗದ ಬಂಡೆಯೊಲಾತ್ಮವಿರಬೇಕು |
ತಿಳಿದವರ ಚರಿತವದು – ಮಂಕುತಿಮ್ಮ || 812 ||

ಪದ-ಅರ್ಥ: ಶಮವಿರಬೇಕು = ಶಮವು(ನಿಗ್ರಹವು) + ಇರಬೇಕು, ನೆರೆವೊಲು = ನೆರೆ(ಪ್ರವಾಹ) + ಒಲು, ಅಲೆಯಿನಲುಗದ = ಅಲೆಯಿನ್ (ಅಲೆಯಿಂದ) + ಅಲುಗದ, ಬಂಡೆಯೊಲಾತ್ಮವಿರಬೇಕು = ಬಂಡೆಯ + ಒಲು + ಆತ್ಮವು + ಇರಬೇಕ ತಿಳಿದವರ = ಜ್ಞಾನಿಗಳ.

ವಾಚ್ಯಾರ್ಥ: ಸಮಾಜದಲ್ಲಿ ಬದುಕುವಾಗ ಅಳಬೇಕು, ನಗಬೇಕು ಆದರೆ ಸಮತೆ, ನಿಗ್ರಹವೂ ಇರ ಬೇಕು. ಹೃದಯದ ಭಾವನೆಗಳು ನದಿಯ ಪ್ರವಾಹದಂತೆ ಹರಿದರೂ, ಆತ್ಮ ಮಾತ್ರ ಅಲುಗದ ಬಂಡೆಯಂತೆ ಸ್ಥಿರವಾಗಿರಬೇಕು. ಇದು ಜ್ಞಾನಿಗಳ ನಡೆ.

ವಿವರಣೆ: ಶ್ರೀರಾಮಕೃಷ್ಣರು ತೀರಿಹೋದ ಮೇಲೆ, ವರ್ಷಾಬ್ಧಿಕದ ಕಾರ್ಯ ಮುಗಿದು ಕಾಮಾರಪುಕುರಕ್ಕೆ ಬಂದ ಶ್ರೀಮಾತೆ ಶಾರದಾದೇವಿಯವರಿಗೆ ಕೆಲವು ಕಾಲ ತುಂಬ ಕಷ್ಟ. ದಕ್ಷಿಣೇಶ್ವರ ದೇವಸ್ಥಾನದ ದೀನಾನಾಥ ಎನ್ನುವ ಉಸ್ತುವಾರಿ, ಶಾರದಾಮಾತೆಯವರಿಗೆ ಕಳುಹಿಸುತ್ತಿದ್ದ ಏಳು ರೂಪಾಯಿಯನ್ನು ನಿಲ್ಲಿಸಿಬಿಟ್ಟ. ಮನೆಯಲ್ಲಿದ್ದ ಬತ್ತವನ್ನು ತಾವೇ ಒನಕೆಯಿಂದ ಕುಟ್ಟಿ ಅಕ್ಕಿ ಮಾಡಿಕೊಳ್ಳುತ್ತಿದ್ದರು. ಉಪ್ಪು ಇಲ್ಲ, ತರಕಾರಿ ಇಲ್ಲ. ಸಪ್ಪೆಯಾದ ಗಂಜಿಯೂಟ. ತಾವೇ ಕಷ್ಟಪಟ್ಟು ಮಣ್ಣು ಅಗೆದು ತರಕಾರಿ, ಸೊಪ್ಪು ಬೆಳೆದುಕೊಳ್ಳಬೇಕು. ಅದೇ ಅವರಿಗೆ ಆಹಾರ. ರಾತ್ರಿ ಹೊತ್ತಿನಲ್ಲಿ ಕೆಲವೊಮ್ಮೆ ದೀಪವಿಲ್ಲ. ಕುಡಿಯಲು ಹಾಲು ಮೊಸರಿಲ್ಲ. ಉಡುವುದಕ್ಕೆ ಇದ್ದದ್ದು ಎರಡೇ ಸೀರೆ. ಅದೂ ಹರಿದದ್ದು. ಹರಿದ ಭಾಗ ಇನ್ನೂ ಹರಿಯದಂತೆ ತಾವೇ ಹೊಲಿದುಕೊಳ್ಳುತ್ತಿದ್ದರು. ಆದರೆ ಈ ಭೌತಿಕ ಕೊರತೆಗಳಿಂದ ದು:ಖವಿಲ್ಲ. ದಕ್ಷಿಣೇಶ್ವರದಿಂದ ಸಾಧು ಸಂತರು ಬಂದರೆ ಅತ್ಯಂತ ಸಂತೋಷ. ಅವರನ್ನು ಪ್ರೀತಿಯಿಂದ ಆದರಿಸಿ, ತನಗೆ ಮಾಡಿಕೊಂಡಿದ್ದನ್ನೇ ಅವರಿಗೂ ಬಡಿಸುವರು. ತನ್ನ ತಮ್ಮ ಚಿಕ್ಕ ವಯಸ್ಸಿನ ಹೆಂಡತಿಯನ್ನು ಬಿಟ್ಟು ಕಣ್ಣು ಮುಚ್ಚಿದಾಗ ಅವನ ಹೆಂಡತಿಯ, ಮಗುವಿನ ಭಾರವನ್ನು ಹೊತ್ತರು. ತನ್ನ ಮಗನಂತೆಯೇ ಇದ್ದ ವಿವೇಕಾನಂದರು ಕಾಲವಾದಾಗ, ಮಗಳಂತೆಯೇ ಭಾವಿಸಿದ್ದ ಸೋದರಿ ನಿವೇದಿತಾ ತಮ್ಮ ಕಣ್ಣ ಮುಂದೆಯೇ ತೀರಿಹೋದಾಗ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು. ಆದರೆ ಕೆಲದಿನಗಳಲ್ಲೇ ಅದು ಶ್ರೀರಾಮಕೃಷ್ಣರ ಲೀಲೆ ಎಂದು ಮತ್ತೆ ಶಾಂತತೆಯನ್ನು ತಳೆದರು. ತಮ್ಮನ ಮಗಳು, ತಾನು ಬೆಳೆಸಿದ ಮಗು, ರಾಧುವಿನ ಮದುವೆಯನ್ನು ಮಾಡುವಾಗ ತೋರಿದ ಉತ್ಸಾಹವನ್ನು ಕಂಡವರು ಶ್ರೀಮಾತೆಗೂ ಇಷ್ಟು ಮೋಹವೇ ಎಂದುಕೊಂಡರು. ಆದರೆ ಅದೂ ಕೇವಲ ಕೆಲದಿನಗಳು ಮಾತ್ರ. ಅವರ ಮನಸ್ಸಿನ ನಿರಾಳತೆ, ಶಾಂತತೆಯೇ ಅವರ ಸ್ಥಾಯೀ ಭಾವ. ಕಗ್ಗದ ನಾಲ್ಕು ಸಾಲುಗಳು ಶ್ರೀಮಾತೆಯವರ ಜೀವನಕ್ಕೆ ನಿದರ್ಶನವೆನ್ನುವಂತಿವೆ. ಅವರು ಅಳಲಿಲ್ಲವೆ ನಗಲಿಲ್ಲವೇ? ಅತ್ತರು, ನಕ್ಕರು. ಆದರೆ ಯಾವುದೂ ಅವರನ್ನು ನಲುಗಿಸಲ್ಲ. ಯಾಕೆಂದರೆ ಮನದಲ್ಲಿ ಆ ನಿಗ್ರಹಶಕ್ತಿಯಿತ್ತು. ದು:ಖಬಂದಾಗ, ಸಂತೋಷ ಕಂಡಾಗ ಹೃದಯದ ಭಾವ, ಪ್ರವಾಹ ಬಂದ ನದಿಯಂತೆ ಹರಿದಿತ್ತು. ಆದರೆ ಒಳಗಡೆ ಎಂದೂ ಅಲುಗದ ಬಂಡೆಯಂತೆ ಆತ್ಮಶಕ್ತಿ ಸ್ಥಿರವಾಗಿತ್ತು. ಇದೇ ಶ್ರೀಮಾತೆಯಂತಹ ಮಹಾತ್ಮರ ಜೀವಿತದ ಲಕ್ಷಣ. ಇದೇ ಸಮತ್ವತೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಫೆಬ್ರುವರಿ 1, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಏಕಾದಶಿ ಗಂ. 14-03 ನಕ್ಷತ್ರ: ಮೃಗಶಿರ ಗಂ. 27-23 ಯೋಗ: ಐಂದ್ರ ಗಂ. 11-29, ಕರಣ: ವಿಷ್ಟಿ ಗಂ. 14-03, ಮಕರ ಮಾಸದ 18 ನೇ ದಿನ. ರಾಹುಕಾಲ : ಮಧ್ಯಾಹ್ನ 12-00 –01-30
ಸೂರ್ಯೋದಯ : 07-01 ಸೂರ್ಯಾಸ್ತ : 06-27, ಮುಸ್ಲಿಂ ದಿನಾಂಕ : 09 ರಜಬ್
ದಿನ ವಿಶೇಷ : ಜಯ ಏಕಾದಶಿ, ಭೈಮಿ ಏಕಾದಶಿ (ಬಂಗಾಳ)
ಅದೃಷ್ಟ ಸಂಖ್ಯೆ : 2, 8

ಮೇಷ: ಅನವಶ್ಯಕವಾಗಿ ಋಣಾತ್ಮಕವಾಗಿ ಚಿಂತಿಸದಿರಿ. ಬಹಳ ದಿನಗಳ ಬಳಿಕ ಬಂಧು-ಮಿತ್ರರ ಜೊತೆಗಿನ ಒಡನಾಟ ಸಂತೋಷ ತರಲಿದೆ. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಓಡಾಡುವ ಸಂದರ್ಭ ಎದುರಾಗುವುದು.

ವೃಷಭ: ಹೊಸ ಮನೆಯನ್ನು ಕೊಳ್ಳುವ ಬಗ್ಗೆ ದಲ್ಲಾಳಿಗಳೊಂದಿಗೆ ಮಾತುಕತೆ ನಡೆಸಬಹುದು. ಕಚೇರಿಯಲ್ಲಿ ಸಹೋದ್ಯೋಗಿಗಳ ನಡುವೆ ಇದ್ದ ಮನಸ್ತಾಪ ಮುಕ್ತ ಹಾಗೂ ಸ್ಪಷ್ಟ ಮಾತುಕತೆಗಳಿಂದ ಬಗೆಹರಿಸುವಿರಿ.

ಮಿಥುನ: ಯಶಸ್ಸಿಗೆ ಕಾರಣರಾದವರನ್ನು ಮತ್ತು ಹೆಗಲು ಕೊಟ್ಟವರನ್ನು ಕಾರ್ಯ ಮುಗಿಯುವವರೆಗೆ ಜೊತೆಯಲ್ಲಿಯೆ ಇರಿಸಿಕೊಳ್ಳಿ. ಸವಾಲೊಡ್ಡುವ ಸನ್ನಿವೇಶಗಳು ಸಹೋದರಿ ಅಥವಾ ಭಾವನ ಬಳಿಯಲ್ಲಿ ಎದುರಾಗಬಹುದು.

ಕರ್ಕಾಟಕ: ಅವಶ್ಯಕವಾಗಿ ಬೇಕಾಗಿರುವ ಮತ್ತು ನೆಚ್ಚಿನ ಉದ್ಯೋಗ ದೊರಕಿಸಿಕೊಳ್ಳಲು ತೀವ್ರ ಪ್ರಯತ್ನ ನಡೆಸಬೇಕಾಗುತ್ತದೆ. ಸ್ವಲ್ಪ ಜಾಣತನ ಪ್ರದರ್ಶಿಸಿ. ಆಂಜನೇಯನ ಅನುಗ್ರಹ ಪಡೆದಲ್ಲಿ ಮಾನಸಿಕ ಧೈರ್ಯ ಹೆಚ್ಚಾಗುವುದು.

ಸಿಂಹ: ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ ಸಿಗುತ್ತದೆ. ವಿಪರೀತ ಕೆಲಸಗಳಿಂದ ವಿಶ್ರಾಂತಿ ಬಯಸುವಿರಿ. ಆರೋಗ್ಯ ಕಾಪಾಡಿಕೊಳ್ಳುವುದರ ಬಗ್ಗೆ ಮುಂಜಾಗ್ರತೆ ತೆಗೆದುಕೊಳ್ಳಿರಿ.

ಕನ್ಯಾ: ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವುದು. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿದೆ. ಆಮದು ಆಹಾರ ಪದಾರ್ಥಗಳಿಂದ ಹಾಗೂ ಕಾಡು ಉತ್ಪನ್ನಗಳ ಮಾರಾಟದಿಂದ ಲಾಭ ಸಿಗಲಿದೆ.

ತುಲಾ: ಸ್ನೇಹಿತರ ಹಾಗೂ ಕುಟುಂಬದವರ ಸಲಹೆ ಮೇರೆಗೆ ಕೆಲವು ಉತ್ತಮ ಬದಲಾವಣೆ ಮಾಡಿಕೊಳ್ಳುವಿರಿ. ನಿಧಾನಗತಿಯಲ್ಲಿ ತಂದೆಯವರ ಆರೋಗ್ಯ ಉತ್ತಮವಾಗಲಿದೆ. ವಿದ್ಯಾಭ್ಯಾಸದ ಬಗ್ಗೆ ಗಮನಹರಿಸಿ.

ವೃಶ್ಚಿಕ: ಕೌಟುಂಬಿಕವಾಗಿ ಈಗಿರುವ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಿಂದ ಲಾಭ. ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ರೈತವರ್ಗದವರಿಗೆ ಅನುಕೂಲಕರ ದಿನಗಳು.

ಧನು: ಕೆಲ ನಿರ್ಧಾರಗಳನ್ನು ಬದಲಾಯಿಸಿಕೊಳ್ಳುವುದರಿಂದ ಕೆಲಸ ಕಾರ್ಯಗಳು ಸುಲಲಿತವಾಗಿ ನೆರವೇರುವುದು. ಕಾಫಿ ಬೆಳೆಗಾರರಿಗೆ ಸಂತೋಷದ ವಾತಾವರಣ ಇರುತ್ತದೆ. ಖರ್ಚು ವೆಚ್ಚಗಳಲ್ಲಿ ಹಿಡಿತವಿರಲಿ.

ಮಕರ: ಪಶು ಸಂಗೋಪನೆಯಲ್ಲಿ ಮತ್ತು ಪಶು ಆಹಾರ ಮಾರಾಟಗಾರರಿಗೆ ಅಧಿಕ ಲಾಭ ಕಂಡುಬರಲಿದೆ. ಉದ್ಯೋಗರಂಗದಲ್ಲಿ ಕೆಲವು ಅನಿರೀಕ್ಷಿತ ಘಟನೆಗಳು ನಡೆದು, ವಿಶೇಷ ವ್ಯಕ್ತಿಯಾಗಿ ಗುರುತಿಸುವಂತಾಗಲಿದೆ.

ಕುಂಭ: ಆಲೋಚನೆಯ ಹೊಸ ಕೆಲಸ ಕಾರ್ಯಗಳು ಸ್ವಲ್ಪ ತಡವಾಗಿ ಪ್ರಾರಂಭವಾದರೂ, ದಿನದ ಸ್ವಲ್ಪ ಸಮಯ ಕಳೆದ ಹಾಗೇ ಎಲ್ಲವೂ ಆಸೆಗೆ ತಕ್ಕಂತೆ ನಡೆಯಲಿದೆ. ಯಾವುದೇ ರೀತಿಯ ಅಡೆತಡೆ, ತೊಂದರೆ ಇರಲಾರದು.


ಮೀನ: ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಪರಿಸ್ಥಿತಿಗೆ ಉತ್ತಮ. ಒತ್ತಡ ನಿವಾರಿಸಿಕೊಳ್ಳಲು ವಿಶ್ರಾಂತಿ ಪಡೆಯಿರಿ. ದೇವತಾ ಕಾರ್ಯದ ಸುಸಂದರ್ಭದಲ್ಲಿ ಕುಟುಂಬ ಸಂಬಂಧಗಳು ಗಟ್ಟಿಯಾಗುವುದು.

ಪದಬಂಧ 5217

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಲೋಹಾಂಶವುಳ್ಳ ಖನಿಜ ದ್ರವ್ಯ (3)
4.ಯುನಾನಿ ವೈದ್ಯನಿವನು (3)
5.ಜೊತೆಯಲ್ಲಿ ಪಾಠ ಕಲಿಯುತ್ತಿರುವವನು (4)
6.ರಾಯರು ನಡೆಸಿರುವ ಸಂಧಾನ (4)
8.ತಿಲಕದ ಬಳಿಯಿರುವ ಎಳ್ಳು (2)
10.ನೇಸರನ ಇನ್ನೊಂದು ಹೆಸರು (2)
13.ದಪ್ಪ ನೂಲಿನ ಹಾಸು (4)
14.ನಿಜವಾಗಿಯೂ ಈಕೆ ಶ್ರೀಕೃಷ್ಣನ ಪತ್ನಿ! (4)
15.ಬೇಡುವವ ಇಲ್ಲಿದ್ದಾನೆ (3)
16.ವನದಲ್ಲಿಯೇ ಪ್ರಕಟಗೊಂಡಿರುವ ತಾರುಣ್ಯ (3))

ಮೇಲಿಂದ ಕೆಳಕ್ಕೆ
1.ನಾ ಮುಂದು ತಾ ಮುಂದು ಎಂದು ನುಗ್ಗುವುದು (6)
2.ಪುರಾಣದಲ್ಲಿ ಸ್ವರ್ಗವಿರುವ ನಗರ (5)
3.ಪಾಯ ತೋಡುತ್ತಲೇ ಹೂಡಿರುವ ಯುಕ್ತಿ (3)
5.ಸೈನ್ಯದ ಮುಖ್ಯಾಧಿಕಾರಿ (4)
7.ಇದು ಚರಿತ್ರೆಗೆ ಸಂಬಂಧಿಸಿದುದು (6)
9.ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
11.ಲೋಹದ ಹಕ್ಕಿಯಲ್ಲಿನ ಪಯಣ (5)
12.ವ್ಯಾಕರಣ ಪ್ರಕ್ರಿಯೆಗೆ ಸಹಾಯಕವಾಗುವ ಅಕ್ಷರ (3)



5216ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖುಜುತೆ 3.ಗುರು
4.ಗಡಿಯಾರ 6.ವಿನಿಮಯ
8.ಕೆಸರು 11.ಮುದುಕ
13.ಪರಂಧಾಮ
17.ತಟವಟ 18.ಮಾಲಿ
19.ಕನ್ನಡಿ

ಮೇಲಿಂದ ಕೆಳಕ್ಕೆ:
1.ಖುತ್ವಿಕ್ಕು 2.ತೆಗಳಿಕೆ
3.ಗುಲಾಮ 5.ರವಿ
7.ಯವನ 9.ರುಸುಮು
10.ಸಂತಾಪ 12.ಕರ್ನಾಟಕ
14.ರಂಗೋಲಿ 15.ಮತ
16.ದಮ್ಮಡಿ

ಸುಡೊಕು 5603


7	9			3			6	
4					7			9
	8			9		1		7
		4			9		8	
	2			5				3
8			2				4	
	4			2		8		
			9					5
2		8		7			3	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5602 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಷೇರುಪೇಟೆ ವಹಿವಾಟು 49



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17648
ಇಂದಿನ ಅಂತ್ಯ	17662
▲	13
ದಿನದ ಕನಿಷ್ಠ	17735

ವಿನಿಮಯ ದರ

$ ಡಾಲರ್	81.88
£ ಪೌಂಡ್	101.03
€ ಯುರೊ	88.73
¥ ಯೆನ್ (100ಕ್ಕೆ)	62.94

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1620(1610)
ಸೋಯಾ (ರಿಫೈನ್ಡ್)	₹1170(1180)
ಸೂರ್ಯಕಾಂತಿ (ರಿಫೈನ್ಡ್)	₹1190(1190)
ಪಾಮೋಲಿನ್	₹930(940)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹139.50
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

2022ರಲ್ಲಿ ಚಿನ್ನಕ್ಕೆ ಬೇಡಿಕೆ ಅಲ್ಪ ಇಳಿಕೆ

ಮುಂಬೈ (ಪಿಟಿಐ): 2022ರಲ್ಲಿ ದೇಶದಲ್ಲಿ ಚಿನ್ನದ ಬೇಡಿಕೆಯು ಶೇಕಡ 2.92ರಷ್ಟು ತಗ್ಗಿದ್ದು, 774 ಟನ್‌ಗಳಿಗೆ ತಲುಪಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ತಿಳಿಸಿದೆ. 2023ರಲ್ಲಿ ಚಿನ್ನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಬರುವ ನಿರೀಕ್ಷೆ ಇದೆ ಎಂದು ಅದು ಹೇಳಿದೆ.

2021ರಲ್ಲಿ ಒಟ್ಟು 797.3 ಟನ್ ಚಿನ್ನಕ್ಕೆ ಬೇಡಿಕೆ ಬಂದಿತ್ತು ಎಂದು ಸಮಿತಿಯ ವಾರ್ಷಿಕ ವರದಿ ಹೇಳಿದೆ. 2022ರಲ್ಲಿ 600.4 ಟನ್ ಆಭರಣ ಚಿನ್ನಕ್ಕೆ ಬೇಡಿಕೆ ಬಂದಿತ್ತು. ಹೂಡಿಕೆಯ ಉದ್ದೇಶದಿಂದ ಒಟ್ಟು 173.6 ಟನ್ ಚಿನ್ನಕ್ಕೆ ಬೇಡಿಕೆ ಬಂದಿತ್ತು ಎಂದು ಸಮಿತಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಪಿ.ಆರ್. ಸೋಮಸುಂದರಂ ಹೇಳಿದ್ದಾರೆ.

ಜನವರಿಯಲ್ಲಿ ಎರಡನೆಯ ಅತಿಹೆಚ್ಚಿನ ವರಮಾನ

ಜಿಎಸ್‌ಟಿ ಸಂಗ್ರಹ ₹ 1.55 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಜನವರಿ ತಿಂಗಳಲ್ಲಿ ಆದ ವರಮಾನ ಸಂಗ್ರಹದ ಮೊತ್ತವು ₹ 1.55 ಲಕ್ಷ ಕೋಟಿಗಿಂತ ಹೆಚ್ಚಾಗಿದೆ. ಇದು ಜಿಎಸ್‌ಟಿ ಮೂಲಕ ತಿಂಗಳೊಂದರಲ್ಲಿ ಸಂಗ್ರಹವಾಗಿರುವ ಎರಡನೆಯ ಅತಿ ಹೆಚ್ಚಿನ ಮೊತ್ತ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

‘ಜನವರಿ 31ರವರೆಗೆ ಸಂಗ್ರಹವಾದ ಜಿಎಸ್‌ಟಿ ವರಮಾನವು ₹ 1,55,922 ಕೋಟಿ. ಇದರಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹ 28,963 ಕೋಟಿ. ರಾಜ್ಯಗಳ ಜಿಎಸ್‌ಟಿ ಪಾಲು ₹ 36,730 ಕೋಟಿ. ಏಕೀಕೃತ ಜಿಎಸ್‌ಟಿ ಪಾಲು ₹ 79,599 ಕೋಟಿ ಹಾಗೂ ಸೆಸ್ ಪಾಲು ₹ 10,630 ಕೋಟಿ’ ಎಂದು ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.



ಮಾರ್ಚ್ 31ಕ್ಕೆ ಕೊನೆಗೊಳ್ಳಬೇಕಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜನವರಿವರೆಗೆ ಸಂಗ್ರಹವಾಗಿರುವ ವರಮಾನವು ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಸಂಗ್ರಹವಾಗಿದ್ದ ವರಮಾನಕ್ಕೆ ಹೋಲಿಸಿದರೆ ಶೇಕಡ 24ರಷ್ಟು ಹೆಚ್ಚು.

ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಎಸ್‌ಟಿ ವರಮಾನ ಸಂಗ್ರಹವು ₹ 1.50 ಲಕ್ಷ ಕೋಟಿಗಿಂತ ಹೆಚ್ಚಾಗಿರುವುದು ಇದು ಮೂರನೆಯ ಬಾರಿ. 2022ರ ಏಪ್ರಿಲ್‌ನಲ್ಲಿ ಸಂಗ್ರಹವಾಗಿದ್ದ ₹ 1.68 ಲಕ್ಷ ಕೋಟಿ ಜಿಎಸ್‌ಟಿ ವರಮಾನವು ಇದುವರೆಗಿನ ಗರಿಷ್ಠ ಮೊತ್ತ.

‘ಕಳೆದ ಒಂದು ವರ್ಷದ ಅವಧಿಯಲ್ಲಿ ಜಿಎಸ್‌ಟಿ ಸಂಗ್ರಹ ಹೆಚ್ಚಿಸಲು ಹಾಗೂ ತೆರಿಗೆ ಪಾವತಿದಾರರು ತೆರಿಗೆ ನಿಯಮಗಳನ್ನು ಸರಿಯಾಗಿ ಪಾಲಿಸುವಂತೆ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಿಎಸ್‌ಟಿ ವಿವರಗಳನ್ನು ಸಲ್ಲಿಸುವ ಶೇಕಡಾವಾರು ಪ್ರಮಾಣ ಹೆಚ್ಚಾಗಿದೆ’ ಎಂದು ಸಚಿವಾಲಯವು ತಿಳಿಸಿದೆ.

ಅಕ್ಟೋಬರ್ - ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು 2.42 ಕೋಟಿ ಜಿಎಸ್‌ಟಿ ವಿವರಗಳು ಸಲ್ಲಿಕೆಯಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 2.19 ಕೋಟಿ ಜಿಎಸ್‌ಟಿ ವಿವರಗಳು ಸಲ್ಲಿಕೆಯಾಗಿದ್ದವು.

ಪ್ರಮುಖ ವಲಯಗಳಲ್ಲಿ ಶೇ 7.4ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಮೂಲಸೌಕರ್ಯಕ್ಕೆ ಸಂಬಂಧಿಸಿದ ಎಂಟು ವಲಯಗಳ ಬೆಳವಣಿಗೆಯು ಡಿಸೆಂಬರ್‌ನಲ್ಲಿ ಶೇಕಡ 7.4ಕ್ಕೆ ತಲುಪಿದೆ. ಇದು ಮೂರು ತಿಂಗಳ ಗರಿಷ್ಠ ಮಟ್ಟ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ 8 ವಲಯಗಳಲ್ಲಿ ಬೆಳವಣಿಗೆಯು ಶೇ 4.1ರಷ್ಟು ಇತ್ತು.

2022ರ ಡಿಸೆಂಬರ್‌ನಲ್ಲಿ ಕಲ್ಲಿದ್ದಲು, ರಸಗೊಬ್ಬರ, ಉಕ್ಕು ಮತ್ತು ವಿದ್ಯುತ್ ಉತ್ಪಾದನೆ ವಲಯಗಳಲ್ಲಿ ಉತ್ತಮ ಚಟುವಟಿಕೆ ದಾಖಲಾಗಿದ್ದು ಈ ಬೆಳವಣಿಗೆಗೆ ಪೂರಕವಾಗಿದೆ ಎಂದು ಅಧಿಕೃತ ಅಂಕಿ-ಅಂಶಗಳು ಹೇಳಿವೆ.

ಕಚ್ಚಾ ತೈಲ ಉತ್ಪಾದನೆಯು ಡಿಸೆಂಬರ್ ತಿಂಗಳಲ್ಲಿ ಶೇ 1.2ರಷ್ಟು ಕುಸಿತ ಕಂಡಿದೆ. 2022ರ ನವೆಂಬರ್‌ನಲ್ಲಿ ಎಂಟು ವಲಯಗಳಲ್ಲಿ ಉತ್ಪಾದನೆಯ ಪ್ರಮಾಣವು ಶೇ 5.7ರಷ್ಟು ಬೆಳವಣಿಗೆ ಕಂಡಿತ್ತು. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಎಂಟು ಮೂಲಸೌಕರ್ಯ ವಲಯಗಳ (ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್) ಬೆಳವಣಿಗೆ ಪ್ರಮಾಣವು ಶೇ 8ರಷ್ಟು ಆಗಿದೆ.

ಮುಂಬೈ ಧಾರಣೆ

ಶೇಂಗಾ 31-01-2023	
ಜಾವಾ 70/80(ಹೊಸ)	12200-12250
ಜಾವಾ 80/90(ಹೊಸ)	11200-11250
ದಪ್ಪ ಮಧ್ಯಪ್ರದೇಶ(ಹೊಸ)	10550-10650
ದಪ್ಪ ಗುಜರಾತ್(ಹೊಸ)	11650-11750
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1630(1620)
ಒಂದು ವಾರದ ಡೆಲಿವರಿ	1625(1615)
ಸೋಯಾ ಕಚ್ಚಾ	1075(1100)
ಪಾಮ್ ವಾರದ ಡೆಲಿವರಿ	928(938)
ಸೂರ್ಯಕಾಂತಿ ಎಣ್ಣೆ ಕಚ್ಚಾ	1080(1080)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	56650(56850)
ಬೆಳ್ಳಿ ಕೆ.ಜಿ	67700(68150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹383-666
ದ್ವಿತಳಿ (ಬಿ.ವಿ)	₹277-789

ಕೊಬ್ಬರಿ ಧಾರಣೆ


ಅರಸೀಕೆರೆ	₹10500-11410
ತುರುವೇಕೆರೆ	₹11100-11160

ಅದಾನಿ ಎಫ್‌ಪಿಒ: ಅಷ್ಟೂ ಷೇರುಗಳಿಗೆ ಬಿಡ್

ನವದೆಹಲಿ (ಪಿಟಿಐ): ಅದಾನಿ ಸಮೂಹದ ಪ್ರಮುಖ ಕಂಪನಿಯಾಗಿರುವ ಅದಾನಿ ಎಂಟರ್‌ಪ್ರೈಸಸ್‌ನ ₹ 20 ಸಾವಿರ ಕೋಟಿ ಮೌಲ್ಯದ ಷೇರು ಮಾರಾಟ ಪ್ರಕ್ರಿಯೆಯಲ್ಲಿ (ಎಫ್‌ಪಿಒ) ಮಂಗಳವಾರ ಅಂತ್ಯದ ಹೊತ್ತಿಗೆ ಅಷ್ಟೂ ಷೇರುಗಳಿಗೆ ಬಿಡ್‌ಗಳು ಸಲ್ಲಿಕೆಯಾಗಿವೆ.

ಮಾರಾಟಕ್ಕೆ ಒಟ್ಟು 4.55 ಕೋಟಿ ಷೇರುಗಳು ಇದ್ದವು. 4.62 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆಯಾಗಿವೆ. ಸಾಂಸ್ಥಿಕೇತರ ಹೂಡಿಕೆದಾರರು ತಮಗೆ ಮೀಸಲಾಗಿದ್ದ ಷೇರುಗಳ ಸಂಖ್ಯೆಗಿಂತ ಮೂರು ಪಟ್ಟು ಹೆಚ್ಚು ಷೇರುಗಳಿಗೆ ಬಿಡ್ ಸಲ್ಲಿಸಿದ್ದಾರೆ. ಅರ್ಹ ಸಾಂಸ್ಥಿಕ ಹೂಡಿಕೆದಾರರ ವಿಭಾಗದಲ್ಲಿ ಸರಿಸುಮಾರು ಅಷ್ಟೂ ಷೇರುಗಳಿಗೆ ಬಿಡ್ ಸಲ್ಲಿಕೆಯಾಗಿದೆ ಎಂದು ಮುಂಬೈ ಷೇರುಪೇಟೆಲ್ಲಿನ ವಿವರಗಳು ಹೇಳಿವೆ.ಆದರೆ, ಸಣ್ಣಹೂಡಿಕೆದಾರರು ಹಾಗೂ ಕಂಪನಿಯ ಉದ್ಯೋಗಿಗಳ ಕಡೆಯಿಂದ ಹೆಚ್ಚಿನ ಬಿಡ್ ಸಲ್ಲಿಕೆಯಾಗಿಲ್ಲ. ಸಣ್ಣ ಹೂಡಿಕೆದಾರರಿಗೆ ಮೀಸಲಾಗಿದ್ದ ಷೇರುಗಳಲ್ಲಿ ಶೇ 11ರಷ್ಟು ಷೇರುಗಳಿಗೆ, ನೌಕರರಿಗೆ ಮೀಸಲಾಗಿದ್ದ ಷೇರುಗಳಲ್ಲಿ ಶೇ 52ರಷ್ಟು ಷೇರುಗಳಿಗೆ ಮಾತ್ರ ಬಿಡ್ ಸಲ್ಲಿಕೆಯಾಗಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹರಿಣಾಕ್ಷ ನಾವಡ, ಎಣ್ಮಕಜೆ

- **ಪ್ರಶ್ನೆ:** ನಾನು ನನ್ನ ಹೆಸರಲ್ಲಿರುವ ಜಮೀನೊಂದನ್ನು ಮಾರುವವನಿದ್ದೇನೆ. ನನ್ನಿಂದ ಜಮೀನು ಖರೀದಿಸುವವರು, ನಗದು ರೂಪದಲ್ಲಷ್ಟೇ ವ್ಯವಹರಿಸುವುದಾಗಿ ಹೇಳುತ್ತಿದ್ದಾರೆ. ಒಟ್ಟಾರೆಯಾಗಿ ಜಮೀನು ₹ 25 ಲಕ್ಷಕ್ಕೆ ಮಾರಾಟವಾಗಬಹುದು. ಇದು ನಮ್ಮ ಭಾಗಶಃ ಕೃಷಿ ತೋಟ ಮತ್ತು ಇತರ ಖಾಲಿ ಪ್ರದೇಶವನ್ನು ಒಳಗೊಂಡಿದೆ. ಇದರಲ್ಲಿ ಒಂದಷ್ಟು ಭಾಗ ಮುಂಗಡ ನಗದು ಮತ್ತು ಬಾಕಿ ಮೊತ್ತ ರಿಜಿಸ್ಟ್ರೇಶನ್ ದಿವಸ ಸಂದಾಯ ಮಾಡುವವರಿದ್ದಾರೆ. ಈ ರೀತಿಯ ನಗದು ವ್ಯವಹಾರದಿಂದ ನಮಗೆ ಏನಾದರೂ ತೊಂದರೆ ಇದೆಯೇ? ತೆರಿಗೆ ಅನ್ವಯಿಸುತ್ತದೆಯೇ?

ಉತ್ತರ: ಕೇಂದ್ರ ಸರ್ಕಾರವು ನಗದು ವ್ಯವಹಾರವನ್ನು ಆದಷ್ಟರಮಟ್ಟಿಗೆ ನಿಯಂತ್ರಣದಲ್ಲಿರಿಸುವ ಉದ್ದೇಶದಿಂದ ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇಂತಹ ಕ್ರಮಗಳಲ್ಲಿ, ನಗದು ರೂಪದಲ್ಲಿನ ಯಾವುದೇ ಸ್ವೀಕೃತಿಗಳಿಗೆ ನಿರ್ಬಂಧ ಹಾಕಲಾಗಿದೆ.

ಯಾವುದೇ ಒಬ್ಬ ವ್ಯಕ್ತಿ, ಒಂದೇ ವ್ಯವಹಾರಕ್ಕೆ ಸಂಬಂಧಿಸಿ ಮತ್ತು ಒಂದು ನಿರ್ದಿಷ್ಟ ಘಟನೆಗೆ ಸಂಬಂಧಿಸಿ ಒಂದು ದಿನದಲ್ಲಿ ₹ 2 ಲಕ್ಷಕ್ಕಿಂತ ಅಧಿಕ ಮೊತ್ತ ನಗದು ಪಡೆಯುತ್ತಿದ್ದರೆ ಅದು ಆದಾಯ ತೆರಿಗೆಯ ನಿಯಮ ‘269 ಎಸ್ ಟಿ’ಯ ಉಲ್ಲಂಘನೆಯಾಗುತ್ತದೆ. ಇಂತಹ ಉಲ್ಲಂಘನೆಗೆ ಸಂಬಂಧಿಸಿ, ಪಡೆದ ಮೊತ್ತಕ್ಕೆ ಸಮಾನವಾದ ಮೊತ್ತದ ದಂಡ ಇರುತ್ತದೆ. ಇದನ್ನು ನಗದು ಸ್ವೀಕರಿಸಿದ ವ್ಯಕ್ತಿ ಅಥವಾ ಸಂಸ್ಥೆಗಳ ಮೇಲೆ ಹೇರಲಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಇಲ್ಲಿ ನಗದು ಪಾವತಿದಾರರಿಗೂ ತಮ್ಮ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿ ಬೇರೆ ನಿಯಮಗಳ ಅಡಿ ಕೆಲವೆಲ್ಲ ಪ್ರತಿಕೂಲ ಪರಿಣಾಮಗಳಿವೆ. ಜಮೀನು ವ್ಯವಹಾರವಲ್ಲದೆ, ಇತರ ಯಾವುದೇ ಕೊಡು-ಕೊಳ್ಳುವ ವ್ಯವಹಾರವಾಗಿದ್ದರೂ (ಉದಾ: ಚಿನ್ನ ಮಾರಾಟ, ಮದುವೆ ಸಮಾರಂಭದ ಸಭಾಂಗಣಕ್ಕಾಗಿರುವ ಬಾಡಿಗೆ ಸ್ವೀಕೃತಿ, ವೈದ್ಯಕೀಯ ವೆಚ್ಚದ ಸ್ವೀಕೃತಿ ಇತ್ಯಾದಿ ದಿನವಹಿ ವ್ಯವಹಾರಗಳು) ಕೇಂದ್ರ ಸರ್ಕಾರ ನಿರ್ದಿಷ್ಟ ವಿನಾಯಿತಿ ಕೊಡದ ಹೊರತು ಇಂತಹ ನಿರ್ಬಂಧಗಳು ಎಲ್ಲದಕ್ಕೂ ಅನ್ವಯವಾಗುತ್ತವೆ.

ಪ್ರಶ್ನೆಯಲ್ಲಿ ಉಲ್ಲೇಖಿಸಿರುವಂತೆ, ಖರೀದಿದಾರರು ಮುಂಗಡ ಮೊತ್ತವನ್ನು ಹಾಗೂ ಬಾಕಿ ಮೊತ್ತವನ್ನು ನಗದು ರೂಪದಲ್ಲೇ ಪಾವತಿಸುವ ಇರಾದೆ ವ್ಯಕ್ತಪಡಿಸಿರುತ್ತಾರೆ. ಮೇಲೆ ಉಲ್ಲೇಖಿಸಿರುವ ನಿಯಮದಂತೆ, ನಿಮ್ಮ ಈ ಹಣಕಾಸು ವ್ಯವಹಾರ ಒಂದು ನಿರ್ದಿಷ್ಟ ಸನ್ನಿವೇಶಕ್ಕೆ ಸಂಬಂಧಿಸಿದ್ದು. ಅಂದರೆ ನಿಮ್ಮ ಜಮೀನನ್ನು ಮಾರಾಟ ಮಾಡುವ ಒಂದು ವ್ಯವಹಾರಕ್ಕೆ ಸಂಬಂಧಿಸಿದ್ದು. ಅದಲ್ಲದೆ ಈ ನಿರ್ದಿಷ್ಟ ವ್ಯವಹಾರಕ್ಕೆ ಸಂಬಂಧಿಸಿ ಪಾವತಿ ಮಾಡಲಾಗುವ ಒಟ್ಟು ಮೊತ್ತವೂ ₹ 2 ಲಕ್ಷ ಮಿರಿದ್ದು. ಹೀಗಾಗಿ, ಈ ಖರೀದಿಗೆ ಸಂಬಂಧಿಸಿ ₹ 2 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ನಗದು ರೂಪದಲ್ಲಿ ಸ್ವೀಕರಿಸುವುದು ಕಾನೂನಿನ ಉಲ್ಲಂಘನೆಯಾಗುತ್ತದೆ. ಹೀಗಾಗಿ ಡಿ.ಡಿ, ಆರ್‌ಟಿಜಿಎಸ್ ಇತ್ಯಾದಿ ವಿಶ್ವಸನೀಯ ಬ್ಯಾಂಕಿಂಗ್ ಮೂಲಗಳ ಮೂಲಕ ಹಣ ಸ್ವೀಕರಿಸುವ ಬಗ್ಗೆ ಮಾತುಕತೆ ನಡೆಸಿ.

ಎಚ್.ಸಿ. ಸುಜಾತ, ಶಿವಮೊಗ್ಗ

- **ಪ್ರಶ್ನೆ:** ನಾನು ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ನನ್ನ ತೆರಿಗೆಗೆ ಸಂಬಂಧಿಸಿದ ಮಾಹಿತಿಯನ್ನು ನಿಮಗೆ ಪ್ರತ್ಯೇಕವಾಗಿ ಕಳುಹಿಸಿರುತ್ತೇನೆ. ಮೂಲ ವೇತನ, ಡಿಎ, ಮನೆ ಬಾಡಿಗೆ ಭತ್ಯೆ, ವಿಶೇಷ ಭತ್ಯೆ, ವಾರ್ಡನ್ ಭತ್ಯೆ, ಸಣ್ಣ ಕುಟುಂಬ ಭತ್ಯೆ, ಹಾಗೂ ಇತರ ಭತ್ಯೆಗಳ ವಿವರ ಅದರಲ್ಲಿದೆ. ವಿಮಾ ಮೊತ್ತ, ವೃತ್ತಿ ತೆರಿಗೆ, ಪಿ.ಎಫ್, ಗೋರಕ್ಷಾ ದೇಣಿಗೆ, ಚಿನ್ನದ ಬಾಂಡ್, ಎಸ್‌ಐಪಿ, ಟಾಟಾ ಪವರ್ ಷೇರು ಖರೀದಿ, ಮನೆ ಕಟ್ಟುವ ಉದ್ದೇಶಕ್ಕೆ ಪಡೆದ ವೈಯಕ್ತಿಕ ಸಾಲದ ಮೇಲಣ ಬಡ್ಡಿ (ಮನೆ ಸಾಲವು ಪತಿಯ ಹೆಸರಲ್ಲಿದೆ), ಮಗಳ ಮದುವೆ ಉಡುಗೊರೆ ಹೀಗೆ ಅನೇಕ ಪಾವತಿಗಳನ್ನು ಮತ್ತು ಹೂಡಿಕೆಗಳನ್ನು ಮಾಡಿರುತ್ತೇನೆ. ಕಳೆದ ವರ್ಷದ (2021-22) ಗಳಿಕೆ ರಜಾ ನಗದೀಕರಣಕ್ಕೆ ಸಂಬಂಧಿಸಿ ಪಡೆದ ₹ 30,000ಕ್ಕೆ ತೆರಿಗೆ ಪಾವತಿಸಿರುತ್ತೇನೆ. ಈ ಮೊತ್ತದ ಮೇಲೆ ಪಾವತಿಸಿದ ತೆರಿಗೆಯನ್ನು ಸೆಕ್ಷನ್ 10ರ ಪ್ರಕಾರ ವಿನಾಯಿತಿ ಪಡೆದು ಹಿಂಪಡೆಯಬಹುದೆ? ಮೇಲೆ ಉಲ್ಲೇಖಿಸಿರುವ ಅಂಶಗಳಲ್ಲಿ ಯಾವೆಲ್ಲವನ್ನು ವಿನಾಯಿತಿಗೆ ಪರಿಗಣಿಸಬಹುದು?

ಉತ್ತರ: ನೀವು ನಿಮಗೆ ಸಿಗುವ ಎಲ್ಲಾ ಭತ್ಯೆಗಳು ಹಾಗೂ ವಿವಿಧ ಹೂಡಿಕೆಗಳ ವಿವರ ಕೊಟ್ಟಿರುತ್ತೀರಿ. ಇದರೊಡನೆ, ಇತರ ಕೆಲವೆಲ್ಲ ಪಾವತಿ ವಿವರಗಳೂ ಇವೆ. ಇವನ್ನು ಸ್ಥೂಲವಾಗಿ ನೋಡಿದಾಗ ನೀವು ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕು.

1) ಮನೆ ಬಾಡಿಗೆ ನೀಡುತ್ತಿದ್ದರೆ ಅದಕ್ಕೆ ಸಂಬಂಧಿಸಿ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 10 (13ಎ) ಅಡಿ ವಿನಾಯಿತಿ ಸಿಗುತ್ತದೆ. ಇದು ನಿಮ್ಮ ಮೂಲ ವೇತನ, ಡಿಎ, ಪಾವತಿಸುವ ಬಾಡಿಗೆ ಮೊತ್ತವನ್ನು ಆಧರಿಸಿರುತ್ತದೆ. 2) ವಿಶೇಷ ಭತ್ಯೆ, ಇತರ ಯಾವುದೇ ಭತ್ಯೆಗಳು ತೆರಿಗೆಗೆ ಒಳಪಡುತ್ತವೆ. 3) ವೃತ್ತಿ ತೆರಿಗೆಗೆ ಸಂಬಂಧಿಸಿ ತೆರಿಗೆ ವಿನಾಯಿತಿ ಇದೆ. 4) ಉದ್ಯೋಗಿಯಿಂದ ಕಡಿತಗೊಳಿಸಲಾಗುವ ಪಿಎಫ್ ಮೊತ್ತ, ಸ್ವಂತ ಹಾಗೂ ಕುಟುಂಬದವರ ಹೆಸರಲ್ಲಿ ಕಟ್ಟುವ ವಿಮಾ ಮೊತ್ತದ ಪಾವತಿಗೆ ತೆರಿಗೆ ವಿನಾಯಿತಿ ಸಿಗುತ್ತದೆ. 5) ಯಾವುದೇ ದೇಣಿಗೆ ನೀಡಿದ್ದಲ್ಲಿ, ನಿಮ್ಮ ಪ್ಯಾನ್ ವಿವರದೊಂದಿಗೆ ರಸೀದಿ ಹೊಂದಿದ್ದಲ್ಲಿ ಆದಾಯ ತೆರಿಗೆಯ 80 ಜಿ ಅಡಿ ಮಿತಿ ಆಧಾರಿತ ಕಡಿತ ಸಿಗುತ್ತದೆ. 6) ಚಿನ್ನದ ಬಾಂಡ್, ಷೇರು ಖರೀದಿ ಇತ್ಯಾದಿಗೆ ಸಂಬಂಧಿಸಿ ಯಾವುದೇ ತೆರಿಗೆ ವಿನಾಯಿತಿ ಇಲ್ಲ. ಇವು ಆದಾಯ ವೃದ್ಧಿಗಾಗಿ ಇರುವ ಹೂಡಿಕೆಗಳು, ಮಾರಾಟದಿಂದ ಲಾಭವಾದರೆ ತೆರಿಗೆ ಪಾವತಿಸಬೇಕಾಗುತ್ತದೆ. 7) ಉದ್ಯೋಗದಲ್ಲಿದ್ದಾಗ ರಜಾ ವೇತನ ನಗದೀಕರಿಸಿದ್ದಲ್ಲಿ, ಪಾವತಿಸಲಾಗುವ ಮೊತ್ತಕ್ಕೆ ತೆರಿಗೆ ಇರುತ್ತದೆ. ಆದರೆ, ನೀವು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 89ರ ಅಡಿಯಲ್ಲಿ ‘ಫಾರ್ಮ್ 10 ಇ’ಯನ್ನು ವಿವರ ಸಲ್ಲಿಸುವ ಮೊದಲು ಭರ್ತಿಮಾಡಿ ಒಂದಷ್ಟು ತೆರಿಗೆ ಕಡಿಮೆ ಮಾಡುವ ಅವಕಾಶವಿದೆ. ಇದು ಹಿಂದಿನ ಕೆಲವು ವರ್ಷಗಳಿಗೆ ಸಂಬಂಧಿಸಿದ ರಜಾ ನಗದೀಕರಣ ಆಗಿರಬೇಕು ಹಾಗೂ ಅಗತ್ಯ ವಿವರ ನಿಮ್ಮಲ್ಲಿರಬೇಕು. ಸಮಯ ಮಿತಿ ಕಳೆದಿರುವುದರಿಂದ ವಿವರ ಪರಿಷ್ಕರಿಸುವುದು ಅಸಾಧ್ಯ. 8) ವೈಯಕ್ತಿಕ ಸಾಲಗಳ ಮೇಲಣ ಬಡ್ಡಿ ಪಾವತಿಗೆ ಗೃಹ ಸಾಲದ ಅಡಿ ಬಡ್ಡಿ ವಿನಾಯಿತಿ ಇರುವುದಿಲ್ಲ.

ನಿಮ್ಮ ತೆರಿಗೆಯ ನಿಖರ ಮಾಹಿತಿಗೆ ನಿಮ್ಮ ಸಂಸ್ಥೆಯಿಂದ ಸಿಗುವ ಫಾರಂ 16ರ ಕರಡು ತೆರಿಗೆ ಲೆಕ್ಕದ ವಿವರದೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಖುದ್ದು ಭೇಟಿಯಾಗಿ. ನಿಖರ ತೆರಿಗೆ ಲೆಕ್ಕಾಚಾರಕ್ಕೆ ಇನ್ನಷ್ಟು ವಿವರಗಳು ಬೇಕಾದೀತು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001 ಇ-ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	350-400
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	650-700
ಜರಡಿ	700 - 750
ಹೆರಕಿದ್ದು	1,150-1,200
ಹಸಿರು ಸಾಧಾರಣ	700-750
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,350-1,450
ಕಾಳು ಮೆಣಸು -	500
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	22,500-40000
ಹಳತು	48,000-54,500
ಭದ್ರಾವತಿ	
ರಾಶಿ	40,199-46,499
ಚನ್ನಗಿರಿ	
ರಾಶಿ	45,299-46,899
ಚಿತ್ರದುರ್ಗ	
ಆಪಿ	45,100-45,500
ಬೆಟ್ಟೆ	35,100-35,500
ಕೆಂಪುಗೋಟು	30,100-30,500
ರಾಶಿ	44,600-45,000
ಕಾರ್ಕಳ	
ಹೊಸತು	30,000-40,000
ಹಳತು	40,000-54,500
ಸಾಗರ	
ಬಿಳಿಗೋಟು	29,899-29,899
ಚಾಲಿ	38,169-38,479
ಕೆಂಪುಗೋಟು	34,688-36,688
ರಾಶಿ	41,009-45,899
ಸಿಪ್ಪೆಗೋಟು	6,969-20,600
ಶಿವಮೊಗ್ಗ	
ಬೆಟ್ಟೆ	46,569-53,899
ಗೊರಬಲು	17,080-35,559
ರಾಶಿ	36,699-47,299
ಸರಕು	52,000-80,796
ಸಿದ್ದಾಪುರ	
ಬಿಳಿಗೋಟು	27,399-33,819
ಚಾಲಿ	38,899-40,399
ಕೋಕ	26,209-30,899
ಹೊಸಚಾಲಿ	31,499-35,499
ಕೆಂಪುಗೋಟು	30,000-33,289
ರಾಶಿ	44,109-46,199
ತಟ್ಟಿಬೆಟ್ಟೆ	38,109-45,599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,500	14450	14400	159.85 ಸೆಂಟ್ಸ್
ಎಸಿ	7,140	7000	6200	
ಆರ್‌ಪಿ	9,100	9100	8900	ಲಂಡನ್
ಆರ್‌ಸಿ	4900	175	4500	1943 ಡಾಲರ್ಸ್

ಶಿಕ್ಷಕರ ಆಯ್ಕೆಪಟ್ಟಿ ರದ್ದು: ಕಾನೂನು ಇಲಾಖೆಗೆ ಮೊರೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪದವೀಧರ ಶಿಕ್ಷಕರನ್ನು ನೇಮಕ ಮಾಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಿಸಿದ್ದ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ರದ್ದುಪಡಿಸಿರುವ ಹೈಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಾನೂನು ಇಲಾಖೆಯ ಸಲಹೆ ಕೋರಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಪತಿಯ ಆದಾಯ ಹಾಗೂ ಜಾತಿ ಪ್ರಮಾಣಪತ್ರ ಪರಿಗಣಿಸಿ ಶಿಕ್ಷಕರ ಆಯ್ಕೆ ಪ್ರಕ್ರಿಯೆ ನಡೆಸಿದ್ದ ಶಿಕ್ಷಣ ಇಲಾಖೆಯ ಕ್ರಮವನ್ನು ಪ್ರಶ್ನಿಸಿ ಅಕ್ಷತಾ ಚೌಗಲಾ ಸೇರಿದಂತೆ 90 ಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿಗಳನ್ನು ಮಾನ್ಯ ಮಾಡಿ, ಪತಿಯ ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಬದಲು ಅಭ್ಯರ್ಥಿಗಳ ತಂದೆಯ ಆದಾಯ ಮತ್ತು ಜಾತಿ ಪ್ರಮಾಣಪತ್ರಗಳನ್ನೂ ಪರಿಗಣಿಸಿ ಹೊಸದಾಗಿ ಪಟ್ಟಿ ಸಿದ್ಧಪಡಿಸಲು ಆದೇಶಿಸಿತ್ತು.

‘ನ್ಯಾಯಾಲಯಕ್ಕೆ ಮನವರಿಕೆ ಮಾಡುವಲ್ಲಿ ವಿಫಲರಾಗಿದ್ದೇವೆ. ಈ ಕುರಿತು ಸಲಹೆ ಬಂದ ನಂತರ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. 2022ರ ಮಾರ್ಚ್‌ನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿ, ನವೆಂಬರ್‌ನಲ್ಲಿ 13,363 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು.

ಸಂಸತ್ತಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಚೊಚ್ಚಲ ಭಾಷಣ

‘ಪಕ್ಷಪಾತ ಮಾಡದ ನಿರ್ಭೀತ ಸರ್ಕಾರ’



ಮಂಗಳವಾರ ಸಂಸತ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ನಂತರ ನಿರ್ಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನಿ ಮೋದಿ ಹಾಗೂ ಇತರ ಸಂಸದರಿಗೆ ವಂದಿಸಿದರು. ಉಪರಾಷ್ಟ್ರಪತಿ ಜಗದೀಪ್ ಧನಕರ್ ಇದ್ದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ನಿರ್ಭೀತವಾಗಿ ಕಾರ್ಯನಿರ್ವಹಿಸುತ್ತಿದ್ದು, ಖಚಿತ ನಿರ್ಧಾರ ತೆಗೆದುಕೊಳ್ಳುತ್ತಿದೆ. ಪಕ್ಷಪಾತ ಮಾಡದೇ ಎಲ್ಲ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮಂಗಳವಾರ ಹೇಳಿದರು.

ಬಜೆಟ್ ಅಧಿವೇಶನದ ಮೊದಲ ದಿನ, ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಚೊಚ್ಚಲ ಭಾಷಣ ಮಾಡಿದ ಅವರು, ‘ಕೇಂದ್ರ ಸರ್ಕಾರವು ಅಭಿವೃದ್ಧಿಯ ಜೊತೆಗೆ ದೇಶದ ಭವ್ಯ ಪರಂಪರೆಗೂ ಮಹತ್ವ ನೀಡುತ್ತಿದೆ’ ಎಂದು ವಿವರಿಸಿದರು.

‘ಭ್ರಷ್ಟಾಚಾರದ ವಿರುದ್ಧ ಸರ್ಕಾರವು ನಿರಂತರ ಹೋರಾಟ ನಡೆಸುತ್ತಿದೆ. 2047ರ ವೇಳೆಗೆ ಭಾರತವು ಸ್ವಾವಲಂಬಿ ಹಾಗೂ ತನ್ನ ಜವಾಬ್ದಾರಿಯನ್ನು ಪೂರೈಸುವ ದೇಶವಾಗಿ ಹೊರಹೊಮ್ಮಬೇಕಿದೆ’ ಎಂದು ಹೇಳಿದರು.

‘2047ರ ಭಾರತವು ಬಡತನದಿಂದ ಮುಕ್ತವಾಗಿರಬೇಕು. ದೇಶದ ಮಧ್ಯಮ ವರ್ಗದ ಜನರ ಅಭಿವೃದ್ಧಿಯೂ ಆಗಿರಬೇಕು’ ಎಂಬ ಆಶಯವನ್ನು ಮುರ್ಮು ವ್ಯಕ್ತಪಡಿಸಿದರು. ಒಂದು ಗಂಟೆಗೂ ಹೆಚ್ಚು ಅವಧಿಯ ತಮ್ಮ ಭಾಷಣದಲ್ಲಿ ರಾಷ್ಟ್ರಪತಿ ಮುರ್ಮು ಅವರು ಮೋದಿ ನೇತೃತ್ವದ ಸರ್ಕಾರದ ಸಾಧನೆಗಳನ್ನು ಬಿಚ್ಚಿಟ್ಟರು.

ಪ್ರಮುಖ ಅಂಶಗಳು ಹೀಗಿವೆ:

- ಭಯೋತ್ಪಾದನೆ ವಿರುದ್ಧ ಕಠಿಣ ಕ್ರಮ. ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿಯ ದುಸ್ಸಾಹಸಗಳಿಗೆ ತಕ್ಕ ಪ್ರತ್ಯುತ್ತರ ನೀಡಲಾಗಿದೆ
- ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿಯ ರದ್ದತಿಯಂತಹ ದಿಟ್ಟ ಕ್ರಮಗಳ ಮೂಲಕ ದೃಢ ನಿರ್ಧಾರ ಕೈಗೊಳ್ಳುವ ಸರ್ಕಾರ ಎಂದು ಸಾಬೀತುಪಡಿಸಲಾಗಿದೆ
- ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಕೆಲ ಸೌಲಭ್ಯಗಳು ಜನರಿಗೆ ನೂರಕ್ಕೆ ನೂರರಷ್ಟು ತಲುಪಿವೆ ಇಲ್ಲವೇ ಗುರಿ ತಲುಪುವ ಹಂತದಲ್ಲಿವೆ
- ಭಾರತ ಈಗ 5ನೇ ಬೃಹತ್ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.
- ಬಡವರು ಹಾಗೂ ಮಹಿಳೆಯರ ಅಭಿವೃದ್ಧಿಗೂ ಒತ್ತು ನೀಡಲಾಗಿದೆ. ಸಮಾಜದಲ್ಲಿನ ದುರ್ಬಲರ ಏಳಿಗೆಗೂ ಕ್ರಮ ಕೈಗೊಂಡಿದೆ.
- ದೇಶದ ಸಂಸ್ಕೃತಿ ಹಾಗೂ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ರಾಮ ಮಂದಿರ, ಕೇದಾರನಾಥ ಧಾಮ ನಿರ್ಮಾಣ ಕಾರ್ಯ ಒಂದೆಡೆಯಾದರೆ, ವೈದ್ಯಕೀಯ ಕಾಲೇಜುಗಳು, ವಿಶ್ವವಿದ್ಯಾಲಯಗಳ ಸ್ಥಾಪನೆಗೂ ಕ್ರಮಕೈಗೊಳ್ಳಲಾಗಿದೆ.
- ಮುಂದಿನ 25 ವರ್ಷಗಳ ಅವಧಿಯನ್ನು ಸರ್ಕಾರ ‘ಅಮೃತ ಕಾಲ’ ಎಂದು ಬಣ್ಣಿಸುತ್ತದೆ. ಈ ಅವಧಿಯಲ್ಲಿ ದೇಶವು ‘ಆತ್ಮನಿರ್ಭರ’ವಾಗಬೇಕು. ಈ ಕನಸು ಈಡೇರಿಕೆಗೆ ದೇಶದ ಪ್ರತಿ ಪ್ರಜೆಯೂ ಕೈಜೋಡಿಸಬೇಕು.

ವಿಶ್ವಕ್ಕೆ ಭರವಸೆಯ ಕಿರಣ– ಮೋದಿ: ‘ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಡುವೆ ಭಾರತದ ಬಜೆಟ್ ಸಾಮಾನ್ಯ ನಾಗರಿಕರ ಭರವಸೆ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಯತ್ನಿಸುವುದರ ಜತೆಗೆ ಜಗತ್ತಿಗೆ ಭರವಸೆಯ ಕಿರಣವಾಗಲಿದೆ’ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಬಜೆಟ್ ಅಧಿವೇಶನಕ್ಕೂ ಮುನ್ನ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಯಾವಾಗಲೂ ‘ಭಾರತಕ್ಕೆ ಮೊದಲ ಮತ್ತು ನಾಗರಿಕರಿಗೆ ಪ್ರಥಮ’ ಎಂಬ ಏಕೈಕ ಗುರಿಯೊಂದಿಗೆ ಕೆಲಸ ಮಾಡಿದೆ ಮತ್ತು ಅದೇ ಮನೋಭಾವವನ್ನು ಬಜೆಟ್ ಅಧಿವೇಶನದಲ್ಲೂ ಕಾಣಬಹುದು’ ಎಂದು ಹೇಳಿದರು.

ಎಎಪಿ, ಬಿಆರ್‌ಎಸ್ ಬಹಿಷ್ಕಾರ

ಸಂಸತ್‌ನ ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಷಣ ಮಾಡಿದ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಜರಿದ್ದರು. ಆದರೆ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಗೈರಾಗಿದ್ದರು.

ಭಾರತ್ ಜೋಡೊ ಯಾತ್ರೆಯ ಸಮಾರೋಪದಲ್ಲಿ ಪಾಲ್ಗೊಳ್ಳುವ ಸಂಬಂಧ ಶ್ರೀನಗರಕ್ಕೆ ತೆರಳಿದ್ದ ಅವರು, ದೆಹಲಿಗೆ ವಾಪಸಾಗಿರಲಿಲ್ಲ. ಪ್ರತಿಕೂಲ ಹವಾಮಾನದಿಂದಾಗಿ ಶ್ರೀನಗರ–ದೆಹಲಿ ನಡುವಿನ ವಿಮಾನಗಳ ಹಾರಾಟವನ್ನು ರದ್ದು ಮಾಡಲಾಗಿತ್ತು.

‘ಕೇಂದ್ರ ಸರ್ಕಾರ ಎಲ್ಲ ರಂಗಗಳಲ್ಲಿಯೂ ವಿಫಲವಾಗಿದೆ’ ಎಂದು ಆರೋಪಿಸಿದ ಬಿಆರ್‌ಎಸ್ ಸಂಸದ ಕೆ.ಕೇಶವರಾವ್, ರಾಷ್ಟ್ರಪತಿಗಳ ಭಾಷಣವನ್ನು ಬಹಿಷ್ಕರಿಸಿದರು. ಎಎಪಿ ಸಂಸದ ಸಂಜಯ್ ಸಿಂಗ್ ಕೂಡ ಬಹಿಷ್ಕರಿಸಿದರು. ನಂತರ ಈ ಇಬ್ಬರು ನಾಯಕರು ಮಾತನಾಡಿ, ‘ನಮಗೆ ರಾಷ್ಟ್ರಪತಿ ಮುರ್ಮು ಹಾಗೂ ಅವರ ಸ್ಥಾನದ ಬಗ್ಗೆ ಗೌರವ ಇದೆ. ಆದರೆ, ಬಿಜೆಪಿ ನೇತೃತ್ವದ ಸರ್ಕಾರದ ನಿಲುವುಗಳನ್ನು ವಿರೋಧಿಸಿ ನಾವು ರಾಷ್ಟ್ರಪತಿಗಳ ಭಾಷಣವನ್ನು ಬಹಿಷ್ಕರಿಸಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಸೋನಿಯಾ ಗಾಂಧಿ ಅವರಿಗೆ ಶುಭಾಶಯ ಕೋರಿದರು.

ರಾಷ್ಟ್ರಪತಿ ಭಾಷಣಕ್ಕೆ ವಿರೋಧ ಪಕ್ಷಗಳ ಟೀಕೆ

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಸಂಸತ್‌ನಲ್ಲಿ ಮಾಡಿರುವ ಭಾಷಣಕ್ಕೆ ವಿರೋಧ ಪಕ್ಷಗಳು ಟೀಕೆ ವ್ಯಕ್ತಪಡಿಸಿದ್ದು, ‘ಭಾಷಣವು ಆಡಳಿತಾರೂಢ ಬಿಜೆಪಿಯ 2024ರ ಪ್ರಣಾಳಿಕೆಯ ಮೊದಲ ಅಧ್ಯಾಯ’ ಎಂದು ಲೇವಡಿ ಮಾಡಿವೆ.

ತೈಲ ದರಏರಿಕೆ ನಿಯಂತ್ರಣ, ಕೋಮು ಸೌಹಾರ್ದತೆ ಮತ್ತು ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳು ಭಾಷಣದಲ್ಲಿ ಕಾಣೆಯಾಗಿದ್ದವು ಎಂದೂ ಹೇಳಿವೆ.

‘ಸರ್ಕಾರದ ಹೇಳಿಕೆಯು ರಾಷ್ಟ್ರಪತಿಗಳ ಮೂಲಕ ಹೊರಬಂದಿದೆ. ಅದರಲ್ಲಿ ಹೊಸತೇನೂ ಇಲ್ಲ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

‘ಸರ್ಕಾರ ಹೇಳಿರುವಂತೆ ದೇಶವು ತುಂಬಾ ಪ್ರಗತಿ ಸಾಧಿಸಿದ್ದರೆ, ನಿರುದ್ಯೋಗ, ಹಣದುಬ್ಬರ ಮೊದಲಾದವುಗಳ ಪರಿಣಾಮವಾಗಿ ಬಡವರು ಯಾಕೆ ಸಂಕಷ್ಟ ಅನುಭವಿಸುತ್ತಿದ್ದಾರೆ’ ಎಂದೂ ಪ್ರಶ್ನಿಸಿದ್ದಾರೆ.


‘ರಾಷ್ಟ್ರಪತಿಗಳ ಭಾಷಣವು ಕೇಂದ್ರ ಸರ್ಕಾರದಿಂದ ಬರೆಯಲ್ಪಟ್ಟಿದ್ದರೂ ಅದರಲ್ಲಿ ಪ್ರಮುಖ ವಿಚಾರಗಳ ಪ್ರಸ್ತಾಪವೇ ಇರಲಿಲ್ಲ’ ಎಂದು ಟಿಎಂಸಿ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಿಯನ್ ಹೇಳಿದ್ದಾರೆ.

‘ಮಹಿಳೆಯರ, ಯುವಕರ, ದಲಿತ ಮತ್ತು ಬುಡಕಟ್ಟು ಜನರ ಸಬಲೀಕರಣವು ಕೇವಲ ಕಾಗದದಲ್ಲಷ್ಟೇ ಇದೆ’ ಎಂದು ಸಿಪಿಐ ಸಂಸದ ಬಿನೋಯ್ ವಿಶ್ವಂ ಟ್ವೀಟ್ ಮಾಡಿದ್ದಾರೆ. ಸಂಸತ್‌ನಲ್ಲಿ ಮಾಡಿರುವ ತಮ್ಮ ಮೊದಲ ಭಾಷಣದಲ್ಲಿ ಮುರ್ಮು ಅವರು, ‘ದೇಶವು ಸ್ಥಿರ, ನಿರ್ಭೀತ, ನಿರ್ಣಾಯಕ ಸರ್ಕಾರವನ್ನು ಹೊಂದಿದೆ. ಮತ್ತು ಅದು ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ವರ್ಗದ ಜನರಿಗಾಗಿ ಕೆಲಸ ಮಾಡುತ್ತಿದೆ’ ಎಂದು ಹೇಳಿದ್ದರು.

ಬದಲಾವಣೆಯ ಚಿತ್ರಣ ನೀಡಿದ ಭಾಷಣ: ‘ದ್ರೌಪದಿ ಮುರ್ಮು ಅವರ ಭಾಷಣವು ವಿಸ್ತಾರವಾದ ವಿಷಯಗಳನ್ನು ಹೊಂದಿತ್ತು ಮತ್ತು ವಿವಿಧ ಕ್ಷೇತ್ರಗಳಲ್ಲಾದ ಮಹತ್ವದ ಬದಲಾವಣೆಗಳ ಆಳವಾದ ಚಿತ್ರಣವನ್ನು ನೀಡಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿದ್ದಾರೆ.

‘ಸಾಮಾನ್ಯ ಜನರನ್ನು ಹೇಗೆ ಸಬಲೀಕರಣ ಮಾಡಲಾಗಿದೆ’ ಎಂಬುದನ್ನು ಭಾಷಣವು ಒತ್ತಿ ಹೇಳಿದೆ ಎಂದೂ ಟ್ವೀಟ್ ಮಾಡಿದ್ದಾರೆ.

ಕಾನೂನು ತಜ್ಞ, ಮಾಜಿ ಸಚಿವ ಶಾಂತಿಭೂಷಣ್ ಇನ್ನಿಲ್ಲ



ನವದೆಹಲಿ (ಪಿಟಿಐ): ಕೇಂದ್ರದ ಮಾಜಿ ಕಾನೂನು ಸಚಿವ, ಕಾನೂನು ತಜ್ಞ, 97 ವರ್ಷ ವಯಸ್ಸಿನ ಶಾಂತಿಭೂಷಣ್ ಮಂಗಳವಾರ ನಿಧನರಾದರು. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೊರಾರ್ಜಿ ದೇಸಾಯಿ ನೇತೃತ್ವದ ಸರ್ಕಾರದಲ್ಲಿ 1977 ರಿಂದ 1979ರವರೆಗೂ ಅವರು ಕಾನೂನು ಸಚಿವರಾಗಿದ್ದರು. ಸಾರ್ವಜನಿಕ ಮಹತ್ವದ ಹಲವು ಪ್ರಕರಣಗಳಲ್ಲಿ ವಕಾಲತ್ತು ವಹಿಸಿದ್ದರು.

ಇವರ ಇಬ್ಬರು ಮಕ್ಕಳಾದ ಜಯಂತ್ ಮತ್ತು ಪ್ರಶಾಂತ್ ಭೂಷಣ್ ಅವರೂ ಹೆಸರಾಂತ ವಕೀಲರಾಗಿದ್ದಾರೆ.

ಇತ್ತೀಚಿನವರೆಗೂ ಸಕ್ರಿಯರಾಗಿದ್ದ ಅವರು ರಫೇಲ್ ಯುದ್ಧವಿಮಾನ ಖರೀದಿಗೆ ಸಂಬಂಧಿಸಿದಂತೆ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ವಿಚಾರಣೆ ನಡೆದಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರವಾಗಿಯೂ ವಾದ ಮಂಡಿಸಿದ್ದರು.

ಚುನಾವಣಾ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿರ್ಬಂಧವನ್ನು ಹೇರಿದ್ದ ಅಲಹಾಬಾದ್ ಹೈಕೋರ್ಟ್‌ನ ಪ್ರಕರಣದಲ್ಲಿ ಅರ್ಜಿದಾರರಾಗಿದ್ದ ರಾಜ್ ನಾರಾಯಣ್ ಪರವಾಗಿ ಶಾಂತಿಭೂಷಣ್ ವಾದ ಮಂಡಿಸಿದ್ದರು.

‘ಪಿ.ಎಂ ಕೇರ್ಸ್ ನಿಧಿ ಸರ್ಕಾರದ್ದಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪಿ.ಎಂ ಕೇರ್ಸ್ ನಿಧಿಯು ಸರ್ಕಾರದ ನಿಧಿಯಲ್ಲ. ಈ ನಿಧಿಗೆ ನೀಡುವ ದೇಣಿಗೆಗಳು ಸರ್ಕಾರದ ಬೊಕ್ಕಸಕ್ಕೂ ಸೇರುವುದಿಲ್ಲ. ಹೀಗಾಗಿ, ಈ ನಿಧಿಗೆ ಸಂಬಂಧಿಸಿ ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಮೂರನೇ ವ್ಯಕ್ತಿಗೆ ಮಾಹಿತಿ ನೀಡಲಾಗದು‘ ಎಂದು ಪ್ರಧಾನಮಂತ್ರಿಗಳ ಕಚೇರಿ (ಪಿಎಂಒ) ಸ್ಪಷ್ಟಪಡಿಸಿದೆ.

ಪ್ರಧಾನಮಂತ್ರಿಗಳ ಕಚೇರಿಯಲ್ಲಿ (ಪಿಎಂಒ) ಪಿ.ಎಂ ಕೇರ್ಸ್ ನಿಧಿಯ ಮೇಲ್ವಿಚಾರಣೆಯನ್ನು ಗಮನಿಸುವ ಅಧೀನ ಕಾರ್ಯದರ್ಶಿಯು ಈ ಸಂಬಂಧ ದೆಹಲಿ ಹೈಕೋರ್ಟ್‌ಗೆ ಲಿಖಿತವಾಗಿ ಪ್ರಮಾಣಪತ್ರ ಸಲ್ಲಿಸಿದ್ದಾರೆ.

‘ಪಿ.ಎಂ.ಕೇರ್ಸ್ ಟ್ರಸ್ಟ್ ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿದೆ. ಭಾರತದ ಮಹಾಲೇಖಪಾಲರು ರಚಿಸುವ ತಂಡದಿಂದ ಆಯ್ಕೆ ಮಾಡಲಾಗುವ ಲೆಕ್ಕಪರಿಶೋಧಕರೇ ಇದರ ವಹಿವಾಟಿನ ಲೆಕ್ಕಪರಿಶೋಧನೆಯನ್ನು ನಡೆಸಲಿದ್ದಾರೆ’ ಎಂದು ಅವರು ಪ್ರಮಾಣಪತ್ರದಲ್ಲಿ ವಿವರಿಸಿದ್ದಾರೆ.

ಈ ಬಗ್ಗೆ ಆರ್‌ಟಿಐ ಕಾಯ್ದೆಯಡಿ ಮೂರನೇ ವ್ಯಕ್ತಿಗೆ ಮಾಹಿತಿ ನೀಡಲಾಗದು. ಇದರ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕೇಂದ್ರ, ರಾಜ್ಯ ಸರ್ಕಾರಗಳ ನಿಯಂತ್ರಣ ಇರುವುದಿಲ್ಲ. ಈ ಟ್ರಸ್ಟ್ ಅನ್ನು ಸಂವಿಧಾನದಡಿ ಅಥವಾ ಯಾವುದೇ ಕಾಯ್ದೆಯಡಿ ರಚಿಸಿಲ್ಲ. ಯಾವುದೇ ಸರ್ಕಾರಗಳ ಆರ್ಥಿಕ ಇಲಾಖೆಯ ನೆರವು ಪಡೆದಿಲ್ಲ, ನಿಯಂತ್ರಣಕ್ಕೂ ಒಳಪಡುವುದಿಲ್ಲ ಎಂದು ಲಿಖಿತ ಪ್ರಮಾಣಪತ್ರದಲ್ಲಿ ಪಿಎಂಒ ಕಚೇರಿ ಸ್ಪಷ್ಟಪಡಿಸಿದೆ.

ಪಿ.ಎಂ ಕೇರ್ಸ್ ನಿಧಿಯನ್ನು ಸಂವಿಧಾನದ ವ್ಯಾಪ್ತಿಗೆ ತರಬೇಕು ಮತ್ತು ಅದರ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಂತೆ ನಿರ್ದೇಶನ ನೀಡಲು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಯಾಗಿ ಈ ಪ್ರಮಾಣಪತ್ರವನ್ನು ಸಲ್ಲಿಸಲಾಗಿದೆ. ಪಿ.ಎಂ. ಕೇರ್ಸ್ ನಿಧಿಯನ್ನು ಆರ್‌ಟಿಐ ಕಾಯ್ದೆಯಡಿ ಸಾರ್ವಜನಿಕ ಪ್ರಾಧಿಕಾರವಾಗಿ ಘೋಷಿಸಬೇಕು ಎಂದೂ ಮತ್ತೊಂದು ಅರ್ಜಿ ಸಲ್ಲಿಕೆಯಾಗಿತ್ತು.

ಈ ಕುರಿತ ವಾದವನ್ನು ಆಲಿಸಿದ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಹ್ಮಣಿಯಂ ಪ್ರಸಾದ್ ಅವರಿದ್ದ ನ್ಯಾಯಪೀಠವು, ಈ ಸಂಬಂಧ ಯಾವಾಗ ವಾದ ಮಂಡಿಸಲಾಗುತ್ತದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ಕಚೇರಿಯಿಂದ ಮಾಹಿತಿಯನ್ನು ಬಯಸಿತು.

ಪ್ರಮಾಣಪತ್ರ ಸಲ್ಲಿಸಿದ ಪಿಎಂಒ ಕಚೇರಿಯ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶ್ರೀವಾತ್ಸವ ಅವರು, ಪಿಎಂ ಕೇರ್ಸ್ ನಿಧಿಯು ಸಾರ್ವಜನಿಕ ಪ್ರಾಧಿಕಾರವಲ್ಲದ ಕಾರಣ ಈ ಅರ್ಜಿ ವಿಚಾರಣೆಗೆ ಸೂಕ್ತವಲ್ಲ ಎಂದು ಪ್ರತಿಪಾದಿಸಿದರು. ಪಿ.ಎಂ ಕೇರ್ಸ್ ಅನ್ನು ಸಾರ್ವಜನಿಕ ದತ್ತಿ ಸಂಸ್ಥೆಯಾಗಿ ರಚಿಸಲಾಗಿದೆ ಎಂದು ಹೇಳಿದರು.

ಬೇನಾಮಿ ಕಾಯ್ದೆ: ಪರಿಶೀಲನೆಗೆ ‘ಸುಪ್ರೀಂ’ ಒಪ್ಪಿಗೆ

ನವದೆಹಲಿ (ಪಿಟಿಐ): ಬೇನಾಮಿ ವಹಿವಾಟು (ನಿಷೇಧ) ತಿದ್ದುಪಡಿ ಕಾಯ್ದೆಯ 2016 ಕೆಲ ಅಂಶಗಳನ್ನು ರದ್ದುಪಡಿಸಿದ ತೀರ್ಪು ಮರು ಪರಿಶೀಲಿಸಲು ಕೋರಿದ್ದ ಅರ್ಜಿಯ ವಿಚಾರಣೆಗೆ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿದೆ.

ಮುಖ್ಯ ನ್ಯಾಯಮೂರ್ತಿಯಾಗಿದ್ದ ಎನ್.ವಿ.ರಮಣ (ಈಗ ನಿವೃತ್ತ) ನೇತೃತ್ವದ ತ್ರಿಸದಸ್ಯರ ಪೀಠವು ಕಳೆದ ವರ್ಷ ಆಗಸ್ಟ್ 23ರಂದು ಕಾಯ್ದೆಯ ಸೆಕ್ಷನ್ 3(2) ಮತ್ತು ಸೆಕ್ಷನ್ 5 ಅನ್ನು ರದ್ದುಪಡಿಸಿತ್ತು. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾ. ಪಿ.ಎಸ್.ನರಸಿಂಹ ಅವರಿದ್ದ ಪೀಠವು ಸಮ್ಮತಿಸಿತು.

ಮೊರ್ಬಿ ದುರಂತ: ಒರೆವಾ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಬಂಧನ

ಮೊರ್ಬಿ (ಪಿಟಿಐ): ಗುಜರಾತ್‌ನ ಮೊರ್ಬಿಯ ತೂಗು ಸೇತುವೆ ಕುಸಿತ ಪ್ರಕರಣದ ಆರೋಪಿ, ಒರೆವಾ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ.) ಜಯಸುಖ್ ಪಟೇಲ್ ಅವರನ್ನು ಮಂಗಳವಾರ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

‘ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ (ಸಿಜೆಎಂ) ಎಂ.ಜೆ. ಖಾನ್ ಅವರ ಎದುರು ಪಟೇಲ್ ಮಂಗಳವಾರ ಬೆಳಿಗ್ಗೆ ಶರಣಾದರು. ಅವರನ್ನು ಪೊಲೀಸ್ ವಶಕ್ಕೆ ನೀಡುವಂತೆ ಸಿಜೆಎಂಗೆ ಮನವಿ ಮಾಡಿದೆವು. ಪಟೇಲ್ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸುವಂತೆ ಸಿಜೆಎಂ ಆದೇಶಿಸಿದ ಬಳಿಕ ಅವರನ್ನು ಬಂಧಿಸಲಾಯಿತು’ ಎಂದು ಮೊರ್ಬಿ ಎಸ್‌ಪಿ ರಾಹುಲ್ ತ್ರಿಪಾಠಿ ತಿಳಿಸಿದ್ದಾರೆ.

135 ಜನರ ಸಾವಿಗೆ ಕಾರಣವಾಗಿದ್ದ ಈ ಸೇತುವೆ ಕುಸಿತ ಪ್ರಕರಣದ ಆರೋಪಪಟ್ಟಿಯನ್ನು ಜ.27ರಂದು ಪೊಲೀಸರು ಸಲ್ಲಿಸಿದ್ದರು. ಅದರಲ್ಲಿ ಪಟೇಲ್‌ರನ್ನು 10ನೇ ಆರೋಪಿ ಎಂದು ತೋರಿಸಲಾಗಿತ್ತು. ಪಟೇಲ್ ವಿರುದ್ಧ ಸಿಜೆಎಂ ಬಂಧನ ವಾರಂಟ್ ಹೊರಡಿಸಿದ್ದರು. ಬಂಧನಕ್ಕೆ ಹೆದರಿ ಪಟೇಲ್ ನಿರೀಕ್ಷಣಾ ಜಾಮೀನಿಗೂ ಅರ್ಜಿ ಸಲ್ಲಿಸಿದ್ದರು.

ಸೇತುವೆಯ ದುರಸ್ತಿ ಮತ್ತು ನಿರ್ವಹಣೆಯ ಗುತ್ತಿಗೆಯನ್ನು ಒರೆವಾ ಗ್ರೂಪ್ ಪಡೆದಿತ್ತು.

‘ಸುಪ್ರೀಂ’ ನ್ಯಾಯಮೂರ್ತಿ: ಮತ್ತಿಬ್ಬರ ಹೆಸರು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಹುದ್ದೆಗೆ ಅಲಹಾಬಾದ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಹಾಗೂ ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರ ಹೆಸರು ಅಂತಿಮಗೊಳಿಸಲಾಗಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಕೊಲಿಜಿಯಂ ಮಂಗಳವಾರ ಇವರ ಹೆಸರನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಕಳೆದ ವರ್ಷದ ಡಿಸೆಂಬರ್ 13ರಂದು ಕೊಲಿಜಿಯಂ, ನ್ಯಾಯಮೂರ್ತಿಗಳ ಹುದ್ದೆಗೆ ಐವರ ಹೆಸರು ಶಿಫಾರಸು ಮಾಡಿತ್ತು. ಈ ಕುರಿತು ಕೇಂದ್ರ ಸರ್ಕಾರ ಈವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ನ್ಯಾಯಮೂರ್ತಿ ಬಿಂದಾಲ್ ಅವರ ಹೆಸರು ಶಿಫಾರಸು ಮಾಡುವ ನಿರ್ಣಯವನ್ನು ಕೊಲಿಜಿಯಂ ಸರ್ವಾನುಮತದಿಂದ ಅಂಗೀಕರಿಸಿತು. ಬಿಂದಾಲ್ ಅವರು ಹೈಕೋರ್ಟ್ ನ್ಯಾಯ ಮೂರ್ತಿಗಳ ಸೇವಾ ಹಿರಿತನದ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದರು.

ಈ ಹಿಂದೆ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಕೆಲಸ ಮಾಡಿದ್ದ ಅರವಿಂದ ಕುಮಾರ್ ಅವರ ಹೆಸರು ಪ್ರಸ್ತಾಪವಾದಾಗ ಕೊಲಿಜಿಯಂ ಸದಸ್ಯರಲ್ಲಿ ಒಬ್ಬರಾದ ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಅವರು ಅರವಿಂದ ಅವರ ಹೆಸರನ್ನು ಮುಂದಿನ ದಿನಗಳಲ್ಲಿ ಪರಿಗಣಿಸಬಹುದು ಎಂದರು.

‘ಅರ್ಹತೆ, ಕರ್ತವ್ಯ ನಿಷ್ಠೆ, ದಕ್ಷತೆಯ ಆಧಾರದಲ್ಲಿ ಇಬ್ಬರ ಹೆಸರು ಅಂತಿಮಗೊಳಿಸಲಾಗಿದೆ. ನ್ಯಾಯಮೂರ್ತಿಯಾಗಲು ಅಗತ್ಯವಿರುವ ಎಲ್ಲಾ ಅರ್ಹತೆಗಳನ್ನೂ ಇವರು ಹೊಂದಿದ್ದಾರೆ’ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಂ.ಆರ್.ಶಾ, ಅಜಯ್ ರಸ್ತೋಗಿ ಮತ್ತು ಸಂಜೀವ್ ಖನ್ನಾ ಅವರಿದ್ದ ಕೊಲಿಜಿಯಂ ಹೇಳಿದೆ.

ಆಸಾರಾಂಗೆ ಜೀವಾವಧಿ ಶಿಕ್ಷೆ

ಅಹಮದಾಬಾದ್ (ಪಿಟಿಐ): ಸೂರತ್ ಮೂಲದ ಮಹಿಳೆ, ತಮ್ಮ ಮಾಜಿ ಶಿಷ್ಯೆ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣದಲ್ಲಿ ಸ್ವಯಂ ಘೋಷಿತ ದೇವಮಾನವ ಆಸಾರಾಂ ಬಾಪು ಅವರಿಗೆ ಗಾಂಧಿನಗರದ ನ್ಯಾಯಾಲಯ ಮಂಗಳವಾರ ಜೀವಾವಧಿ ಶಿಕ್ಷೆ ಮತ್ತು ₹50 ಸಾವಿರ ದಂಡ ವಿಧಿಸಿದೆ.

ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಡಿ.ಕೆ. ಸೋನಿ ಅವರು, ಆರೋಪಿಗೆ ಶಿಕ್ಷೆಯ ಪ್ರಮಾಣ ಪ್ರಕಟಿಸಿದರು. ದಂಡದ ಮೊತ್ತವನ್ನು ಸಂತ್ರಸ್ತೆಗೆ ಪರಿಹಾರವಾಗಿ ನೀಡುವಂತೆ ಆದೇಶಿಸಿದರು ಅಹಮದಾಬಾದ್ ಬಳಿಯ ಮೊಟೆರಾದಲ್ಲಿರುವ ಆಶ್ರಮದಲ್ಲಿ 2001ರಿಂದ 2006ರವರೆಗೆ ಆಸಾರಾಂ ಬಾಪು ಹಲವು ಸಂದರ್ಭಗಳಲ್ಲಿ ತಮ್ಮ ಮೇಲೆ ಅತ್ಯಾಚಾರ ನಡೆಸಿದ್ದರೆಂದು ಅವರ ಮಾಜಿ ಶಿಷ್ಯೆ 2013ರಲ್ಲಿ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣದಲ್ಲಿ ಆಸಾರಾಂ ಬಾಪು ಅಪರಾಧಿ ಎಂದು ನ್ಯಾಯಾಧೀಶರು ಸೋಮವಾರ ತೀರ್ಪು ನೀಡಿದ್ದರು.

ಬಿಎಸ್‌ವೈ ಪ್ರಕರಣ ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ತಂತ್ರಜ್ಞಾನ (ಐ.ಟಿ) ಕಾರಿಡಾರ್ ನಿರ್ಮಾಣಕ್ಕಾಗಿ ಬೆಂಗಳೂರಿನ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿದ್ದ 15 ಎಕರೆ 30 ಗುಂಟೆಯನ್ನು ಅಕ್ರಮವಾಗಿ ಡಿನೋಟಿಫಿಕೇಷನ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ 2 ವಾರ ಮುಂದೂಡಿದೆ.

ವಾದ ಮಂಡಿಸಲು ವಕೀಲರು ಎರಡು ಗಂಟೆಗಳ ಕಾಲಾವಕಾಶ ಕೇಳಿದರು. ಬಳಿಕ ಮುಖ್ಯ ನ್ಯಾ. ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ವಿಚಾರಣೆಯನ್ನು ಮುಂದೂಡಿತು.

ಐ.ಟಿ ಕಾರಿಡಾರ್ ನಿರ್ಮಾಣಕ್ಕಾಗಿ ಬೆಳ್ಳಂದೂರು, ದೇವರಬೀಸನಹಳ್ಳಿ, ಕರಿಯಮ್ಮನ ಅಗ್ರಹಾರ ಮತ್ತು ಅಮಾನಿ ಬೆಳ್ಳಂದೂರು ಖಾನೆ ಗ್ರಾಮಗಳಲ್ಲಿ 434 ಎಕರೆ ಜಮೀನು ಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) 2001 ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಅದರಲ್ಲಿ ಬೆಳ್ಳಂದೂರು ಮತ್ತು ದೇವರಬೀಸನಹಳ್ಳಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳ 15 ಎಕರೆ 30 ಗುಂಟೆ ಜಮೀನನ್ನು ಆಗಿನ ಉಪ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆದೇಶದಂತೆ ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟು 2006 ರ ಜೂ. 21ರಂದು ಆದೇಶ ಹೊರಡಿಸಲಾಗಿತ್ತು.

ಕೆಐಎಡಿಬಿ ಅಧಿಕಾರಿಗಳ ವಿರೋಧದ ನಡುವೆಯೂ ಈ ಜಮೀನುಗಳನ್ನು ಕಾನೂನುಬಾಹಿರವಾಗಿ ಡಿನೋಟಿಫಿಕೇಷನ್ ಮಾಡುವ ಮೂಲಕ ಭ್ರಷ್ಟಾಚಾರ ಎಸಗಿದ್ದಾರೆ ಎಂದು ಆರೋಪಿಸಿ ಹಿಂದಿನ ಕೈಗಾರಿಕಾ ಸಚಿವ ಆರ್.ವಿ. ದೇಶಪಾಂಡೆ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹತ್ತು ಮಂದಿಯ ವಿರುದ್ಧ ವಾಸುದೇವ ರೆಡ್ಡಿ ಖಾಸಗಿ ದೂರು ಸಲ್ಲಿಸಿದ್ದರು.

ಸಮವಸ್ತ್ರಕ್ಕೆ ಕಾಸಿಲ್ಲವೇ?

ಒಂದನೇ ಪುಟದಿಂದ...

‘ಎರಡು ಜೊತೆ ಸಮವಸ್ತ್ರಕ್ಕೆ ಹಣ ಕಳುಹಿಸಿರುವುದಾಗಿ ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ. ಆದರೆ, ದಾಖಲೆಗಳನ್ನು ನೋಡಿದರೆ ಒಂದು ಜೊತೆಗೆ ಮಾತ್ರವೇ ಹಣ ಒದಗಿಸಿರುವುದು ಕಾಣುತ್ತಿದೆ. ಕೊಟ್ಟಿರುವ ಸಮವಸ್ತ್ರದಲ್ಲೂ ಮೇಲಿನದು ಇದ್ದರೆ ಕೆಳಗಿನದು ಇರುವುದಿಲ್ಲ. ಒಂದು ಕಾಲುಚೀಲ ಮತ್ತು ಒಂದು ಶೂಗಷ್ಟೇ ಹಣ ಕಳುಹಿಸಿರಬೇಕು! ಫಲಾನುಭವಿ ಮಕ್ಕಳಿಗೆ ದಕ್ಕಬೇಕಾದ ಸಮವಸ್ತ್ರ, ಶೂ-ಕಾಲುಚೀಲಗಳು ದಕ್ಕಿವೆಯೇ ಎಂಬುದು ಆ ದೇವರಿಗೆ ಮಾತ್ರವೇ ಗೊತ್ತು’ ಎಂದು ವ್ಯಂಗ್ಯವಾಡಿದರು.

‘ಮಕ್ಕಳ ಶೈಕ್ಷಣಿಕ ಬದುಕನ್ನು ಹೀಗೆ ಮಾಡಿದರೆ ಏನು ಕತೆ? ಸಮವಸ್ತ್ರ ಕೊಡುವುದಾದರೆ ಸೂಕ್ತ ರೀತಿಯಲ್ಲಿ ಕೊಡಿ. ಇಲ್ಲವಾದರೆ ಬೇಡವೇ ಬೇಡ. ಪೂರ್ತಿಯಾಗಿ ಸಾಯಿಸಿಬಿಡಿ. ಅರ್ಧಂಬರ್ಧ ಸಾಯಿಸಬೇಡಿ. ಮಕ್ಕಳ ಮನಸ್ಸು ಒಮ್ಮೆ ಹಾಳಾದರೆ ಜೀವನಪೂರ್ತಿ ಆ ನೋವು ಅವರನ್ನು ಕಾಡುವುದಿಲ್ಲವೇ? ಅಧಿಕಾರಿಗಳಿಗೆ ಸರ್ಕಾರಿ ಶಾಲಾ ಮಕ್ಕಳ ಬಗ್ಗೆ ಮಾನವೀಯತೆಯೇ ಇಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ಇತ್ತೀಚೆಗೆ ಸರ್ಕಾರಿ ಶಾಲೆಯೊಂದಕ್ಕೆ ಭೇಟಿ ನೀಡಿದ್ದೆ. ಅಲ್ಲಿ ಕಲಿಯುವ ಒಟ್ಟು 520 ಮಕ್ಕಳಿಗೆ ಒಂದೇ ಒಂದು ಶೌಚಾಲಯ ಇತ್ತು. ಆ ಶೌಚಾಲಯದಲ್ಲೂ ಗಿಡಗಂಟಿಗಳು ಬೆಳೆದಿದ್ದವು. ಮಕ್ಕಳು ಅದನ್ನು ಬಳಸಲು ಹೆದರುತ್ತಿದ್ದರು, ಹಾವು ಬರುತ್ತದೆ ಎನ್ನುತ್ತಿದ್ದರು. ಕಡೆಗೆ ನಾವೇ ಅದನ್ನು ಸ್ವಚ್ಛಗೊಳಿಸಿದೆವು. ಇದು ದುರದೃಷ್ಟಕರ. ಇಂತಹ ಪರಿಸ್ಥಿತಿಯಿದ್ದರೆ ಸರ್ಕಾರಕ್ಕೆ ನಾಚಿಕೆ ಆಗುವುದಿಲ್ಲವೇ’ ಎಂದು ಖಾರವಾಗಿ ಪ್ರಶ್ನಿಸಿದರು.

‘ಅಂತಿಮವಾಗಿ ಎರಡು ವಾರಗಳ ಕಾಲಾವಕಾಶ ನೀಡಲಾಗುವುದು. ಅಷ್ಟರಲ್ಲಿ ಹೈಕೋರ್ಟ್ ಹೊರಡಿಸಿರುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಲ್ಲವಾದಲ್ಲಿ ಸಂಬಂಧಿಸಿದ ಅಧಿಕಾರಿಯ ವಿರುದ್ಧ ನ್ಯಾಯಾಂಗ ನಿಂದನೆಯ ಆರೋಪ ನಿಗದಿ ಮಾಡಲಾಗುತ್ತದೆ. ಅಂದು ಅವರು ನ್ಯಾಯಾಲಯದ ಮುಂದೆ ಹಾಜರಿರಬೇಕು’ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿದರು.

‘ದೇಸ್’, ‘ಬಿಂದಾಸ್’ ಸೇರಿ 800 ಶಬ್ದಗಳು ಆಕ್ಸ್‌ಫರ್ಡ್ ಡಿಕ್ಷನರಿಗೆ

ನವದೆಹಲಿ: ‘ದೇಸ್’ (ದೇಶ) ಹಾಗೂ ‘ಬಿಂದಾಸ್’ (ದಿಟ್ಟ) ಪದಗಳನ್ನು ಒಳಗೊಂಡಂತೆ ಭಾರತೀಯ ಇಂಗ್ಲಿಷ್‌ಗೆ ಸಂಬಂಧಿಸಿದ 800ಕ್ಕೂ ಹೆಚ್ಚಿನ ಪದಗಳನ್ನು ಉಚ್ಚಾರಣೆ ಸಹಿತ ಪ್ರತಿಲಿಪಿ ಹಾಗೂ ಆಡಿಯೊದೊಂದಿಗೆ ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿಯಲ್ಲಿ (ಒಇಡಿ) ಸೇರಿಸಲಾಗಿದೆ.

‘ಹೊಸದಾಗಿ ಸೇರ್ಪಡೆಗೊಂಡಿರುವ ಜಾಗತಿಕ ಇಂಗ್ಲಿಷ್ ಉಚ್ಚಾರಣೆಯ ಆಡಿಯೊ ದೇಶದಲ್ಲಿ ಭಾರತೀಯ ಇಂಗ್ಲಿಷ್ ಮಾತನಾಡುವವರ ನಡುವಿನ ದೊಡ್ಡ ಅಂತರವನ್ನು ತುಂಬಲಿದೆ’ ಎಂದು ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ ಹೇಳಿದೆ.

ವ್ಯಭಿಚಾರ: ತಪ್ಪಿತಸ್ಥ ಅಧಿಕಾರಿ ವಿರುದ್ಧ ಸೇನೆ ಕ್ರಮ ಕೈಗೊಳ್ಳಬಹುದು– ‘ಸುಪ್ರೀಂ’

ನವದೆಹಲಿ (ಪಿಟಿಐ): ‘ವ್ಯಭಿಚಾರದಂತಹ ಕೃತ್ಯಗಳಲ್ಲಿ ತೊಡಗುವ ಅಧಿಕಾರಿಗಳ ವಿರುದ್ಧ ಸಶಸ್ತ್ರ ಪಡೆಗಳು ಕ್ರಮ ಕೈಗೊಳ್ಳಬಹುದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2018ರ ಸೆಪ್ಟೆಂಬರ್‌ನಲ್ಲಿ ಜೋಸೆಫ್ ಶೈನ್ ಸಲ್ಲಿಸಿದ್ದ ಪಿಐಎಲ್ ವಿಚಾರಣೆ ನಡೆಸಿದ್ದ ನ್ಯಾಯಾಲಯವು ವ್ಯಭಿಚಾರವನ್ನು ಅಪರಾಧ ವ್ಯಾಖ್ಯೆಯಿಂದ ಹೊರಗಿಟ್ಟು ತೀರ್ಪು ಪ್ರಕಟಿಸಿತ್ತು.

ಕೇಂದ್ರ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಾಧವಿ ದಿವಾನ್ ಅವರು ಸುಪ್ರೀಂ ಕೋರ್ಟ್‌ನ ಈ ತೀರ್ಪಿನ ಕುರಿತು ಸ್ಪಷ್ಟನೆ ನೀಡುವಂತೆ ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ನ್ಯಾಯಪೀಠಕ್ಕೆ ಮನವಿ ಮಾಡಿದರು.

‘2018ರ ತೀರ್ಪು ಸಶಸ್ತ್ರ ಪಡೆಗಳ ಕಾಯ್ದೆಯ ನಿಬಂಧನೆಗಳಿಗೆ ಸಂಬಂಧಿಸಿಲ್ಲ’ ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ ಬೋಸ್, ಹೃಷಿಕೇಶ್ ರಾಯ್ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ನ್ಯಾಯಪೀಠವು ತಿಳಿಸಿತು.

‘ವ್ಯಭಿಚಾರದಂತಹ ಕೃತ್ಯಗಳಲ್ಲಿ ತೊಡಗುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ 2018ರ ತೀರ್ಪು ತೊಡಕಾಗಿದೆ. ಹೀಗಾಗಿ ಈ ತೀರ್ಪಿನಿಂದ ಸಶಸ್ತ್ರ ಪಡೆಗಳಿಗೆ ವಿನಾಯಿತಿ ನೀಡಬೇಕು’ ಎಂದು ಕೇಂದ್ರ ರಕ್ಷಣಾ ಸಚಿವಾಲಯವು ತನ್ನ ಅರ್ಜಿಯಲ್ಲಿ ಕೋರಿತ್ತು.

ಸಂಕ್ಷಿಪ್ತ ಸುದ್ದಿ

ವಿಮಾನದ ಶೌಚಾಲಯದಲ್ಲಿ ಧೂಮಪಾನ: ಸೆರೆ

ಕೊಚ್ಚಿ (ಪಿಟಿಐ): ಖಾಸಗಿ ವಿಮಾನದ ಶೌಚಾಲಯದ ಒಳಗೆ ಧೂಮಪಾನ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕೇರಳದ ತ್ರಿಶ್ಶೂರ್ ನಿವಾಸಿ 62 ವರ್ಷದ ಸುಕುಮಾರನ್ ಅವರನ್ನು ಬಂಧಿಸಿ, ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಜ.29ರಂದು ಇಲ್ಲಿಗೆ ಬಂದಿಳಿದ ಸ್ಪೈಸ್‌ಜೆಟ್ ವಿಮಾನದ ಶೌಚಾಲಯದ ಒಳಗೆ ಸುಕುಮಾರನ್ ಅವರು ಧೂಮ ಪಾನ ಮಾಡುತ್ತಿರುವುದು ಪತ್ತೆಯಾಗಿತ್ತು.

ಐಎಸ್‌ಗಾಗಿ ಕೆಲಸ: ಆರೋಪಿ ವಿರುದ್ಧ ಆರೋಪಪಟ್ಟಿ

ನವದೆಹಲಿ (ಪಿಟಿಐ): ನಿಷೇಧಿತ ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆ (ಐಎಸ್) ರೂಪಿಸಿದ್ದ ಸಂಚಿಗೆ ಸಂಬಂಧಿಸಿದ ಮೊಕದ್ದಮೆಯೊಂದರ ಆರೋಪಿ ವಿರುದ್ಧ ರಾಷ್ಟ್ರೀಯ ತನಿಖಾ ತಂಡ ಮಂಗಳವಾರ ಆರೋಪಪಟ್ಟಿ ಸಲ್ಲಿಸಿದೆ.

ಬಿಹಾರದ ಪಟ್ನಾ ನಿವಾಸಿ ಮೊಹಮ್ಮದ್ ಮೋಹ್ಸಿನ್ ಅಹ್ಮದ್ ವಿರುದ್ಧ ಪಟಿಯಾಲ ಹೌಸ್ ನ್ಯಾಯಾಲಯದ ವಿಶೇಷ ಎನ್‌ಐಎ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಐಎಸ್‌ನ ಸಿದ್ಧಾಂತಗಳನ್ನು ಪ್ರಚುರಪಡಿಸಲು ಮತ್ತು ಸಂಘಟನೆಗಾಗಿ ದೇಣಿಗೆ ಸಂಗ್ರಹಿಸಲು ರೂಪಿಸಿದ್ದ ಸಂಚಿಗೆ ಸಂಬಂಧಿಸಿದ ಮೊಕದ್ದಮೆ ಇದಾಗಿದ್ದು, ಕಳೆದ ವರ್ಷ ಜೂನ್‌ನಲ್ಲಿ ಎನ್‌ಐಎ ಸ್ವಯಂ ಪ್ರೇರಿತವಾಗಿ ಈ ಮೊಕದ್ದಮೆ ದಾಖಲಿಸಿತ್ತು. ಐಎಸ್ ಪರವಾಗಿ ಅಹ್ಮದ್ ದೇಣಿಗೆ ಸಂಗ್ರಹಿಸುತ್ತಿದ್ದ ಮತ್ತು ಅದನ್ನು ಸಿರಿಯಾ ಮೂಲದ ಐಎಸ್ ನಿರ್ವಾಹಕರಿಗೆ ಕ್ರಿಪ್ಟೊ ಕರೆನ್ಸಿ ಮೂಲಕ ತಲುಪಿಸುತ್ತಿದ್ದ ಎಂಬುದು ತನಿಖೆ ವೇಳೆ ಪತ್ತೆಯಾಗಿತ್ತು ಎಂದು ಅವರು ಹೇಳಿದ್ದಾರೆ.

ಮೂತ್ರ ವಿಸರ್ಜನೆ: ಆರೋಪಿಗೆ ಜಾಮೀನು

ನವದೆಹಲಿ: ಏರ್ ಇಂಡಿಯಾ ವಿಮಾನದಲ್ಲಿ ಮಹಿಳೆಯೊಬ್ಬರ ಮೇಲೆ ಮೂತ್ರ ವಿಸರ್ಜನೆ ಮಾಡಿದ ಆರೋಪ ಎದುರಿಸುತ್ತಿರುವ ಶಂಕರ್ ಮಿಶ್ರಾ ಅವರಿಗೆ ಮಂಗಳವಾರ ಇಲ್ಲಿನ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ಜ್ಯೋತ್ ಸಿಂಗ್ ಭಲ್ಲಾ ಅವರು, ₹ 1ಲಕ್ಷ ವೈಯಕ್ತಿಕ ಬಾಂಡ್ ಆಧಾರದ ಮೇಲೆ ಶಂಕರ್ ಮಿಶ್ರಾಗೆ ಜಾಮೀನು ನೀಡಿದ್ದಾರೆ.

ವಿಶಾಖಪಟ್ಟಣ ಆಗಲಿದೆ ಆಂಧ್ರದ ರಾಜಧಾನಿ: ಜಗನ್

ನವದೆಹಲಿ (ಪಿಟಿಐ): ಮುಂದಿನ ದಿನಗಳಲ್ಲಿ ವಿಶಾಖಪಟ್ಟಣವು ಆಂಧ್ರ ಪ್ರದೇಶದ ರಾಜಧಾನಿಯಾಗಲಿದೆ ಎಂದು ರಾಜ್ಯದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಮಂಗಳವಾರ ಹೇಳಿದರು.

ವಿಶಾಖಪಟ್ಟಣದಲ್ಲಿ ಮಾರ್ಚ್‌ನಲ್ಲಿ ಆಯೋಜನೆ ಆಗಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳದ ಪೂರ್ವಭಾವಿಯಾಗಿ ನಡೆದ ಸಭೆಯಲ್ಲಿ ಹೂಡಿಕೆದಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಮುಂದಿನ ದಿನಗಳಲ್ಲಿ ನಮ್ಮ ರಾಜಧಾನಿಯಾಗಲಿರುವ ವಿಶಾಖಪಟ್ಟಣಕ್ಕೆ ನಾನು ನಿಮ್ಮೆಲ್ಲರನ್ನು ಆಮಂತ್ರಿಸುತ್ತಿದ್ದೇನೆ. ಕೆಲ ತಿಂಗಳಲ್ಲಿ ನನ್ನ ಕಚೇರಿಯನ್ನೂ ವಿಶಾಖಪಟ್ಟಣಕ್ಕೆ ವರ್ಗಾಯಿಸುತ್ತಿದ್ದೇನೆ’ ಎಂದರು.

ರಾಜ್ಯದ ಮೂರು ಪ್ರಮುಖ ನಗರಗಳಾದ ವಿಶಾಖಪಟ್ಟಣ, ಅಮರಾವತಿ ಮತ್ತು ಕರ್ನೂಲನ್ನು ರಾಜಧಾನಿಯನ್ನಾಗಿ ರೂಪಿಸುವುದಾಗಿ ಜಗನ್ ಅವರು ವಿಧಾನಸಭೆಯಲ್ಲಿ ಮಸೂದೆ ಮಂಡಿಸಿದ್ದರು. ಮೂರು ರಾಜಧಾನಿ ಪ್ರಸ್ತಾವನೆಯನ್ನು ತಳ್ಳಿಹಾಕಿದ್ದ ಆಂಧ್ರ ಪ್ರದೇಶ ಹೈಕೋರ್ಟ್, ಅಮರಾವತಿಯನ್ನು ಮಾತ್ರ ರಾಜ್ಯ ರಾಜಧಾನಿಯನ್ನಾಗಿ ರೂಪಿಸುವಂತೆ ನಿರ್ದೇಶನ ನೀಡಿತ್ತು. ಈ ನಿರ್ದೇಶನವನ್ನು ಆಂಧ್ರ ಪ್ರದೇಶ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಪೆಶಾವರ ಆತ್ಮಾಹುತಿ ದಾಳಿ: ಮೃತರ ಸಂಖ್ಯೆ 100ಕ್ಕೆ ಏರಿಕೆ

ಪೆಶಾವರ (ಪಿಟಿಐ): ಇಲ್ಲಿನ ಪೊಲೀಸ್ ಪ್ರಧಾನ ಕಚೇರಿ ಸಮೀಪದ ಬಿಗಿ ಭದ್ರತೆಯ ಮಸೀದಿಯಲ್ಲಿ ಸೋಮವಾರ ಸಂಭವಿಸಿದ ಆತ್ಮಾಹುತಿ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 100ಕ್ಕೆ ಏರಿಕೆಯಾಗಿದ್ದು, 200ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಘಟನಾ ಸ್ಥಳದಲ್ಲಿ ಶಂಕಿತ ಉಗ್ರನ ರುಂಡ ಪತ್ತೆಯಾಗಿದೆ ಎಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿಕೋರನು ಈ ಮೊದಲೇ ಪೊಲೀಸ್ ಲೈನ್ ಪ್ರಾಂತ್ಯದಲ್ಲಿ ಇದ್ದ ಹಾಗೂ ಮಸೀದಿ ಒಳಗೆ ಪ್ರವೇಶಿಸಲು ಅಧಿಕೃತ ವಾಹನವನ್ನು ಬಳಸಿರಬಹುದು. ರಕ್ಷಣಾ ಕಾರ್ಯಾಚರಣೆ ಮುಗಿದ ಬಳಿಕ ಸ್ಫೋಟದ ನಿಖರ ಸ್ವರೂಪ ತಿಳಿಯಲಿದೆ ಎಂದು ಪೆಶಾವರ ನಗರದ ಪೊಲೀಸ್ ಅಧಿಕಾರಿ ಮೊಹಮ್ಮದ್ ಇಜಾಜ್ ಖಾನ್ ತಿಳಿಸಿದ್ದಾರೆ. ಪ್ರಾರ್ಥನೆ ಮಾಡುವವರೊಂದಿಗೆ ಮೊದಲ ಸಾಲಿನಲ್ಲೇ ನಿಂತಿದ್ದ ಆತ್ಮಾಹುತಿ ಬಾಂಬರ್ ತನ್ನನ್ನು ತಾನು ಸ್ಫೋಟಿಸಿಕೊಂಡ ತಕ್ಷಣ ಮಸೀದಿಯ ಚಾವಣಿ ಕುಸಿದು ಬಿತ್ತು. ಅದರ ಅವಶೇಷಗಳ ಅಡಿಯಲ್ಲಿ ನೂರಾರು ಜನ ಸಿಲುಕಿಕೊಂಡರು. ಹೀಗಾಗಿ ಸಾವು, ನೋವಿನ ಪ್ರಮಾಣ ಅಧಿಕವಾಯಿತು, ಅವಶೇಷಗಳ ಅಡಿಯಲ್ಲಿ ಇನ್ನೂ ಕೆಲವರು ಸಿಲುಕಿರುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ಪೊಲೀಸರೇ ಅಧಿಕ: ಪ್ರಾರ್ಥನೆ ವೇಳೆ ಸಾಮಾನ್ಯವಾಗಿ 300ರಿಂದ 400ರಷ್ಟು ಪೊಲೀಸರು, ಅಧಿಕಾರಿಗಳು ಪಾಲ್ಗೊಳ್ಳುತ್ತಾರೆ. ಸೋಮವಾರ ಮಧ್ಯಾಹ್ನ ಸಂಭವಿಸಿದ ಆತ್ಮಾಹುತಿ ಬಾಂಬ್ ಸ್ಫೋಟದಲ್ಲಿ ಸಹ ಮೃತಪಟ್ಟವರಲ್ಲಿ ಪೊಲೀಸರೇ ಅಧಿಕ ಮಂದಿ ಇದ್ದಾರೆ. ಸತ್ತವರಲ್ಲಿ ಒಬ್ಬರು ಡಿಎಸ್‌ಪಿ, ಐವರು ಎಸ್‌ಐಗಳು ಹಾಗೂ ಮಸೀದಿಯ ಧರ್ಮಗುರು ಮೌಲಾನಾ ಸಾಹಿಬ್‌ಝಾದಾ ನೂರುಲ್ ಅಮೀನ್ ಸೇರಿದ್ದಾರೆ. ಒಟ್ಟು 100 ಮೃತದೇಹಗಳನ್ನು ಆಸ್ಪತ್ರೆಗೆ ತರಲಾಗಿದೆ ಎಂದು ಸ್ಥಳೀಯ ಲೇಡಿ ರೀಡಿಂಗ್ ಆಸ್ಪತ್ರೆಯ ವಕ್ತಾರ ಮೊಹಮ್ಮದ್ ಆಸಿಂ ತಿಳಿಸಿದ್ದಾರೆ.

ಜಿಮ್: ನಕಲಿ ಬ್ರ್ಯಾಂಡ್‌ನ ಪೌಡರ್ ಮಾರಾಟ

ಒಂದನೇ ಪುಟದಿಂದ..

‘ಬಳಕೆಗೆ ಯೋಗ್ಯವಲ್ಲದ ಉತ್ಪನ್ನ ಮಾರಾಟಗಾರರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಈ ಪ್ರಕರಣದಲ್ಲಿ ₹ 5 ಲಕ್ಷ ದಂಡ ಹಾಗೂ 6 ತಿಂಗಳ ತನಕ ಜೈಲು ಶಿಕ್ಷೆ ಆಗಲಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಈ ಪದಾರ್ಥಗಳನ್ನು ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಪರೀಕ್ಷೆಗೆ ಒಳಪಡಿಸಬಹುದು. ಅಲ್ಲಿನ ತಜ್ಞರು ನೀಡುವ ವರದಿಯನ್ನು ಅಂತಿಮಗೊಳಿಸಿ, ನಕಲಿ ಬ್ರ್ಯಾಂಡ್ ತಯಾರಕರ ಮೇಲೆ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದ್ದಾರೆ.

ನಕಲಿ ಪುಡಿ ಪತ್ತೆಯಾದ ಸ್ಥಳ ಸಂಖ್ಯೆ: ಬೆಂಗಳೂರು 17, ಉಡುಪಿ 5, ಮೈಸೂರು 3, ಬಾಗಲಕೋಟೆ 2

ಕೆನಡಾ: ಹಿಂದೂ ದೇಗುಲ ವಿರೂಪ

ಟೊರೆಂಟೊ (ಪಿಟಿಐ): ಕೆನಡಾದ ಬ್ರಾಂಪ್ಟನ್ ಪ್ರದೇಶದಲ್ಲಿ ಗೌರಿ ಶಂಕರ ದೇವಾಲಯದಲ್ಲಿ ದುಷ್ಕರ್ಮಿಗಳು ಭಾರತ ವಿರೋಧಿ ಸಂದೇಶಗಳೊಂದಿಗೆ ದೇಗುಲವನ್ನು ಸೋಮವಾರ ರಾತ್ರಿ ವಿರೂಪಗೊಳಿಸಿದ್ದಾರೆ.

ದುಷ್ಕರ್ಮಿಗಳ ವಿರುದ್ಧ ಕೆನಡಾ ಹಾಗೂ ಭಾರತ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ದೇವಸ್ಥಾನದ ಸಂಸ್ಥಾಪಕ ಹಾಗೂ ಅರ್ಚಕ ಧೀರೇಂದ್ರ ತ್ರಿಪಾಠಿ ಒತ್ತಾಯಿಸಿದ್ದಾರೆ.

ದ್ವೇಷ ತುಂಬಿದ ಸಂದೇಶದೊಂದಿಗೆ ಭಾರತ ವಿರೋಧಿ ಕೆಲಸ ಮಾಡುತ್ತಿರುವವರ ಪಾಸ್‌ಪೋರ್ಟ್‌ಗಳನ್ನು ಭಾರತ ಸರ್ಕಾರ ಹಿಂಪಡೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ವೆಂಕಟೇಶ್ ದಾಳಿ: ಉತ್ತರಾಖಂಡ ನಿರುತ್ತರ

ರಣಜಿ: ಚೊಚ್ಚಲ ಪಂದ್ಯದಲ್ಲಿ 5 ವಿಕೆಟ್ ಗಳಿಸಿದ ಮೈಸೂರು ಹುಡುಗ; ರಾಜ್ಯಕ್ಕೆ ಇನಿಂಗ್ಸ್ ಮುನ್ನಡೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಪದಾರ್ಪಣೆಯ ಪಂದ್ಯದಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ ಮುರಳೀಧರ್ ವೆಂಕಟೇಶ್ ದಾಳಿಗೆ ಉತ್ತರಾಖಂಡ ತಂಡವು ದೂಳೀಪಟವಾಯಿತು. ಮಂಗಳವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದ ಮೊದಲ ದಿನವೇ ಆತಿಥೇಯ ಕರ್ನಾಟಕ ಪ್ರಥಮ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ವಾಸುಕಿ ಕೌಶಿಕ್ ಗಾಯಗೊಂಡಿದ್ದ ಕಾರಣ ವಿಶ್ರಾಂತಿ ಪಡೆದರು. ಅವರ ಬದಲಿಗೆ ಮೈಸೂರಿನ ಹುಡುಗ ವೆಂಕಟೇಶ್ ಸ್ಥಾನ ಪಡೆದರು. ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರು.

ವೆಂಕಟೇಶ್ (14–3–36–5) ದಾಳಿಯ ಮುಂದೆ ಉತ್ತರಾಖಂಡ ತಂಡವು 55.4 ಓವರ್‌ಗಳಲ್ಲಿ 116 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಚಹಾ ವಿರಾಮಕ್ಕೆ ಎರಡನೇ ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡವು ದಿನದಾಟದ ಮುಕ್ತಾಯಕ್ಕೆ 26 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 123 ರನ್ ಗಳಿಸಿತು. 7 ರನ್ ಮುನ್ನಡೆ ಸಾಧಿಸಿತು. ಆರ್. ಸಮರ್ಥ್ (ಬ್ಯಾಟಿಂಗ್ 54) ಮತ್ತು ಮಯಂಕ್ (ಬ್ಯಾಟಿಂಗ್ 65) ಕ್ರೀಸ್‌ನಲ್ಲಿದ್ದಾರೆ.

ಉತ್ತರಾಖಂಡ ತಂಡವು ಎಂಟರ ಘಟ್ಟಕ್ಕೆ ಪ್ರವೇಶಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಜೀವನ್‌ಜ್ಯೋತ್ ಸಿಂಗ್ ಅವರ ವಿಕೆಟ್ ಗಳಿಸುವ ಮೂಲಕ ವಿದ್ವತ್ ಕರ್ನಾಟಕದ ಖಾತೆ ತೆರೆದರು. 12ನೇ ಓವರ್‌ನಲ್ಲಿ ವೆಂಕಟೇಶ್ ಎಸೆತದಲ್ಲಿ ಅವನೀಶ್ ಸುಧಾ ಕ್ಯಾಚ್ ಪಡೆದ ನಿಕಿನ್ ಸಂಭ್ರಮಿಸಿದರು. ರಣಜಿ ಟ್ರೋಫಿ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ವಿಕೆಟ್ ಗಳಿಸಿದ ವೆಂಕಟೇಶ್ ಕುಣಿದಾಡಿದರು.

ಉತ್ತರಾಖಂಡದಲ್ಲಿ ಆಡುತ್ತಿರುವ ಬೆಂಗಳೂರಿನ ದಿಕ್ಷಾಂಶು ನೇಗಿ, ಅಖಿಲ್ ರಾವತ್ ಮತ್ತು ಅಭಯ್ ನೇಗಿ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ದಿನದ ಆರಂಭಿಕ ಹಂತದಲ್ಲಿ ಪಿಚ್‌ನಲ್ಲಿ ಚೆಂಡಿನ ಪುಟಿತ ಚೆನ್ನಾಗಿರುವುದನ್ನು ಬಳಸಿಕೊಂಡ ವೆಂಕಟೇಶ್ ಸಫಲರಾದರು.

ಊಟದ ವಿರಾಮಕ್ಕೆ 64 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ಉತ್ತರಾಖಂಡ ತಂಡವು ನೂರರ ಗಡಿ ದಾಟುವಲ್ಲಿ ಕುನಾಲ್ ಚಾಂಡಿಲಾ (31; 103ಎ) ಅವರ ಏಕಾಂಗಿ ಹೋರಾಟ ನೆರವಾಯಿತು. ಅವರ ವಿಕೆಟ್ ಕೂಡ ವೆಂಕಟೇಶ್ ಪಾಲಾಯಿತು. ಐದು ವಿಕೆಟ್ ಪೂರೈಸಿದ ಸಂಭ್ರಮದಲ್ಲಿ ಕೆಂಪುಚೆಂಡನ್ನು ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಸುಮಾರು 150–200 ಜನರತ್ತ ತೋರಿಸಿ ಸಂಭ್ರಮಿಸಿದರು.

ಇನ್ನೊಂದು ಬದಿಯಿಂದ ವೈಶಾಖ ಮತ್ತು ವಿದ್ವತ್ ಕೂಡ ಒತ್ತಡ ಹೆಚ್ಚಿಸಿದರು. ಮಧ್ಯಮ-ಕ್ರಮಾಂಕದ ಪ್ರಮುಖ ಬ್ಯಾಟರ್ ವಿದ್ವತ್ ನೇರ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಬಿಸಿಲು ಚುರುಕಾಗುತ್ತಿದಂತೆ ಆಫ್‌ಸ್ಪಿನ್ನರ್ ಕೆ.ಗೌತಮ್ ಎಸೆತಗಳು ಒಂದಿಷ್ಟು ತಿರುವು ಪಡೆಯಲು ಆರಂಭಿಸಿದವು. ಇದನ್ನು ಗ್ರಹಿಸಿದ ಗೌತಮ್ ಎರಡು ವಿಕೆಟ್ ಗಳಿಸಿ ಉತ್ತರಾಖಂಡದ ಇನಿಂಗ್ಸ್‌ಗೆ ಮಂಗಳ ಹಾಡಿದರು. 56ನೇ ಓವರ್‌ನಲ್ಲಿ ಗೌತಮ್ ತಮ್ಮ ಎಸೆತವನ್ನು ನೇರವಾಗಿ ಹೊಡೆದ ದೀಪಕ್ ಧಪೊಲಾ ಅವರ ಕ್ಯಾಚ್ ಪಡೆದು ಗಮನ ಸೆಳೆದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಉತ್ತರಾಖಂಡ: 55.4 ಓವರ್‌ಗಳಲ್ಲಿ 116 (ಅವನೀಶ್ ಸುಧಾ 17, ಕುನಾಲ್ ಚಾಂಡೇಲಾ 31, ಆದಿತ್ಯ ತಾರೆ 14, ಅಖಿಲ್ ರಾವತ್ 14; ವಿದ್ವತ್ ಕಾವೇರಪ್ಪ 17ಕ್ಕೆ 2, ಎಂ. ವೆಂಕಟೇಶ್ 36ಕ್ಕೆ 5, ಕೆ. ಗೌತಮ್ 22ಕ್ಕೆ 2). ಕರ್ನಾಟಕ: 26 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 123 (ಆರ್. ಸಮರ್ಥ್ ಬ್ಯಾಟಿಂಗ್ 54, ಮಯಂಕ್ ಅಗರವಾಲ್ ಬ್ಯಾಟಿಂಗ್ 65).



ಕರ್ನಾಟಕದ ಎಂ. ವೆಂಕಟೇಶ್ ಉತ್ತರಾಖಂಡ ತಂಡದ ಅಭಯ್ ನೇಗಿ ಅವರನ್ನು ಬೌಲ್ಡ್ ಮಾಡಿದರು –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್‌

ಎರಡನೇ ಮೈಸೂರಿಗ..

ಪ್ರಸಕ್ತ ರಣಜಿ ಟೂರ್ನಿಯಲ್ಲಿ ಮೈಸೂರಿನ ಇಬ್ಬರು ಆಟಗಾರರು ರಾಜ್ಯ ತಂಡಕ್ಕೆ ಪದಾರ್ಪಣೆ ಮಾಡಿದ್ದು ವಿಶೇಷ. ಟೂರ್ನಿಯ ಆರಂಭದಲ್ಲಿ ಬ್ಯಾಟರ್ ನಿಕಿನ್ ಜೋಸ್ ಪದಾರ್ಪಣೆ ಮಾಡಿ ಯಶಸ್ವಿಯಾಗಿದ್ದಾರೆ. ಬ್ಯಾಟಿಂಗ್ ಮತ್ತು ಫೀಲ್ಡಿಂಗ್‌ನಲ್ಲಿ ಉತ್ತಮ ಕಾಣಿಕೆ ನೀಡುತ್ತಿದ್ದಾರೆ. ಇದೀಗ ವೆಂಕಟೇಶ್ ಕೂಡ ಪದಾರ್ಪಣೆ ಮಾಡಿದರು. 22 ವರ್ಷದ ವೆಂಕಟೇಶ್ ಚೊಚ್ಚಲ ವಿಕೆಟ್ ಗಳಿಸಲು ನಿಕಿನ್ ಪಡೆದ ಕ್ಯಾಚ್ ನೆರವಾಗಿದ್ದು ಕಾಕತಾಳೀಯ.

ರಣಜಿ ಪದಾರ್ಪಣೆಯಲ್ಲಿ ಐದು ವಿಕೆಟ್ ಗೊಂಚಲು ಸಾಧನೆ (ಕರ್ನಾಟಕ)

ಆಟಗಾರ	ವಿಕೆಟ್	ಎದುರಾಳಿ	ತಾಣ	ವರ್ಷ
ಎಂ.ಜಿ. ವಿಜಯಸಾರಥಿ	23ಕ್ಕೆ6	ಮದ್ರಾಸ್	ಮದ್ರಾಸ್ (ಚೆನ್ನೈ)	1934-35
ಪಿ.ಇ.ಪಾಲಿಯಾ	73ಕ್ಕೆ5	ತಮಿಳುನಾಡು	ಮದ್ರಾಸ್ (ಚೆನ್ನೈ)	1944-45
ಎಸ್.ಮಹೇಂದ್ರ	87ಕ್ಕೆ5	ಕೇರಳ	ತಿರುವನಂತಪುರ	1964-65
ಪ್ರಸನ್ನಸಿಂಹರಾವ್	27ಕ್ಕೆ6	ಕೇರಳ	ವಿಜಯಪುರ	1969-70
ಜಿ.ವಿ. ಕುಮಾರ್	53ಕ್ಕೆ7 ಮತ್ತು 54ಕ್ಕೆ6	ತಮಿಳುನಾಡು	ಬೆಂಗಳೂರು	1977-78
ಎಸ್.ಶಾನಭಾಗ್	49ಕ್ಕೆ6	ಹೈದರಾಬಾದ್	ಹೈದರಾಬಾದ್	1979-80
ಎಚ್. ಸುರೇಂದ್ರ	126ಕ್ಕೆ5	ದೆಹಲಿ	ಬೆಂಗಳೂರು	1984-85
ಆರ್. ಅನಂತ್	60ಕ್ಕೆ5	ಹೈದರಾಬಾದ್	ಮೈಸೂರು	1988-89
ಜೆ. ಶ್ರೀನಾಥ್	85ಕ್ಕೆ5	ಹೈದರಾಬಾದ್	ಸಿಕಂದರಾಬಾದ್	1989-90
ಅಭಿಮನ್ಯು ಮಿಥುನ್	86ಕ್ಕೆ5, 95ಕ್ಕೆ5	ಉತ್ತರಪ್ರದೇಶ	ಮೀರತ್	2009-10
ಎಚ್.ಎಸ್. ಶರತ್	67ಕ್ಕೆ5	ಉತ್ತರಪ್ರದೇಶ	ಮೀರತ್	2012-13
ಎಂ. ವೆಂಕಟೇಶ್	36ಕ್ಕೆ5	ಉತ್ತರಾಖಂಡ	ಬೆಂಗಳೂರು	2022-23

• ಎಂ.ಜಿ. ವಿಜಯಸಾರಥಿ ಅವರು ಈ ಸಾಧನೆ ಮಾಡಿದ್ದು ಮೈಸೂರು ತಂಡದ ಪ್ರಥಮ ರಣಜಿ ಪಂದ್ಯವೂ ಆಗಿತ್ತು.

• ಪಿ.ಇ ಪಾಲಿಯಾ ಅವರು ಮೈಸೂರು ತಂಡಕ್ಕೆ ಪದಾರ್ಪಣೆ ಮಾಡುವ ಮುನ್ನ ಯುನೈಟೆಡ್ ಪ್ರಾವಿನನ್ಸ್ ಪರ 14 ಹಾಗೂ ಮುಂಬೈ ಪರ 2 ಪಂದ್ಯಗಳಲ್ಲಿ ಆಡಿದ್ದರು.

ಅಂಕಿ ಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ಇತರ ಕ್ವಾರ್ಟರ್‌ಫೈನಲ್‌ಗಳು

ಕೋಲ್ಕತ್ತ: ಮೊದಲ ಇನಿಂಗ್ಸ್: ಜಾರ್ಖಂಡ್: 66.2 ಓವರ್‌ಗಳಲ್ಲಿ 173 (ಕುಮಾರ್ ಸೂರಜ್ ಔಟಾಗದೆ 89, ಮುಕೇಶ್ ಕುಮಾರ್ 61ಕ್ಕೆ3, ಆಕಾಶ್ ದೀಪ್ 46ಕ್ಕೆ4) ಬಂಗಾಳ ವಿರುದ್ಧ

ಇಂದೋರ್: ಆಂಧ್ರ: 88 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 262 (ರಿಕಿ ಭುಯ್ ಬ್ಯಾಟಿಂಗ್ 115, ಕಿರ್ದಂತ್ ಕರಣ್ ಶಿಂಧೆ ಬ್ಯಾಟಿಂಗ್ 83, ಗೌರವ್ ಯಾದವ್ 53ಕ್ಕೆ2) ಮಧ್ಯಪ್ರದೇಶ್ ವಿರುದ್ಧ

ರಾಜ್‌ಕೋಟ್: ಸೌರಾಷ್ಟ್ರ : 87 ಓವರ್‌ಗಳಲ್ಲಿ 303 (ಸ್ನೆಲ್ ಪಟೇಲ್ 70, ಪಾರ್ಥ್ ಬುತ್ ಔಟಾಗದೆ 111,ಬಲ್ತೇಜ್ ಸಿಂಗ್ 60ಕ್ಕೆ3, ಸಿದ್ಧಾರ್ಥ್ ಕೌಲ್ 81ಕ್ಕೆ2, ಮಯಂಕ್ ಮಾರ್ಕಂಡೆ 84ಕ್ಕೆ4)

ಸಂಗೀತಪ್ರತಿಭೆ ಕ್ರಿಕೆಟಿಗನಾಗಿದ್ದು...

ಕರ್ನಾಟಕದ ಪ್ರಮುಖ ಸಂಗೀತಗಾರರಲ್ಲಿ ವಿದುಷಿ ಜಿ. ಸರೋಜಾ ಅವರೂ ಒಬ್ಬರು. ಅವರ ಮೊಮ್ಮಗ ಮುರಳೀಧರ ವೆಂಕಟೇಶ್ ಕೂಡ ಬಾಲ್ಯದಲ್ಲಿ ಸಂಗೀತದತ್ತ ಒಲವು ತೋರಿದವರು. ಕರ್ನಾಟಕ ಸಂಗೀತದಲ್ಲಿ ಜೂನಿಯರ್ ಪರೀಕ್ಷೆ ಪಾಸಾದ ವೆಂಕಟೇಶ್ ತಮ್ಮ ತಂದೆಯ ಸಲಹೆಯಂತೆ ಕ್ರಿಕೆಟ್‌ಗೆ ತಮ್ಮನ್ನು ಸಮರ್ಪಿಸಿಕೊಂಡರು.

‘ನಮ್ಮ ಕುಟುಂಬವು ಶಾಸ್ತ್ರೀಯ ಸಂಗೀತ ಮತ್ತು ನೃತ್ಯ-ಕಲಾವಿದರದ್ದು. ಹಿರಿಮಗ ವೆಂಕಟೇಶ್ ಮತ್ತು ಎರಡನೇ ಮಗ ಯೋಗೇಶ್ವರ್ ಕೂಡ ಸಂಗೀತ ಜೂನಿಯರ್ ಪರೀಕ್ಷೆ ಪಾಸಾದರು. ಯೋಗೇಶ್ವರ್ ಕನ್ನಡ ಟಿವಿ ಕಾರ್ಯಕ್ರಮಗಳಲ್ಲಿ ಮಿಂಚುತ್ತಿದ್ದಾರೆ. ಆರನೇ ವಯಸ್ಸಿನಿಂದಲೇ ಕ್ರಿಕೆಟ್ ಆಡುತ್ತಿದ್ದ ವೆಂಕಟೇಶ್ ಮಾತ್ರ ಆಟಕ್ಕೆ ಹೆಚ್ಚು ಆದ್ಯತೆ ಕೊಟ್ಟರು. ಬಹಳ ಶ್ರಮಪಟ್ಟು ಇಲ್ಲಿಯವರೆಗೆ ಬೆಳೆದಿದ್ದು ಸಂತಸ ತಂದಿದೆ’ ಎಂದು ವೆಂಕಟೇಶ್ ತಾಯಿ ದಾಕ್ಷಾಯಿಣಿ ಮುರಳೀಧರ್ ‘ಪ್ರಜಾವಾಣಿ’ಗೆ ಹೇಳಿದರು. ಶಾಸ್ತ್ರೀಯ ನೃತ್ಯ ಕಲಾವಿದೆಯಾಗಿರುವ ಅವರು ತರಬೇತಿ ನೀಡುತ್ತಿದ್ದರು.

‘ವೆಂಕಟೇಶ್ ಬಾಲ್ಯದಲ್ಲಿ ಕ್ರಿಕೆಟ್ ಆಸಕ್ತಿ ತೋರಿದ್ದರಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಮನ್ಸೂರ್ ಅಹಮದ್ ಅವರ ಬಳಿ ತರಬೇತಿ ಕೊಡಿಸಿದೆವು. ನಂತರ ಕೋಚ್ ಸುರೇಂದ್ರ ಅವರಲ್ಲಿ ತರಬೇತಿ ಪಡೆದ ವೆಂಕಟೇಶ್ ಪ್ರತಿಭೆಯನ್ನು ಗುರುತಿಸಿದವರು ಮೈಸೂರು ವಲಯದ ಮಾಜಿ ನಿಮಂತ್ರಕ ಬಾಲಚಂದರ್ ಅವರು. ವೆಂಕಟೇಶ್ ಮೊದಲು ಎಡಗೈ ಬ್ಯಾಟರ್ ಆಗಿದ್ದು, ಲೀಗ್‌ನ ಒಂದು ಪಂದ್ಯದಲ್ಲಿ ಶತಕ ಹೊಡೆದಿದ್ದರು. ನಂತರ ಬಲಗೈ ಮಧ್ಯಮವೇಗಿಯಾಗಿಯೂ ಗುರುತಿಸಿಕೊಂಡ ವೆಂಕಟೇಶ್ ವಿನೂ ಮಂಕಡ್ ಟ್ರೋಫಿ ಮತ್ತು ಕೂಚ್ ಬಿಹಾರ್ ಟ್ರೋಫಿ ಟೂರ್ನಿಯಲ್ಲಿ ಒಟ್ಟು 50 ವಿಕೆಟ್‌ಗಳನ್ನು ಗಳಿಸಿದರು. ಮೈಸೂರು ಜೊಜೊ ತಂಡದಲ್ಲಿಯೂ ತರಬೇತಿ ಪಡೆದಿದ್ದಾರೆ’ ಎಂದು ದಾಕ್ಷಾಯಿಣಿ ಹೇಳುತ್ತಾರೆ. ‘ಆಲ್‌ರೌಂಡರ್ ಆಗಿರುವ ವೆಂಕಟೇಶ್‌ಗೆ ಭಾರತ ತಂಡದ ನೀಲಿ ಪೋಷಾಕು ಧರಿಸುವ ಗುರಿ ಇದೆ’ ಎಂದೂ ಅವರು ಹೇಳಿದರು.

ಚಾಲೆಂಜರ್ ಟ್ರೋಫಿ ಟೂರ್ನಿಯಲ್ಲಿ ಇಂಡಿಯಾ ರೆಡ್ ತಂಡಕ್ಕೂ ಅವರು ಆಯ್ಕೆಯಾಗಿದ್ದರು. ಆದರೆ ಕಣಕ್ಕಿಳಿಯುವ ಅವಕಾಶ ಲಭಿಸಿರಲಿಲ್ಲ.

‘ಬ್ಯಾಟರ್‌ನಿಂದ ಬೌಲರ್ ಆಗಿ ಬೆಳೆಯಲು ಬಿಯುಸಿಸಿಯಲ್ಲಿ ಕೋಚ್ ಲಿಯಾನ್ ಖಾನ್ ಕಾರಣರಾದರು. ಅವರು ನನ್ನ ಪ್ರತಿಭೆಯನ್ನು ಗುರುತಿಸಿದರು. ಅದರಿಂದಾಗಿ ನನಗೆ ಬೆಳೆಯಲು ಸಾಧ್ಯವಾಗುತ್ತಿದೆ’ ಎಂದು ವೆಂಕಟೇಶ್ ತಿಳಿಸಿದರು.

ಟಿ20: ನ್ಯೂಜಿಲೆಂಡ್ ವಿರುದ್ಧದ ಕೊನೆಯ ಪಂದ್ಯ ಇಂದು

ಭಾರತಕ್ಕೆ ಸರಣಿ ಜಯದ ಗುರಿ

ಅಹಮದಾಬಾದ್ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಣ ಮೂರನೇ ಹಾಗೂ ಕೊನೆಯ ಟಿ20 ಪಂದ್ಯ ಬುಧವಾರ ನಡೆಯಲಿದ್ದು, ಸರಣಿ ಯಾರ ಕೈವಶವಾಗಲಿದೆ ಎಂಬ ಕುತೂಹಲ ಮೂಡಿದೆ.

ಮೊದಲ ಪಂದ್ಯವನ್ನು ನ್ಯೂಜಿಲೆಂಡ್ ಜಯಿಸಿದ್ದರೆ, ಲಖನೌದಲ್ಲಿ ನಡೆದಿದ್ದ ಎರಡನೇ ಪಂದ್ಯವನ್ನು ಗೆದ್ದು ಭಾರತ ಸಮಬಲ ಸಾಧಿಸಿತ್ತು. ತವರು ನೆಲದಲ್ಲಿ ಮತ್ತೊಂದು ಸರಣಿ ಗೆಲುವಿನ ಸಂಭ್ರಮ ಆಚರಿಸುವ ಸಿದ್ಧತೆಯೊಂದಿಗೆ ಹಾರ್ದಿಕ್ ಪಾಂಡ್ಯ ಬಳಗ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಕಣಕ್ಕಿಳಿಯಲಿದೆ.

ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ವಿಫಲವಾಗಿರುವ ಭಾರತದ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಒತ್ತಡದಲ್ಲೇ ಈ ಪಂದ್ಯ ಆಡಲಿದ್ದಾರೆ. ಯುವ ಆಟಗಾರರಾದ ಶುಭಮನ್ ಗಿಲ್, ಇಶಾನ್ ಕಿಶನ್ ಮತ್ತು ರಾಹುಲ್ ತ್ರಿಪಾಠಿ ಅವರು ಟಿ20 ಕ್ರಿಕೆಟ್‌ನಲ್ಲಿ ತಮಗೆ ದೊರೆತ ಅವಕಾಶಗಳನ್ನು ಸೂಕ್ತವಾಗಿ ಬಳಸಿಕೊಂಡಿಲ್ಲ.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರ ಬದಲು ಈ ಯುವ ಆಟಗಾರರಿಗೆ ತಂಡದಲ್ಲಿ ಸ್ಥಾನ ಲಭಿಸಿದೆ. ಆದರೆ ಏಕದಿನ ಪಂದ್ಯಗಳಲ್ಲಿ ತೋರಿದ್ದ ಅಬ್ಬರದ ಆಟ ಚುಟುಕು ಕ್ರಿಕೆಟ್‌ನಲ್ಲಿ ಮೂಡಿಬಂದಿಲ್ಲ.

ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ದ್ವಿಶತಕ ಸಾಧನೆ ಬಳಿಕ ಇಶಾನ್, ಬ್ಯಾಟಿಂಗ್ ಲಯ ಕಳೆದುಕೊಂಡಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ತೋರಿದ್ದ ಪ್ರದರ್ಶನವನ್ನು ಟಿ20 ಯಲ್ಲಿ ಪುನರಾವರ್ತಿಸಲು ಗಿಲ್ ಅವರಿಗೆ ಸಾಧ್ಯವಾಗಿಲ್ಲ. ಕೊಹ್ಲಿ ಬದಲು ಮೂರನೇ ಕ್ರಮಾಂಕದಲ್ಲಿ ಆಡುವ ಅವಕಾಶ ಪಡೆದಿರುವ ತ್ರಿಪಾಠಿ ಅವರೂ ಪ್ರಭಾವಿ ಎನಿಸಿಲ್ಲ.

ಈ ಪಂದ್ಯದ ಬಳಿಕ ಭಾರತ ತಂಡ, ಮುಂದಿನ ಕೆಲವು ತಿಂಗಳು ಯಾವುದೇ ಟಿ20 ಪಂದ್ಯ ಆಡುವುದಿಲ್ಲ. ಆದ್ದರಿಂದ ಅಬ್ಬರದ ಆಟವಾಡಿ ತಮ್ಮ ಸಾಮರ್ಥ್ಯ ತೋರಿಸಲು ಯುವ ಆಟಗಾರರಿಗೆ ಸಿಗುವ ಕೊನೆಯ ಅವಕಾಶ ಇದಾಗಿದೆ.

ಭಾರತವು ಹೆಚ್ಚಿನ ಪ್ರಯೋಗಗಳಿಗೆ ಮುಂದಾಗದೆ, 2ನೇ ಪಂದ್ಯದಲ್ಲಿ ಆಡಿದ ತಂಡವನ್ನೇ ಕಣಕ್ಕಿಳಿಸುವ ಸಾಧ್ಯತೆಯಿದೆ.

ಮತ್ತೊಂದೆಡೆ, ಭಾರತದ ನೆಲದಲ್ಲಿ ಸರಣಿ ಗೆಲುವೆಂಬ ಅಪರೂಪದ ಸಾಧನೆ ಮಾಡುವ ತವಕದೊಂದಿಗೆ ನ್ಯೂಜಿಲೆಂಡ್ ಆಟಗಾರರು ಈ ಪಂದ್ಯದಲ್ಲಿ ಆಡಲಿದ್ದಾರೆ. ಪ್ರವಾಸಿ ತಂಡವು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಿಂದ ಉತ್ತಮ ಆಟ ನಿರೀಕ್ಷಿಸುತ್ತಿದೆ. ಗ್ಲೆನ್ ಫಿಲಿಪ್ಸ್, ಮೈಕಲ್ ಬ್ರೇಸ್‌ವೆಲ್ ಮತ್ತು ಮಾರ್ಕ್ ಚಾಪ್‌ಮನ್ ಅವರು ಅಬ್ಬರದ ಆಟವಾಡಿದರೆ ಆತಿಥೇಯ ಬೌಲರ್‌ಗಳಿಗೆ ಸವಾಲು ಎದುರಾಗುವುದು ಖಚಿತ.

ಪಂದ್ಯ ಆರಂಭ: ಸಂಜೆ 7

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಭಾರತ ತಂಡದ ನಾಯಕ ಹಾರ್ದಿಕ್ ಪಾಂಡ್ಯ

ಲಖನೌ ಪಿಚ್ ಕ್ಯುರೇಟರ್ ವಜಾ

ನವದೆಹಲಿ (ಪಿಟಿಐ): ಭಾರತ– ನ್ಯೂಜಿಲೆಂಡ್ ನಡುವಣ ಎರಡನೇ ಟಿ20 ಕ್ರಿಕೆಟ್ ಪಂದ್ಯಕ್ಕೆ ಆತಿಥ್ಯ ವಹಿಸಿದ್ದ ಇಲ್ಲಿನ ಏಕನಾ ಕ್ರೀಡಾಂಗಣದ ಪಿಚ್ ಕ್ಯುರೇಟರ್‌ಅನ್ನು ವಜಾಗೊಳಿಸಲಾಗಿದೆ.

ಪಂದ್ಯಕ್ಕೆ ಸಿದ್ಧಪಡಿಸಿದ್ದ ಪಿಚ್ ಬಗ್ಗೆ ಭಾರತ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅಸಮಾಧಾನ ವ್ಯಕ್ತಪಡಿಸಿದ್ದರು.

‘ಪಿಚ್ ಸಿದ್ಧಪಡಿಸಿದ್ದ ಕ್ಯುರೇಟರ್‌ಅನ್ನು ವಜಾಗೊಳಿಸಲಾಗಿದ್ದು, ಅವರ ಜಾಗದಲ್ಲಿ ಸಂಜೀವ್ ಕುಮಾರ್ ಅಗರವಾಲ್ ಅವರನ್ನು ನೇಮಿಸಲಾಗಿದೆ’ ಎಂದು ಉತ್ತರ ಪ್ರದೇಶ ಕ್ರಿಕೆಟ್ ಸಂಸ್ಥೆ ಮೂಲಗಳು ಹೇಳಿವೆ.

‘ದೇಸಿ ಕ್ರಿಕೆಟ್ ಪಂದ್ಯಗಳಿಗೆ ಇಲ್ಲಿನ ಎಲ್ಲ ಪಿಚ್‌ಗಳನ್ನು ಬಳಸಲಾಗಿತ್ತು. ಅಂತರರಾಷ್ಟ್ರೀಯ ಪಂದ್ಯಕ್ಕಾಗಿ ಒಂದು ಅಥವಾ ಎರಡು ಪಿಚ್‌ಗಳನ್ನು ಮೀಸಲಿಡಬೇಕಿತ್ತು. ಅತಿಯಾಗಿ ಪಂದ್ಯಗಳನ್ನು ಆಡಿಸಿದ್ದರಿಂದ ಪಿಚ್ ತನ್ನ ಸ್ವರೂಪ ಕಳೆದುಕೊಂಡಿತ್ತು. ಅದನ್ನು ಸರಿಪಡಿಸಲು ಸಾಕಷ್ಟು ಕಾಲಾವಕಾಶ ಲಭಿಸಲಿಲ್ಲ’ ಎಂದು ಮೂಲಗಳು ತಿಳಿಸಿವೆ.

ಫುಟ್‌ಬಾಲ್: ಸ್ಟಾಫರ್ಡ್ ಚಾಲೆಂಜ್ ಕಪ್‌ಗೆ ಮರುಜೀವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅತ್ಯಂತ ಹಳೆಯ ಫುಟ್‌ಬಾಲ್ ಟೂರ್ನಿಗಳಲ್ಲಿ ಒಂದೆನಿಸಿರುವ ಸ್ಟಾಫರ್ಡ್ ಚಾಲೆಂಜ್ ಕಪ್‌ಗೆ ಮರುಜೀವ ನೀಡಲು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ನಿರ್ಧರಿಸಿದೆ.

30 ವರ್ಷಗಳ ಬಿಡುವಿನ ಬಳಿಕ ಟೂರ್ನಿ ನಡೆಸಲು ಉದ್ದೇಶಿಸಲಾಗಿದ್ದು, ಫೆ.23 ರಿಂದ ಮಾರ್ಚ್ 4ರ ವರೆಗೆ ಆಯೋಜನೆಯಾಗಿದೆ. ಎಲ್ಲ ಪಂದ್ಯಗಳಿಗೆ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣ ವೇದಿಕೆಯೊದಗಿಸಲಿದೆ.

‘1938 ರಲ್ಲಿ ಆರಂಭವಾಗಿದ್ದ ಸ್ಟಾಫರ್ಡ್ ಟ್ರೋಫಿ ಟೂರ್ನಿ 1993ರಲ್ಲಿ ಕೊನೆಯದಾಗಿ ನಡೆದಿತ್ತು. ಈ ಹಳೆಯ ಟೂರ್ನಿಯನ್ನು ಮತ್ತೆ ಆರಂಭಿಸಲು ತೀರ್ಮಾನಿಸಲಾಗಿದೆ. ಸಂತೋಷ್ ಟ್ರೋಫಿ ಮತ್ತು ಐ–ಲೀಗ್ ಟೂರ್ನಿಯ ನಡುವೆ ಲಭಿಸಿರುವ ಅಲ್ಪ ದಿನಗಳ ಬಿಡುವಿನಲ್ಲಿ ಈ ಬಾರಿ ಟೂರ್ನಿ ನಡೆಯಲಿದೆ. ಮುಂದಿನ ವರ್ಷದಿಂದ ಎಐಎಫ್‌ಎಫ್ ಕ್ಯಾಲೆಂಡರ್‌ನಲ್ಲಿ ಈ ಟೂರ್ನಿಯನ್ನೂ ಸೇರಿಸಲಾಗುವುದು’ ಎಂದು ಕೆಎಸ್‌ಎಫ್‌ಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಈ ಬಾರಿ 16 ತಂಡಗಳನ್ನು ಅಹ್ವಾನಿಸಲಾಗಿದ್ದು, ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ ಪಂದ್ಯ ನಡೆಸಲಾಗುವುದು. ಪ್ರತಿ ಗುಂಪಿನಲ್ಲಿ ಮೊದಲ ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ವಿಜೇತ ತಂಡಕ್ಕೆ ₹ 2.5 ಲಕ್ಷ, ರನ್ನರ್ಸ್ ಅಪ್‌ಗೆ ₹ 1.5 ಲಕ್ಷ ಹಾಗೂ ಸೆಮಿಫೈನಲ್ ಪ್ರವೇಶಿಸುವ ತಂಡಗಳಿಗೆ ತಲಾ ₹50 ಸಾವಿರ ಬಹುಮಾನ ನೀಡಲಾಗುವುದು’ ಎಂದರು.

ಪಾಲ್ಗೊಳ್ಳುವ ತಂಡಗಳು: ‘ಎ’ ಗುಂಪು: ಎಫ್‌ಸಿ ಬೆಂಗಳೂರು ಯುನೈಟೆಡ್, ಎಂಇಜಿ, ಡೆಂಪೊ ಎಫ್‌ಸಿ, ಇಂಟರ್ ನ್ಯಾಷನಲ್ ಎಫ್‌ಸಿ ಪಂಜಾಬ್

‘ಬಿ’ ಗುಂಪು: ರೂಟ್ಸ್ ಎಫ್‌ಸಿ, ಎಚ್‌ಎಎಲ್ ಸ್ಪೋರ್ಟ್ಸ್ ಕ್ಲಬ್, ಗೋಕುಲಂ ಕೇರಳ ಎಫ್‌ಸಿ, ಪಿಫಾ ಸ್ಪೋರ್ಟ್ಸ್ ಎಫ್‌ಸಿ

‘ಸಿ’ ಗುಂಪು: ಬೆಂಗಳೂರು ಎಫ್‌ಸಿ, ಕೆಂಕ್ರೆ ಎಫ್‌ಸಿ, ಶ್ರೀನಿಧಿ ಡೆಕ್ಕನ್ ಎಫ್‌ಸಿ, ಡೆಲ್ಲಿ ಎಫ್‌ಸಿ

‘ಡಿ’ ಗುಂಪು: ಕಿಕ್‌ಸ್ಟಾರ್ಟ್ ಎಫ್‌ಸಿ, ಚೆನ್ನೈಯಿನ್ ಎಫ್‌ಸಿ, ಅರಾ ಎಫ್‌ಸಿ, ಕೇರಳ ಯುನೈಟೆಡ್ ಎಫ್‌ಸಿ

ಲೆಸ್ಟರ್‌ಷೈರ್ ಪರ ರಹಾನೆ ಆಟ



ಲೆಸ್ಟರ್‌ಷೈರ್ (ಪಿಟಿಐ): ರಾಷ್ಟ್ರೀಯ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಬ್ಯಾಟರ್ ಅಜಿಂಕ್ಯ ರಹಾನೆ ಅವರು ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್‌ನಲ್ಲಿ ಲೆಸ್ಟರ್‌ಷೈರ್ ತಂಡದ ಪರ ಆಡಲಿದ್ದಾರೆ.

ಐಪಿಎಲ್ ಟೂರ್ನಿಯ ಬಳಿಕ ತಂಡವನ್ನು ಸೇರಿಕೊಳ್ಳಲಿರುವ ಅವರು ಈ ಋತುವಿನಲ್ಲಿ ಎಂಟು ಪಂದ್ಯಗಳನ್ನು ಆಡಲಿದ್ದಾರೆ. ಒನ್‌ಡೇ ಕಪ್ ಟೂರ್ನಿಯ ಎಲ್ಲ ಪಂದ್ಯಗಳಿಗೂ ಅವರು ಲಭ್ಯರಿದ್ದಾರೆ ಎಂದು ಲೆಸ್ಟರ್‌ಷೈರ್ ಕ್ಲಬ್ ಮಂಗಳವಾರ ತಿಳಿಸಿದೆ.

ರಹಾನೆ, ಕಳೆದ ವರ್ಷದ ಜನವರಿಯಲ್ಲಿ ಕೊನೆಯದಾಗಿ ಟೆಸ್ಟ್ ಪಂದ್ಯದಲ್ಲಿ ಆಡಿದ್ದರು. 2019 ರಲ್ಲಿ ಕೌಂಟಿ ಕ್ರಿಕೆಟ್‌ನಲ್ಲಿ ಹ್ಯಾಂಪ್‌ಷೈರ್ ತಂಡದ ಪರ ಆಡಿದ್ದರು.

ವಾಲಿಬಾಲ್: ಆತ್ಮವಿಶ್ವಾಸದಲ್ಲಿ ಟಾರ್ಪಿಡೋಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಆಟಗಾರರನ್ನು ತಂಡಕ್ಕೆ ಸೇರಿಸಿಕೊಂಡಿರುವ ಬೆಂಗಳೂರು ಟಾರ್ಪಿಡೋಸ್ ತಂಡ, ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ಲೀಗ್‌ನ ಎರಡನೇ ಆವೃತ್ತಿಯ ಟೂರ್ನಿ ಫೆ.4 ರಂದು ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ಯುವ ಹಾಗೂ ಅನುಭವಿ ಆಟಗಾರರನ್ನು ಒಳಗೊಂಡಿರುವ ಬೆಂಗಳೂರಿನ ತಂಡ ಮೊದಲ ಪಂದ್ಯದಲ್ಲಿ ಕೋಲ್ಕತ್ತ ಥಂಡರ್‌ಬೋಲ್ಟ್ಸ್ ವಿರುದ್ಧ ಪೈಪೋಟಿ ನಡೆಸಲಿದೆ.

ಟಾರ್ಪಿಡೋಸ್ ತಂಡವು ಅಮೆರಿಕದ ಡೇವಿಡ್ ಲೀ ಅವರನ್ನು ಕೋಚ್ ಆಗಿ ನೇಮಿಸಿದೆ. ಲೀ ಕಳೆದ ಆವೃತ್ತಿಯಲ್ಲಿ ಕ್ಯಾಲಿಕಟ್ ಹೀರೋಸ್ ಪರ ಆಡಿದ್ದರು.

ಮೊದಲ ಬಾರಿ ಕೋಚ್ ಆಗಿ ಕಾರ್ಯನಿರ್ವಹಿಸುವುದನ್ನು ಉತ್ಸುಕತೆಯಿಂದ ಎದುರು ನೋಡುತ್ತಿರುವುದಾಗಿ ಅವರು ಮಂಗಳವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮೊದಲ ಆವೃತ್ತಿಯ ಟೂರ್ನಿಯಲ್ಲಿ ಒಬ್ಬ ಆಟಗಾರನಾಗಿ ಪಾಲ್ಗೊಂಡದ್ದು ನನಗೆ ನೆರವಾಗಲಿದೆ. ಲೀಗ್‌ನಲ್ಲಿರುವ ಬಹುತೇಕ ಎಲ್ಲ ಆಟಗಾರರ ಶಕ್ತಿ ಹಾಗೂ ದೌರ್ಬಲ್ಯ ಏನೆಂಬುದನ್ನು ಗಮನಿಸಿದ್ದೇನೆ. ಆಟಗಾರರ ತಪ್ಪುಗಳನ್ನು ತಿದ್ದಿ, ತಂಡದ ಬಲ ಹೆಚ್ಚಿಸುವುದು ನನ್ನ ಗುರಿ’ ಎಂದು ಹೇಳಿದರು.

ಲೀ ಅವರು 3 ಸಲ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರು. 2008 ರ ಬೀಜಿಂಗ್ ಕೂಟದಲ್ಲಿ ಚಿನ್ನ ಹಾಗೂ 2016 ರಿಯೊ ಕೂಟದಲ್ಲಿ ಕಂಚು ಗೆದ್ದ ಅಮೆರಿಕ ತಂಡದ ಸದಸ್ಯರಾಗಿದ್ದರು.

ಟಾರ್ಪಿಡೋಸ್ ತಂಡ: ಅಲಿರೆಜಾ ಅಬಲೂಚ್, ಸ್ಟಿಟಲಿನ್ ಸ್ಟಿಟನೊವ್, ಟಿ.ಆರ್.ಸೇತು, ಎಂ.ಸಿ.ಮುಜೀಬ್, ಪಿ.ವಿ.ಜಿಷ್ಣು, ಇಬಿನ್ ಜೋಸ್, ಎ.ನಿಸಾಮ್ ಮುಹಮ್ಮದ್, ಸುಧೀರ್ ಶೆಟ್ಟಿ, ಎಂ.ವೈಶಾಖ್ ರೆಂಜಿತ್, ಪಂಕಜ್ ಶರ್ಮಾ, ವಿನಾಯಕ ರೋಖಡೆ, ಬಿ.ಮಿಥುನ್ ಕುಮಾರ್, ತರುಣ್ ಗೌಡ, ಸೃಜನ್ ಶೆಟ್ಟಿ. ಕೋಚ್: ಡೇವಿಡ್ ಲೀ



ಬೆಂಗಳೂರು ಟಾರ್ಪಿಡೋಸ್ ತಂಡದ ಆಟಗಾರ ವಿನಾಯಕ ರೋಖಡೆ, ಕೋಚ್ ಡೇವಿಡ್ ಲೀ, ಸಹ ಮಾಲೀಕ ಅಂಕಿತ್ ನಾಗೊರಿ ಮತ್ತು ನಾಯಕ ಪಂಕಜ್ ಶರ್ಮಾ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡರು

ರಾಜ್ಯ ಹಾಕಿ: ರಂಜಿತ್ ಮಿಂಚು

ಬೆಂಗಳೂರು: ರಂಜಿತ್ ಚಂದ್ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಗುರು ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಭರ್ಜರಿ ಗೆಲುವು ಸಾಧಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಗುರು ಕ್ಲಬ್ 7–2ರಿಂದ ಎಚ್‌ಎಂಟಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಗಂಗಾಧರ್ ರೆಡ್ಡಿ 4ನೇ ನಿಮಿಷ, ರಂಜಿತ್ 8, 31, 37 ಮತ್ತು 50ನೇ ನಿಮಿಷಗಳಲ್ಲಿ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು. ಮಹೇಶ್ ರೆಡ್ಡಿ (33ನೇ ನಿ.) ಮತ್ತು ರಾಮ್‌ಕುಮಾರ್ (40ನೇ ನಿ.) ತಲಾ ಒಂದು ಗೋಲು ದಾಖಲಿಸಿದರು. ಎಚ್‌ಎಂಟಿ ಪರ ತೇಸ್ವಿನ್ (35ನೇ ನಿ.) ಮತ್ತು ಅಖಿಲ್ (44ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಕರ್ನಾಟಕ ಅರಣ್ಯ ಇಲಾಖೆ ತಂಡವು 5–1ರಿಂದ ಯಂಗ್‌ಸ್ಟಾರ್ ಕ್ಲಬ್, ರಾಯಚೂರು ಎದುರು ಗೆದ್ದಿತು.

ಎ ಡಿವಿಷನ್ ಪಂದ್ಯಗಳು ಮಂಗಳವಾರ ಮುಕ್ತಾಯವಾಗಿದ್ದು, ಕರ್ನಾಟಕ ಅರಣ್ಯ ಇಲಾಖೆ ತಂಡವು ಮೊದಲ ಸ್ಥಾನ ಗಳಿಸಿತು. ಯಂಗ್‌ಸ್ಟಾರ್ ಎರಡು ಮತ್ತು ಗುರು ಕ್ಲಬ್ ಮೂರನೇ ಸ್ಥಾನ ಪಡೆದವು.

ಇಶಾನ್– ಸಾಯಿ ಶುಭಾರಂಭ

ಬ್ಯಾಂಕಾಕ್ (ಪಿಟಿಐ): ಭಾರತದ ಇಶಾನ್ ಭಟ್ನಾಗರ್ ಮತ್ತು ಸಾಯಿ ಪ್ರತೀಕ್ ಜೋಡಿಯು ಥಾಯ್ಲೆಂಡ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಎರಡನೇ ಸುತ್ತು ತಲುಪಿತು.

ಇಲ್ಲಿ ಮಂಗಳವಾರ ಆರಂಭವಾದ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾರತದ ಜೋಡಿ 21-18, 21-12ರಿಂದ ಅಮೆರಿಕದ ವಿನ್ಸನ್ ಚಿಯು ಮತ್ತು ಜೋಷುವಾ ಯುವಾನ್ ಅವರನ್ನು ಸೋಲಿಸಿತು.

ಮೈಸೂರು ರೇಸ್

ಮೂನ್‌ಲೈಟ್ ಕ್ವೀನ್ ಗೆಲ್ಲುವ ನಿರೀಕ್ಷೆ

ಮೈಸೂರು ಸಿಟಿ ಗೋಲ್ಡ್ ಕಪ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೂನ್‌ಲೈಟ್ ಕ್ವೀನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶಿವಾಲಿಕ್ ಧನುಶ್ 4, ಡೀಲ್ ಶೋ 11. ನಾಟ್ ಸೋ ನಾಟಿ 9

2ನೇ ರೇಸ್: ಸಮಯ್ ಬಲ್ವಾನ್ 8, ಕ್ರೆಸೆಂಡೊ 1, ಟಿಯಾ ಮಾರಿಯ 4

3ನೇ ರೇಸ್: ಆರೇಲಿಯಾ 1, ಎನ್.ಆರ್.ಐ ಪ್ಲಾನ್ 3, ಡಿ ದುರ್ಗ 4

4ನೇ ರೇಸ್: ಸನ್‌ಲೈಟ್ ಸ್ಟಾರ್ಮ್ 5, ಕೊಯೊಟೆ ಗರ್ಲ್ 1, ಡಿ ಅಡ್ಮಿರಲ್ 4

5ನೇ ರೇಸ್: ಮೂನ್‌ಲೈಟ್ ಕ್ವೀನ್ 9, ಗಿಲ್ಡೆಡ್ ಬಟರ್‌ಫ್ಲೈ 7, ಸ್ವಾಗತಮ್ 1

6ನೇ ರೇಸ್: ಎಲೂಸಿವ್ ಗರ್ಲ್ 10, ಜೆಮಿನಿ 11, ಫ್ಲಾಶ್ ಬಾಂಡ್ 8

7ನೇ ರೇಸ್: ಮ್ಯಾಜಿಕ್ ಸರ್ಕಲ್ 12, ಡೀಮಸ್ 11, ಲವ್ಲಿ ಥಾಟ್ಸ್ 8

ಉತ್ತಮ ಬೆಟ್: ಸನ್‌ಲೈಟ್ ಸ್ಟಾರ್ಮ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸಂಕ್ಷಿಪ್ತ ಸುದ್ದಿ

ಕುಸ್ತಿ: ಮೇಲುಸ್ತುವಾರಿ ಸಮಿತಿಗೆ ಬಬಿತಾ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮೇಲಿನ ಆರೋಪಗಳ ತನಿಖೆಗೆ ಕ್ರೀಡಾ ಸಚಿವಾಲಯ ನೇಮಿಸಿರುವ ಮೇಲುಸ್ತುವಾರಿ ಸಮಿತಿಯಲ್ಲಿ ಕಾಮನ್‌ವೆಲ್ತ್ ಕೂಟದ ಚಿನ್ನದ ಪದಕ ವಿಜೇತ ಕುಸ್ತಿಪಟು ಬಬಿತಾ ಪೋಗಟ್ ಅವರಿಗೆ ಸ್ಥಾನ ನೀಡಲಾಗಿದೆ.

‘ಡಬ್ಲ್ಯುಎಫ್‌ಐ ಆಡಳಿತ ನೋಡಿಕೊಳ್ಳಲು ನೇಮಿಸಿರುವ ಸಮಿತಿಗೆ ಕುಸ್ತಿಪಟು ಬಬಿತಾ ಪೋಗಟ್ ಅವರನ್ನೂ ಸೇರಿಸಿಕೊಳ್ಳಲಾಗಿದೆ’ ಎಂದು ಕ್ರೀಡಾ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಇದರಿಂದ ಬಾಕ್ಸರ್ ಎಂ.ಸಿ.ಮೇರಿಕೋಮ್ ನೇತೃತ್ವದ ಸಮಿತಿಯಲ್ಲಿರುವ ಸದಸ್ಯರ ಸಂಖ್ಯೆ ಆರಕ್ಕೇರಿದೆ.

ಟಿಟಿ: ಕ್ವಾರ್ಟರ್ ಫೈನಲ್‌ಗೆ ಯಶಸ್ವಿನಿ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಮಧ್ಯಪ್ರದೇಶದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.ಮಂಗಳವಾರ ನಡೆದ ಬಾಲಕಿಯರ ವಿಭಾಗದ ಗುಂಪು ಹಂತದ ಎರಡನೇ ಪಂದ್ಯದಲ್ಲಿ ಅವರು 1-5, 11-7, 7-11, 11-7 ರಲ್ಲಿ ಮಹಾರಾಷ್ಟ್ರದ ಜೆನಿಫರ್ ವರ್ಗೀಸ್ ವಿರುದ್ಧ ಗೆದ್ದರು.

ಕೊಕ್ಕೊ ತಂಡಕ್ಕೆ ಗೆಲುವು: ಕೊಕ್ಕೊ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಕರ್ನಾಟಕ 32–22 ರಲ್ಲಿ ರಾಜಸ್ಥಾನ ತಂಡವನ್ನು ಮಣಿಸಿತು.

20ರಿಂದ ಬೆಂಗಳೂರು ಓಪನ್ ಟೆನಿಸ್

ಬೆಂಗಳೂರು: ಐದನೇ ಆವೃತ್ತಿಯ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯು ಫೆಬ್ರುವರಿ 20ರಿಂದ 26ರವರೆಗೆ ನಡೆಯಲಿದೆ. ಫ್ರಾನ್ಸ್‌ನ ಲೂಕಾಸ್ ಪೊಯಿಲ್ ಮತ್ತು ಕಳೆದ ಬಾರಿಯ ಚಾಂಪಿಯನ್, ತೈವಾನ್‌ನ ಚುನ್ ಸಿನ್ ತ್ಸೆಂಗ್ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು ಎಟಿಪಿ ಚಾಲೆಂಜರ್ ಟೂರ್ನಿಯನ್ನು ಆಯೋಜಿಸಲಿದೆ.

‘ಬೆಂಗಳೂರು ಟೆನಿಸ್ ಆಟಗಾರರ ನೆಚ್ಚಿನ ತಾಣವಾಗಿದೆ. ಆಟಗಾರರ ಉತ್ಸುಕತೆ ನೋಡಲು ನಮಗೆ ಸಂತೋಷವಾಗುತ್ತದೆ’ ಎಂದು ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.